
ಪುಸ್ತಕ ಪ್ರಪಂಚ

ಅಕ್ಟೋಬರ್-೧೯೯೬



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೭ ಸಂಚಿಕೆ ೧

ಅಕ್ಟೋಬರ್-೧೯೯೬

ಮುಖ ಚಿತ್ರ :
ಮಹಾತ್ಮ ಗಾಂಧೀಜಿ
ರಕ್ಷಾಪುಟ ನಾಲ್ಕು : ಐನ್‌ಸ್ಟೈನ್

ಪರಿವಿಡಿ

PUSTAKA PRAPANCHA: Monthly

Published and printed by Karnataka State Adult Education Council, Mysore-6. Price : Rupees Six

ಬಿಡಿಪ್ರತಿ: ರೂ. ೬

ವಾರ್ಷಿಕ ಚಂದಾ: ರೂ. ೬೦

ಆಜೀವ ಸದಸ್ಯತ್ವ ಚಂದಾ:

ವ್ಯಕ್ತಿಗೆ: ರೂ. ೪೦೦

ಸಂಸ್ಥೆಗೆ: ರೂ. ೬೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು-೫೭೦ ೦೦೬

ವಿಜ್ಞಾನಿ ಐನ್‌ಸ್ಟೈನ್ ದೃಷ್ಟಿಯಲ್ಲಿ ಮಹಾತ್ಮ ಗಾಂಧಿ

ಜಿ. ಟಿ. ನಾರಾಯಣರಾವ್

ವಿಜ್ಞಾನದಲ್ಲಿ ಸೀಮಾಪುರುಷ ಐನ್‌ಸ್ಟೈನ್. ರಾಜಕಾರಣದಲ್ಲಿ ಯುಗಪುರುಷ ಗಾಂಧಿ. ಹಿಟ್ಲರನ ನಾಟ್ಸೀ ನರಹಂತಕರ ಎದುರು ನಿಂತ ಯುಗಪ್ರಜ್ಞೆ ಐನ್‌ಸ್ಟೈನ್. ಬ್ರಿಟಿಷರ ಪಾಶವೀಯತೆಯನ್ನು ಅಹಿಂಸಾ ಮಾರ್ಗದಲ್ಲಿ ಪ್ರತಿಭಟಿಸಿ ಭಾರತೀಯರನ್ನು ಸಂಘಟಿಸಿ ಅವರಲ್ಲಿ ಸ್ವಾಭಿಮಾನ ಪ್ರವರ್ಧಿಸಿ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಮಹಾ ಮಾನವ ಗಾಂಧಿ. ಉಭಯರಿಗೂ ಸಾಮಾನ್ಯವಾದದ್ದು ಮಾನವೀಯತೆ. ಮಾನವೀಯತೆ ಇರದ ವಿಜ್ಞಾನ ಭಸ್ಮಾಸುರನಿಗೆ ಒದಗಿದ ವರ. ಮಾನವೀಯತೆ ಇರದ ರಾಜಕಾರಣ ರಾವಣಾಸುರನಿಗೆ ಲಭಿಸಿದ ವರ. ಎಂದೇ ಈ ಮಾನವಮೇರುದ್ವಯರು, ಖುದ್ದು ಇವರ ನೇರ ಅನುಯಾಯಿಗಳು ಇವರನ್ನು ಅರಿತದ್ದಕ್ಕಿಂತಲೂ ಹೆಚ್ಚು ಆಳವಾಗಿ, ಪರಸ್ಪರ ಅರ್ಥವಿಸಿಕೊಂಡು ಹೃದಯ ಸಂವಾದಲೀನರಾಗಿದ್ದರು. ಪ್ರಸಕ್ತ ಲೇಖನದಲ್ಲಿ ಈ 'ಸಂವಾದ'ದ ಮುಖ್ಯ ಅಂಶಗಳನ್ನು ಪ್ರಕಟಿಸಿದೆ.

ರುದ್ರ: ವಾಸುದೇವ, ಮುಂದಾವ ಕಾವ್ಯಮಂ ಕಟ್ಟುವಯ್ !
ಕೃಷ್ಣ: ಕಲಿಯುಗ ಮಹಾಕಾವ್ಯಮನ್ ! ನಾಳೆಯೆ ಪೀಠಿಕಾ
ದೃಶ್ಯಾರಂಭಂ ; ಕಲಿಯುಗ ಪ್ರಾರಂಭಂ !
ರುದ್ರ: ರಸಮೂರ್ತಿ, ನೋಡಲಾಟಿಪೆನ್ ಆ ಕಥಾಸಂವಿಧಾನಮನ್
ಕೃಷ್ಣ: ತೋರ್ದಪೆನ್ ದಿವ್ಯ ದರ್ಶನಮನ್. ಕಾಣದೋ ಮತ್ತೆ
ಜೀತಂ ಕಲಿಯುಗ ಮಹಾಲಲಿತಕಾವ್ಯಂ
...ಪಿಶಿತಾಶಾಕ್ರಾಂತ ಭಾರತವರ್ಷಂ...ದಾರಿದ್ರ್ಯಂ...
ದೌರ್ಬಲ್ಯಂ...ಶ್ರೀರಾಮಕೃಷ್ಣ ಪರಮಹಂಸನ್...
ಸರ್ವಧರ್ಮ ಸಮನ್ವಯಾಚಾರ್ಯನ್...ವಿವೇಕಾನಂದನ್
ಸ್ವಾತಂತ್ರ್ಯಸಂಗ್ರಾಮಂ...ಅಹಿಂಸಾವ್ರತಂ...
ಮಹಾತ್ಮನ್...ಸತ್ಯಾಗ್ರಹಂ !...
...ಸ್ವತಂತ್ರ ಭಾರತರಂಗಂ...ಸರ್ವಪ್ರಜಾಧಿಪತ್ಯಂ...
ಸರ್ವ ಸಮತ್ವಂ...ಜಗತ್ ಕಲ್ಯಾಣಂ...

ಕುವೆಂಪು ಕೃತ "ಶ್ಮಶಾನ ಕುರುಕ್ಷೇತ್ರಂ" (೧೯೩೦)

“ಇಪ್ಪತ್ತನೆಯ ಶತಮಾನವನ್ನು ಪ್ರತಿನಿಧಿಸಬಲ್ಲ ಪರಮೋನ್ನತ ಮಾನವತಾವಾದಿಗಳು ಯಾರು?” ಎಂಬ ಪ್ರಶ್ನೆಯನ್ನು ಮುಂಬರಲಿರುವ ಶತಮಾನಗಳ ಇತಿಹಾಸಕಾರರು ತಮಗೆ ತಾವೇ ಹಾಕಿಕೊಂಡರೆ, ಅವರು ತಮ್ಮ ಶೋಧನೆಗೆ ವಿಧಿಸಿಕೊಳ್ಳುವ ನಿರ್ಬಂಧಗಳು ಏನೇ ಇದ್ದರೂ, ಎರಡು ಹೆಸರುಗಳಂತೂ ವಿವಾದಾತೀತವಾಗಿ ಎದ್ದು ನಿಲ್ಲುವುದು ಶತಸ್ಸಿದ್ಧ: ಮೋಹನದಾಸ ಕರಮಚಂದಗಾಂಧಿ (೧೮೬೯ – ೧೯೪೮), ಆಲ್ಬರ್ಟ್ ಐನ್‌ಸ್ಟೈನ್ (೧೮೭೯–೧೯೫೫).

ಲಿಂಕನ್ ಬಾರ್ನೆಟ್ ೧೯೪೮ರಲ್ಲಿ ಪ್ರಕಟಿಸಿದ “ದಿ ಯೂನಿವರ್ಸ್ ಅಂಡ್ ಡಾ|| ಐನ್‌ಸ್ಟೈನ್” ಗ್ರಂಥದ ಮೊದಲ ಎರಡು ಪರಿಚ್ಛೇದಗಳು:

“ಯುಗಯುಗಗಳ ಆರುನೂರು ಮಂದಿ ಮಹಾಪುರುಷರ, ಸಂತರ, ತತ್ತ್ವಜ್ಞಾನಿಗಳ ರಾಜರ—ಆಕೃತಿಗಳು, ನ್ಯೂಯಾರ್ಕ್ ರಿವರ್ಸೈಡ್ ಇಗರ್ಜಿಯ ಶ್ವೇತಭಿತ್ತಿಗಳ ಮೇಲೆ, ಸುಣ್ಣಗಲ್ಲಿನಲ್ಲಿ ಕಂಡರಿಸಲ್ಪಟ್ಟು ಅಮರತ್ವ ಪಡೆದು, ಶಾಶ್ವತ ಮೂಕನೇತ್ರಗಳಿಂದ ಕಾಲ ಮತ್ತು ಆಕಾಶವನ್ನು ಸರ್ವೇಕ್ಷಿಸುತ್ತಿವೆ. ಇಲ್ಲಿಯ ಒಂದು ಅಂಕಣ, ಶತಮಾನಗಳ ಬೀಸಿನಿಂದ ಆಯ್ದ, ಹದಿನಾಲ್ಕು ಮಂದಿ ವಿಜ್ಞಾನ ಸೀಮಾಪುರುಷರಿಂದ ಅಲಂಕೃತವಾಗಿದೆ—ಕ್ರಿಸ್ತಪೂರ್ವ ೩೭೦ರ ಸುಮಾರಿಗೆ ಗತಿಸಿದ ಹಿಪ್ಪೊಕ್ರೇಟಸ್‌ನಿಂದ ತೊಡಗಿ ಮಾರ್ಚ್ ೧೯೪೯ರಲ್ಲಿ ಎಪ್ಪತ್ತು ತುಂಬಲಿರುವ ಆಲ್ಬರ್ಟ್ ಐನ್‌ಸ್ಟೈನ್‌ವರೆಗೆ. ಈ ಚರಿತ್ರಾರ್ಹ ಪುಣ್ಯಶ್ಲೋಕರ ಶಿಲ್ಪಪ್ರದರ್ಶನದಲ್ಲಿ ಐನ್‌ಸ್ಟೈನ್ ಒಬ್ಬರೇ ಜೀವಂತ ವ್ಯಕ್ತಿ ಎಂಬುದು ಗಮನಿಸಬೇಕಾದ ಸಂಗತಿ.

“ಇಷ್ಟೇ ಗಮನಾರ್ಹವಾದ ಇನ್ನೊಂದು ಸಂಗತಿ ಎಂದರೆ ಮ್ಯಾನ್‌ಹ್ಯಾಟನ್ನಿನ ಅತ್ಯಂತ ಪ್ರೇಕ್ಷಣೀಯವಾದ ಪ್ರಾಟೆಸ್ಟೆಂಟ್ ಇಗರ್ಜಿಯಲ್ಲಿ ವಾರವಾರ ಪೂಜೆ ಸಲ್ಲಿಸುವ ಸಾವಿರಾರು ಜನರ ಪೈಕಿ ಪ್ರಾಯಶಃ ಶೇಕಡಾ ೯೯ ಮಂದಿಯೂ ಅಲ್ಲಿ ಐನ್‌ಸ್ಟೈನರ ಪ್ರತಿಮೆ ಏಕೆ ಇದೆ ಎನ್ನುವುದನ್ನು ವಿವರಿಸಲು ಶಕ್ತರಾಗರು ಎಂಬುದು ಕೂಡ. ಒಂದು ತಲೆಮಾರಿನ ಹಿಂದೆ ಆ ಇಗರ್ಜಿಯ ಪ್ರತಿಮಾಶಿಲ್ಪವನ್ನು ಯೋಜಿಸುತ್ತಿದ್ದಾಗ ಡಾ|| ಹ್ಯಾರಿ ಎಮರ್ಸನ್ ಫಾಸ್ಡಿಕ್ ಅವರು, ರಾಷ್ಟ್ರದ ಉಚ್ಚ ವಿಜ್ಞಾನಿಗಳ ತಂಡಕ್ಕೆ, ವಿಜ್ಞಾನೇತಿಹಾಸದಲ್ಲಿ ಎದ್ದು ಕಾಣುವ ಹದಿನಾಲ್ಕು ಮಂದಿ ಸರ್ವಶ್ರೇಷ್ಠರ ಹೆಸರುಗಳಿರುವ ಯಾದಿಗಳನ್ನು ತಯಾರಿಸಿ ತನಗೆ ಒಪ್ಪಿಸಬೇಕೆಂದು ಕೋರಿ ಪತ್ರ ಬರೆದರು. ವಿಜ್ಞಾನಿಗಳಿಂದ ಬಂದ ಆಯ್ಕೆ ಪಟ್ಟಿಗಳಲ್ಲಿ ಒಮ್ಮತವಿರಲಿಲ್ಲ. ಹೆಚ್ಚಿನವುಗಳಲ್ಲಿ ಆರ್ಕಿಮಿಡೀಸ್, ಯೂಕ್ಲಿಡ್, ಗೆಲಿಲಿಯೋ ಮತ್ತು ನ್ಯೂಟನ್ ಹೆಸರುಗಳಿದ್ದುವು. ಆದರೆ ಪ್ರತಿಯೊಂದರಲ್ಲಿಯೂ ಐನ್‌ಸ್ಟೈನ್ ನಾಮ ಮಾತ್ರ ಇದ್ದೇ ಇತ್ತು.”

ಐನ್‌ಸ್ಟೈನರ ಕೊಠಡಿಯಲ್ಲಿ ಮಾಮೂಲಾಗಿ ಇರುತ್ತಿದ್ದುದು ಇಬ್ಬರು ವಿಜ್ಞಾನ ಸೀಮಾಪುರುಷರ ಚಿತ್ರಗಳು: ಐಸಾಕ್ ನ್ಯೂಟನ್ (೧೬೪೨–೧೭೨೭), ಜೇಮ್ಸ್ ಕ್ಲರ್ಕ್ ಮ್ಯಾಕ್ಸ್‌ವೆಲ್ (೧೮೩೧–೭೯). ಆದರೆ ಬಾಳಸಂಜೆ ಕವಿಯುತ್ತಿದ್ದಂತೆ ಇವುಗಳ ನೆಲೆಗಳಲ್ಲಿ ಮಹಾತ್ಮ ಗಾಂಧಿ ಮತ್ತು ಒಬ್ಬ ಜರ್ಮನ್ ಸಂಗೀತವಿದ (ಯೋಹನ್

ಸೆಬಾಸ್ಟಿಯನ್ ಬಾಕ್, ೧೬೮೫–೧೭೫೦, ಅಥವಾ ವೂಲ್ಫ್‌ಗಾಂಗ್ ಅಮೇಡ್ಯೂಸ್ ಮೊರ್ಝಾರ್ಟ್,(೧೭೫೬–೯೧) ಇವರ ಚಿತ್ರಗಳು ಒಪ್ಪುತ್ತಿದ್ದುವು. ಮೌಲ್ಯ ತಳರೂಪಿಕೆಯ ಈ ಸ್ಥಾನಪಲ್ಲಟದ ಅರ್ಥವೇನು? ಹೃದಯ ನಿಯಂತ್ರಿತ ವಿಮುಳೀ ಋಜುಜೀವನ ಎಂದಾಗಿರಬಹುದೇ?

"ನಮ್ಮ ಯುಗದ ಪರಮೋತ್ಕೃಷ್ಟ ವ್ಯಕ್ತಿ ಗಾಂಧಿ" ಎಂದು ಐನ್‌ಸ್ಟೈನ್ ಪದೇ ಪದೇ ಹೇಳುತ್ತಿದ್ದರು. ಗಾಂಧೀಜಿಯ ಚಿಂತನ ಧಾಟಿಯನ್ನೂ ಕಾರ್ಯವಿಧಾನವನ್ನೂ ಅವರು ತುಂಬ ಮೆಚ್ಚಿಕೊಂಡಿದ್ದರು. ಈ ಮೇರು ಮಾನವರಿಗೆ ಪ್ರತ್ಯಕ್ಷ ಭೇಟಿ ಆಗುವ ಅವಕಾಶ ಒದಗಲೇ ಇಲ್ಲ.

೨೭–೯–೧೯೩೧ರಂದು ಐನ್‌ಸ್ಟೈನ್ ಗಾಂಧೀಜಿಗೆ ಕಾಗದ ಬರೆದರು: "ಹಿಂಸೆಯನ್ನು ಪ್ರಯುಕ್ತಿಸದೆಯೂ ಗುರಿಸಾಧಿಸಬಲ್ಲೆವು ಎಂಬುದನ್ನು ನಿಮ್ಮ ಸಮಸ್ತ ಪ್ರಯೋಗದಿಂದ ತೋರಿಸಿಕೊಟ್ಟಿರುವಿರಿ. ಹಿಂಸೆಯ ಆರಾಧಕರನ್ನು ಅಹಿಂಸಾತ್ಮಕ ವಿಧಾನದಿಂದ ಗೆಲ್ಲಬಲ್ಲೆವು. ಹಿಂಸಾಧಾರಿತ ಘರ್ಷಣೆಯನ್ನು ಹತ್ತಿಕ್ಕಲು ಮತ್ತು ಅಂತಾರಾಷ್ಟ್ರೀಯ ಸಹಾಯ ಮತ್ತು ಸಹಕಾರದೊಡನೆ ಪ್ರಪಂಚ ಶಾಂತಿಯನ್ನು ಖಾತರಿಗೊಳಿಸಲು ನಿಮ್ಮ ನಿದರ್ಶನ ಸ್ಫೂರ್ತಿದಾಯಕವಾಗಿದೆ ಮತ್ತು ಸಹಾಯಕವಾಗಿದೆ. ನಿಮ್ಮ ಬಗೆಗಿನ ನನ್ನ ನಿಷ್ಠೆ ಮತ್ತು ಗೌರವವನ್ನು ಹೀಗೆ ವ್ಯಕ್ತಪಡಿಸುತ್ತ ನಿಮ್ಮನ್ನು ಮುಖತಃ ಭೇಟಿ ಆಗುವುದು ಸಾಧ್ಯವಾದೀತೆಂದು ಆಶಿಸುತ್ತೇನೆ."

ಗಾಂಧೀಜಿ ಲಂಡನ್ನಿನಿಂದ ೧೮–೧೦–೧೯೩೧ರಂದು ಐನ್‌ಸ್ಟೈನರಿಗೆ ಮಾರೋಲೆ ಬರೆದರು: "ಸುಂದರಂ ಮೂಲಕ ಕಳಿಸಿಕೊಟ್ಟ ನಿಮ್ಮ ಸುಂದರ ಪತ್ರದಿಂದ ಹರ್ಷಿತನಾಗಿದ್ದೇನೆ. ನಾನು ಮಾಡುತ್ತಿರುವ ಕಾರ್ಯ ನಿಮ್ಮ ದೃಷ್ಟಿಯಲ್ಲಿ ಮೆಚ್ಚುಗೆಗಳಿಸಿದೆ ಎಂಬುದು ಬಲು ಸಮಾಧಾನದ ಸಂಗತಿ. ನಾವು ಮುಖತಃ ಭೇಟಿ ಆದೇವು, ಅದೂ ಭಾರತದಲ್ಲಿಯ ನನ್ನ ಆಶ್ರಮದಲ್ಲಿ, ಎಂಬುದಾಗಿ ಖಾತರಿ ನಂಬಿದ್ದೇನೆ."

ಗಾಂಧೀಜಿ ಸ್ವಿಟ್ಸರ್ಲೆಂಡಿನ ಲೋಸಾನಿನಲ್ಲಿದ್ದಾಗ, ೮–೧೨–೧೯೩೧, ಒಬ್ಬ ಪತ್ರಿಕಾ ಪ್ರತಿನಿಧಿ ಇವರನ್ನು ಒಂದು ಪ್ರಶ್ನೆ ಕೇಳಿದ: "ಯುದ್ಧದಲ್ಲಿ ಭಾಗಿಗಳಾಗಬಾರದೆಂಬುದಾಗಿ ಜನತೆಗೆ ಐನ್‌ಸ್ಟೈನ್ ಕರೆ ಕೊಟ್ಟುದರ ಬಗ್ಗೆ ನೀವೇನೆನ್ನುವಿರಿ?"

ಗಾಂಧೀಜಿ: "ನನ್ನ ಜವಾಬು ಸದಾ ಒಂದೇ. ಯೂರೊಪ್ ಆ ಹಾದಿಯನ್ನು ಹಿಡಿಯುವುದಾದ ಪಕ್ಷ ಐನ್‌ಸ್ಟೈನ್ ಆ ವಿಧಾನವನ್ನು ನನ್ನಿಂದ 'ಅಪಹರಿಸಿ'ರುವರೆಂದು ಮಾತ್ರ ಹೇಳಬಲ್ಲೆ. ನನ್ನ ಚಿಂತನೆಯನ್ನು ಸ್ವಲ್ಪ ವಿಸ್ತರಿಸಿ ವಿವರಿಸಬೇಕೆಂದು ನೀವು ಅಪೇಕ್ಷಿಸಿದಲ್ಲಿ ಆ ವಿಧಾನ ಏನೆಂಬುದನ್ನು ಕೊಂಚ ಆಳವಾಗಿ ವಿಶದೀಕರಿಸುತ್ತೇನೆ. ಸೇನಾಸೇವೆ ಸಲ್ಲಿಸಲು ವ್ಯಕ್ತಿಯ ಸರದಿ ಬಂದಾಗ ಅದನ್ನು ನಿರಾಕರಿಸುವುದು, ಹೆಚ್ಚು ಕಡಿಮೆ, ದೌಷ್ಟ್ಯವನ್ನು ವಿರೋಧಿಸಲು ದೊರೆತಿದ್ದ ಎಲ್ಲ ವೇಳೆಯೂ ಸಂದು ಹೋದ ಬಳಿಕ ಎಚ್ಚರಗೊಂಡುದಕ್ಕೆ ಸಮಾನವಾಗುತ್ತದೆ. ವ್ಯಾಧಿ ಇನ್ನೂ ತೀವ್ರತರವಾಗಿದೆ. ಜನಾಂಗಹತ್ಯಾಕ್ರಿಯೆಯನ್ನು ಕುರಿತು ಹೇಳುವುದಾದರೆ ಸೇನಾಸೇವೆಯ ನೋಂದಣಿ ಪುಸ್ತಕದಲ್ಲಿ ದಾಖಲುಗೊಳ್ಳದವರು ಕೂಡ ದಾಖಲುಗೊಂಡವರಷ್ಟೇ

ಅಪರಾಧಭಾಗಿಗಳು ಎನ್ನಬೇಕಾಗುತ್ತದೆ. ಎಂದೇ ಹತ್ಯಾಕಾಂಡದ ಉದ್ದೇಶವಿರಿಸಿಕೊಂಡಿರುವ ಸುಸಂಘಟಿತ ರಾಷ್ಟ್ರವೊಂದನ್ನು ಪ್ರತ್ಯಕ್ಷ ಅಥವಾ ಪರೋಕ್ಷ ಬೆಂಬಲಿಸುವ ಯಾರೇ ಆಗಲಿ ಈ ಪಾಪ ಕಾರ್ಯದಲ್ಲಿ ಸ್ವತಃ ಉದ್ಯುಕ್ತನಾದವನೇ ಆಗಿರುತ್ತಾನೆ. ಘೋರಾಪಾಯಯುಕ್ತ ಸನ್ನಿವೇಶವಿದು. ರಾಷ್ಟ್ರಕ್ಕೆ ತನ್ನ ದೇಣಿಗೆ ಸಲ್ಲಿಸುವುದರ ಮೂಲಕ, ಅಂದರೆ ತೆರಿಗೆ ಪಾವತಿಸುವುದರ ಮೂಲಕ, ಪ್ರತಿಯೊಬ್ಬನೂ—ಆತ ಎಳೆಯನೇ ಇರಲಿ ಹಿರಿಯನೇ ಇರಲಿ—ಈ ಪಾಪ ಕಾರ್ಯದಲ್ಲಿ ಭಾಗಿ ಆಗುತ್ತಿರುವನೆಂಬುದನ್ನು ಗಮನಿಸಿದ ನಾನು, ಎಲ್ಲಿಯ ತನಕ ನಾನು ನೌಕಾಬಲ ಒದಗಿಸುವ ಗೋದಿ ತಿನ್ನುತ್ತಿರುವೆನೋ ಅಲ್ಲಿಯ ತನಕ ಪ್ರತ್ಯಕ್ಷ ಸೈನಿಕನಂತಲ್ಲದಿದ್ದರೂ ಬೇರೆ ಎಲ್ಲ ರೀತಿಯಲ್ಲಿಯೂ ಯುದ್ಧಭಾಗಿಯಾಗಿರುವುದಂತೂ ದಿಟ. ಇಂಥ ಸನ್ನಿವೇಶದಲ್ಲಿ ಗುಂಡೇಟಿನಿಂದ ವಧಿಸಲ್ಪಡುವುದೇ ನನಗೆ ತಕ್ಕುದಾದ ಶಿಕ್ಷೆ ಎಂದು ಹೇಳಿದ್ದುಂಟು. ಇಲ್ಲವಾದಲ್ಲಿ ನಾನು ಗುಡ್ಡಬೆಟ್ಟಗಳಿಗೆ ನಿರ್ಗಮಿಸಿ ನಿಸರ್ಗ ಒದಗಿಸುವ ಆಹಾರ ಪದಾರ್ಥಗಳನ್ನು ಮಾತ್ರ ಸೇವಿಸುತ್ತಿರಬೇಕು. ಇದು ಹೇಗೊ ಹಾಗೆ, ಸೇನಾಸೇವೆಯನ್ನು ನಿಲ್ಲಿಸಬೇಕೆಂದು ಬಯಸುವ ಎಲ್ಲರೂ ಸಮಸ್ತ ಸೇನಾಸಹಕಾರವನ್ನು ಹಿಂತೆಗೆದುಕೊಂಡು ತಮ್ಮ ಅಭೀಪ್ಸೆಯನ್ನು ಕಾರ್ಯರೂಪಕ್ಕೆ ಇಳಿಸುವುದು ಸಾಧ್ಯ. ಸೇನಾಸೇವೆಯನ್ನು ನಿರಾಕರಿಸುವುದು, ರಾಷ್ಟ್ರವನ್ನು ಬೆಂಬಲಿಸುವ ಸಮಗ್ರ ವ್ಯವಸ್ಥೆಯೊಡನೆ ಅಸಹಕಾರ ಪ್ರದರ್ಶಿಸುವುದಕ್ಕಿಂತ ಎಷ್ಟೋ ಮಡಿ ಲಘುವಾದದ್ದು, ತೆಳುವಾದದ್ದು ಮತ್ತು ತೀರ ಮೇಲು ಪದರದ್ದು. ಆದರೆ ಅಸಹಕಾರ ಪ್ರದರ್ಶಿಸಿದಾಗ ನಿಮಗೆ ಒದಗುವ ಅವಕಾಶ ಎಷ್ಟು ಕ್ಷಿಪ್ರವಾದದ್ದು ಮತ್ತು ಪರಿಣಾಮಕಾರಿಯಾದದ್ದು ಎಂದರೆ ನೀವು ಒಡನೆ ತುರಂಗಕ್ಕೆ ತಳ್ಳಲ್ಪಡುವ ಮಾತ್ರವಲ್ಲ ಬೀದಿಗೆ ಎಸೆಯಲ್ಪಡುವ ಅಪಾಯಕ್ಕೆ ಕೂಡ ಈಡಾಗಿರುತ್ತೀರಿ. ಇದು ಟಾಲ್‌ಸ್ಟಾಯಿಯವರ ಸ್ಥಿತಿ ಆಗಿತ್ತು."

ಡಾ|| ಸರ್ವಪಲ್ಲಿ ರಾಧಾಕೃಷ್ಣನ್ ಸಂಪಾದಿಸಿ ಗಾಂಧೀಜಿಗೆ ೨-೧೦-೧೯೩೯ರಂದು (ಅಂದು ಇವರ ವಯಸ್ಸು ಎಪ್ಪತ್ತು) ಒಪ್ಪಿಸಿದ ಅಭಿನಂದನ ಗ್ರಂಥದಲ್ಲಿ ಐನ್‌ಸ್ಟೈನ್ ಬರೆದಿದ್ದಾರೆ: "ರಾಜಕೀಯ ಇತಿಹಾಸದಲ್ಲಿ ಗಾಂಧಿ ಅದ್ವಿತೀಯ ದಬ್ಬಾಳಿಕೆಗೆ ಈಡಾದ ಜನಸಮೂಹದ ಬಿಡುಗಡೆಯ ಹೋರಾಟಕ್ಕೆ ಅವರೊಂದು ಪೂರ್ಣ ನೂತನ ತಂತ್ರವನ್ನು ಸೃಷ್ಟಿಸಿ ಅದನ್ನು ಅಧಿಕ ಭಕ್ತಿಶ್ರದ್ಧೆಯಿಂದ ಕಾರ್ಯರೂಪಕ್ಕೆ ಇಳಿಸಿದ್ದಾರೆ. ಪಾಶವೀಬಲದ ಮೇಲೆ ಅವಧಾರಣೆ ಹೇರಿರುವ ವರ್ತಮಾನ ಯುಗದಲ್ಲಿ ನಾಗರಿಕ ಪ್ರಪಂಚದ ಮೂಲಕ ಚಿಂತನಶೀಲ ವ್ಯಕ್ತಿಗಳ ಮೇಲೆ ಗಾಂಧಿ ಬೀರಿರುವ ವರ್ಚಸ್ಸು ಮೇಲು ನೋಟಕ್ಕೆ ಪ್ರಕಟವಾಗುವುದಕ್ಕಿಂತ ಎಷ್ಟೋ ಪಟ್ಟು ಪರಿಣಾಮಕಾರಿಯಾದದ್ದು. ಏಕೆಂದರೆ ರಾಜನೀತಿಜ್ಞರ ಕಾರ್ಯ ಅವರು ತಮ್ಮ ವೈಯಕ್ತಿಕ ನಿದರ್ಶನ ಮತ್ತು ಬೋಧಕ ಪ್ರಭಾವಗಳಿಂದ ತಮ್ಮ ಜನರ ನೈತಿಕ ಬಲಗಳನ್ನು ಬಡಿದೆಬ್ಬಿಸುವಷ್ಟರ ಮಟ್ಟಿಗೆ ಮಾತ್ರ ಶಾಶ್ವತ. ನಾವು ಭಾಗ್ಯವಂತರು. ಮುಂದಿನ ತಲೆಮಾರುಗಳಿಗೆ ದಾರಿದೀಪವಾಗಿರುವ ಈ

ಸಮಕಾಲೀನ ದಿವ್ಯಜ್ಯೋತಿಯನ್ನು ವಿಧಿ ನಮಗೆ ಅನುಗ್ರಹಿಸಿರುವುದಕ್ಕೆ ನಾವು ಕೃತಜ್ಞರಾಗಿರಬೇಕು."

"ಯುದ್ಧ ಭೀತಿ ನಿವಾರಿಸುವುದರ ಅಗತ್ಯತೆ" ಎಂಬ ಲೇಖನದಲ್ಲಿ (೨೦-೯-೧೯೫೨, ಈ ವೇಳೆಗೆ ಗಾಂಧೀಜಿ ಗತಿಸಿದ್ದರು) ಐನ್‌ಸ್ಟೈನ್ ಗಾಂಧೀ-ಮಾರ್ಗವನ್ನು ಪ್ರಶಂಸಿಸಿದ್ದಾರೆ: "ನಮ್ಮ ಕಾಲದ ಅತ್ಯಂತ ಮಹಿಮಾನ್ವಿತ ರಾಜಕಾರಣಿ ಗಾಂಧಿ ಹಾದಿ ಸೂಚಿಸಿದ್ದಾರೆ. ಒಮ್ಮೆ ಸರಿದಾರಿ ಕಂಡುಕೊಂಡದ್ದಾದರೆ ಜನ ಎಂಥ ಬಲಿದಾನಗಳಿಗೂ ಹೇಗೆ ಸಿದ್ಧರಿರುತ್ತಾರೆ ಎನ್ನುವುದನ್ನು ಅವರು ತೋರಿಸಿಕೊಟ್ಟಿದ್ದಾರೆ. ಭಾರತದ ದಾಸ್ಯವಿಮೋಚನೆಗಾಗಿ ಅವರು ಪಟ್ಟ ಶ್ರಮ, ಹೇಗೆ ದೃಢ ಸಂಕಲ್ಪಯುತ ಮನ, ತೋರ್ಕೆಗೆ ಅಸಾಧ್ಯವೆಂದು ಭಾಸವಾಗುವ ಲೌಕಿಕ ಸಾಮರ್ಥ್ಯಕ್ಕಿಂತ ಪ್ರಬಲತರವಾದದ್ದು ಎಂಬುದಕ್ಕೆ ಜೀವಂತ ಸಾಕ್ಷಿ."

ಹಂತಕನ ಗುಂಡೇಟಿಗೆ ಗಾಂಧೀಜಿ ಬಲಿಯಾದರು (೩೦-೧-೧೯೪೮) ವಾಷಿಂಗ್ಟನ್ ಡಿ. ಸಿ. ಯಲ್ಲಿ ೧೧-೨-೧೯೪೮ರಂದು ಏರ್ಪಡಿಸಲಾಗಿದ್ದ ಅಶ್ರುತರ್ಪಣ ಸಮಾವೇಶದಲ್ಲಿ ಐನ್‌ಸ್ಟೈನರ ನುಡಿನಮನವನ್ನು ಪಠಿಸಲಾಯಿತು: "ಮನುಕುಲದ ನಾಳಿನ ಒಳಿತನ್ನು ಚಿಂತಿಸುವ ಪ್ರತಿಯೊಬ್ಬನೂ ಗಾಂಧಿಯವರ ದುರಂತ ಹನನದಿಂದ ತೀವ್ರ ವಿಚಲಿತನಾಗಿದ್ದಾನೆ. ಸ್ವಂತ ತತ್ತ್ವಕ್ಕೆ—ಅಹಿಂಸಾ ತತ್ತ್ವ—ಅವರು ಬಲಿಯಾದರು. ಅವರ ದೇಶದಲ್ಲಿ ಸಾರ್ವಜನಿಕ ಗಲಭೆ ಅರಾಜಕತೆ ತಾಂಡವವಾಡುತ್ತಿದ್ದಾಗ ಅವರು ಸ್ವಂತಕ್ಕೆ ಸಶಸ್ತ್ರ ರಕ್ಷಣೆ ನಿರಾಕರಿಸಿದುದರ ಫಲವಿದು. ಬಲಪ್ರಯೋಗ ಸ್ವತಃ ಒಂದು ದೌರ್ಜನ್ಯ, ಪರಿಪೂರ್ಣ ನ್ಯಾಯಕ್ಕಾಗಿ ಹೋರಾಡುವಾತ ಇದನ್ನು ವರ್ಜಿಸಲೇಬೇಕೆಂಬುದು ಅವರ ಅಚಲನಂಬಿಕೆ. ತಮ್ಮ ಪೂರ್ಣ ಜೀವನವನ್ನು ಅವರು ಈ ನಿಷ್ಠೆಗೆ ಮುಡಿಪಿಟ್ಟರು ಮತ್ತು ಈ ನಿಷ್ಠೆಯಿಂದ ಹೃನ್ಮನಭರಿತರಾಗಿ ಮಹಾ ಜನಾಂಗವೊಂದನ್ನು ಸ್ವಾತಂತ್ರ್ಯದೆಡೆಗೆ ಮುನ್ನಡೆಸಿದರು. ಜನತೆಯ ವಿಧೇಯತೆಗಳಿಸಲು ರಾಜಕೀಯ ಭ್ರಷ್ಟಾಚಾರ ಮತ್ತು ದ್ರೋಹವೆಂಬ ಕಪಟದ್ಯೂತವೊಂದೇ ದಾರಿಯಲ್ಲ, ಉತ್ಕೃಷ್ಟ ಜೀವನ ವಿಧಾನದ ಜ್ವಲಂತ ಅನುಷ್ಠಾನವೂ ಅನುಸರಣೀಯವೆಂದು ಅವರು ಸಾಧಿಸಿದರು. ನಾವು ನಮ್ಮ ಸಕಲ ಶಕ್ತಿಸಾಮರ್ಥ್ಯಸಹಿತ ರಾಜಕೀಯ ವಲಯದಲ್ಲಿಯ ಯಾವ ಉನ್ನತ ಪರಿಕಲ್ಪನೆಯನ್ನು ಉತ್ಕಾಂಕ್ಷಿಸಬೇಕೋ ಅದನ್ನು, ನೈತಿಕ ಶೈಥಿಲ್ಯದ ವರ್ತಮಾನಯುಗದಲ್ಲಿ, ಪ್ರತಿನಿಧಿಸಿದ ಏಕೈಕ ಮುತ್ಸದ್ದಿ ಗಾಂಧಿ ಎನ್ನುವ ಅರಿವಿನ ಮೇಲೆ, ಪ್ರಪಂಚಾದ್ಯಂತ ಅವರ ಬಗ್ಗೆ ಪ್ರಕಟವಾಗಿರುವ ಪೂಜ್ಯಭಾವ, ಬಹುತೇಕ ಅಪ್ರಜ್ಞಾಪೂರ್ವಕವಾಗಿ, ನೆಲಸಿರುವುದಾಗಿದೆ. ನಮ್ಮ ಪಥ, ಇತರ ಕಾರ್ಯಕಲಾಪಗಳಲ್ಲಿಯಂತೆ ಪ್ರಪಂಚ ವ್ಯವಹಾರಗಳಲ್ಲಿಯೂ, ನಗ್ನ ಪಾಶವೀಯತೆಯ ಭೀತಿಗಿಂತ ನ್ಯಾಯ ಮತ್ತು ಕಾನೂನಿನ ನೀತಿ ಅನುಸರಿಸುವುದರಿಂದ ಮಾತ್ರ, ಮನುಷ್ಯನ ಭವಿಷ್ಯ ಸಹನೀಯವಾದೀತೆಂಬ ಕಠಿಣಪಾಠವನ್ನು ನಾವು ಕಲಿಯಲೇಬೇಕು—ಇಲ್ಲಿಯ ತನಕ ಇದನ್ನು ಕಲಿತಿಲ್ಲ."

ಗಾಂಧೀಜಿ ಎಪ್ಪತ್ತರ ಸಂದರ್ಭದಲ್ಲಿ (೧೯೩೯) ಐನ್‌ಸ್ಟೈನ್ ನೀಡಿದ ಹೇಳಿಕೆ:

"ತಮ್ಮ ಜನತೆಯ ನಾಯಕ. ಯಾವುದೇ ಬಾಹ್ಯಬಲದ ಬೆಂಬಲವಿರದಾತ. ಈ ರಾಜಕಾರಣಿಯ ಯಶಸ್ಸು ಚಮತ್ಕಾರವನ್ನಾಗಲೀ ತಾಂತ್ರಿಕ ಕೌಶಲಗಳಲ್ಲಿ ಗಳಿಸಿರುವ ಪ್ರಾವೀಣ್ಯವನ್ನಾಗಲೀ ಅವಲಂಬಿಸಿಲ್ಲ, ಬದಲು, ಮನವೊಲಿಸಬಲ್ಲ ಸ್ವಂತ ವ್ಯಕ್ತಿತ್ವದ ಸಾಮರ್ಥ್ಯವನ್ನು ಮಾತ್ರ ಅವಲಂಬಿಸಿದೆ. ಬಲ ಪ್ರಯೋಗವನ್ನು ಸದಾ ತಿರಸ್ಕರಿಸಿದ ಯಶಸ್ವೀ ಯೋಧ. ವಿವೇಕ ವಿನೀತತೆಗಳ ಮೂರ್ತಿ. ದೃಢ ನಿರ್ಧಾರ ಮತ್ತು ಅಚಲ ಸ್ಥೈರ್ಯದಿಂದ ಸಜ್ಜುಗೊಂಡು ಸಕಲತ್ರಾಣವನ್ನು ತಮ್ಮ ಜನರ ಉದ್ಧಾರ ಹಾಗೂ ಸ್ಥಿತಿಗತಿಗಳ ಸುಧಾರಣೆಗೆ ಅರ್ಪಿಸಿದಾತ. ಯೂರೋಪಿನ ಅಮಾನುಷ ಕ್ರೌರ್ಯವನ್ನು ಸರಳ ವ್ಯಕ್ತಿಯ ಗಾಂಭೀರ್ಯದಿಂದ ವಿರೋಧಿಸಿ ಸರ್ವ ಸಂದರ್ಭಗಳಲ್ಲಿಯೂ ಶ್ರೇಷ್ಠತೆಯಿಂದ ವಿರಾಜಿಸಿದಾತ. ಇಂಥವನೊಬ್ಬ ಎಂದಾದರೂ ಈ ನೆಲದ ಮೇಲೆ ರಕ್ತಮಾಂಸ ಭರಿತನಾಗಿ ಅಡ್ಡಾಡಿದುದು ನಿಜವಿರಬಹುದೇ ಎಂದು ಮುಂಬರಲಿರುವ ಪೀಳಿಗೆಗಳು ಸಂದೇಹಿಸುವುದು ಸಾಧ್ಯ."

ಸತ್ಯವೇ ದೇವರು ದೇವರೇ ಸತ್ಯ



ಗುರಿಯಿಲ್ಲದ ಸಾಧನೆಗಳಿಂದ ಏನೂ ಉಪಯೋಗವಿಲ್ಲ. ಗುರಿಯಷ್ಟೇ ಸಾಧನೆಗಳು ಶುದ್ಧವಾಗಿರಬೇಕು.

ಮನಸ್ಸಿನಲ್ಲಿ, ಮಾತಿನಲ್ಲಿ, ಕೆಲಸದಲ್ಲಿ ಯಾರನ್ನೂ ನೋಯಿಸದಿರುವುದು, ಎಲ್ಲರನ್ನೂ ಪ್ರೀತಿಸುವುದು, ಎಲ್ಲರಿಗೂ ಒಳ್ಳೆಯದನ್ನು ಬಯಸುವುದು ಇದೇ ಅಹಿಂಸಾ ಧರ್ಮ.

ಪ್ರಜಾ ಪ್ರಭುತ್ವದಲ್ಲಿ ಬಲಿಷ್ಠನಿಗಿರುವ ಅವಕಾಶಗಳು ದುರ್ಬಲನಿಗೂ ಇರಬೇಕು. ಅದೇ ನಿಜವಾದ ಪ್ರಜಾಪ್ರಭುತ್ವ.

ಅಹಿಂಸೆ ಹೇಡಿತನವಲ್ಲ, ಅದು ಧೈರ್ಯದ ಪ್ರತೀಕ. ಆದರೆ ಅಹಿಂಸೆಯಿಂದ ಗುರಿಮುಟ್ಟಬೇಕಾದರೆ ತಾಳ್ಮೆ ಅಗತ್ಯ.

ಕೂಲಿಕಾರರ ದಾರಿ ದೀವಿಗೆ, ಮೀರಾ ಮಹದೇವನ್

ಟಿ. ಎಸ್. ಲಲಿತ

ನೂಲಿನ ಸೀರೆಯುಟ್ಟ, ಸ್ವಲ್ಪ ದಢೂತಿ ಹೆಂಗಸು ಅಗಲ ಕಣ್ಣುಗಳನ್ನು ತಿರುಗಿಸುತ್ತ, ೧೯೭೧ರ ಒಂದು ದಿನ ನವದೆಹಲಿಯ ಪಿ.ಡಬ್ಲ್ಯು.ಡಿ ಕೇಂದ್ರ ವಲಯದ ಮುಖ್ಯ ಇಂಜಿನಿಯರ್ ಆದ ಎನ್.ಎಸ್. ಎಲ್. ರಾವ್ ಅವರ ಕಛೇರಿಗೆ ಬಿರುಗಾಳಿಯಂತೆ ನುಗ್ಗಿ "ನನ್ನ ಹೆಸರು ಮೀರ ಮಹದೇವನ್. ಕಟ್ಟಡದ ಕೆಲಸಗಾರರ ಮಕ್ಕಳಿಗೆ ನಾನು 'ಶಿಶುವಿಹಾರ'ಗಳನ್ನು ನಡೆಸುತ್ತೇನೆ. ಆದರೆ ನಿಮ್ಮ ಇಂಜಿನಿಯರುಗಳ ಅಸಹಕಾರದಿಂದ ನಾನು ತೀವ್ರ ನಿರಾಸೆಗೊಂಡಿದ್ದೇನೆ" ಎನ್ನುತ್ತ, ಒಂದೇ ಉಸಿರಿನಲ್ಲಿ ಹೇಳಿದರು.

ಆಕೆಯ ಆಕ್ಷೇಪಣೆಯನ್ನು ವಿರೋಧಿಸುತ್ತ "ನಾನಿಲ್ಲಿ ಶಿಶುವಿಹಾರ ನಡೆಸುವ ಹೊಣೆ ಹೊತ್ತಿಲ್ಲ" ಎಂದರು ಕೋಪದಿಂದ ತಾಳ್ಮೆಗೆಟ್ಟ ರಾವ್. ಅವರ ಮಾತನ್ನು ಅರ್ಧಕ್ಕೇ ತಡೆಯುತ್ತ "ಹಾಗಾದರೆ ನನ್ನೊಂದಿಗೆ ಬನ್ನಿ. ನಾವೇನು ಕೆಲಸ ಮಾಡುತ್ತೇವೆನ್ನುವುದನ್ನು ನೀವು ನೋಡಬಹುದು" ಎನ್ನುತ್ತ ಅವರನ್ನು ಆಗ್ರಹಪೂರ್ವಕವಾಗಿ, ಕಟ್ಟಡದ ಕೆಲಸ ನಡೆಯುತ್ತಿದ್ದ ಜಾಗದ ನಾಲ್ಕು ಶಿಶುವಿಹಾರಗಳನ್ನು ನೋಡುವಂತೆ ಕರೆದೊಯ್ದರು. ಅಪೂರ್ಣಗೊಂಡ ಕಟ್ಟಡದಲ್ಲಿದ್ದವು ಎರಡು. ಉಳಿದೆರಡು ಚಿಂದಿ ಹೊದ್ದ ಷೆಡ್ಡುಗಳಲ್ಲಿ, ಅದಕ್ಕೆ ಹಚ್ಚಿದ ಬಣ್ಣದ ಕಾಗದಗಳು, ಮಕ್ಕಳು ಬರೆದ ಚಿತ್ರಗಳು. ಮಂಕುಕವಿದ ವಾತಾವರಣಕ್ಕಷ್ಟು ಜೀವತುಂಬಿದ್ದವು. ಶಿಶುವಿಹಾರದ ಕೆಲಸಗಾರರ ಸೂಕ್ಷ್ಮದೃಷ್ಟಿಯಡಿ, ಒಂದು ಜೋಲಿಯಲ್ಲಿ ಮಲಗಿದ ಹಸುಗೂಸುಗಳು ತೃಪ್ತಿಯ ಕೇಕೆ ಹಾಕುತ್ತಿದ್ದರೆ, ತೊದಲ್ನುಡಿಯ ಮಕ್ಕಳು ಪ್ಲಾಸ್ಟಿಕ್ ಚೌಕಗಳೊಂದಿಗೆ ಆಡುತ್ತಿದ್ದವು. ಸ್ವಲ್ಪ ದೊಡ್ಡ ಮಕ್ಕಳು ಹಿಂದೀ ಅಕ್ಷರಮಾಲೆಯೊಂದಿಗೆ ಹೆಣಗುತ್ತಿದ್ದವು. ಇಂಥ ಸುಖೀ ವಾತಾವರಣ, ಎಲ್ಲ ಕಟ್ಟಡದ ಕೆಲಸ ನಡೆಯುವ ಜಾಗದಲ್ಲಿ ಸಿಗಲಾರದೆಂದು ತಕ್ಷಣವೇ ಅರಿತರು ರಾವ್. ತಂದೆ, ತಾಯಿ ದಿನವಿಡೀ ದುಡಿಯುವಾಗ, ಮೈಗೆ ನೀರು ಕಾಣದ ಈ ಮಕ್ಕಳು, ಬಿಸಿಲ ಸುಡುಹುಡಿ ಮಣ್ಣಿನಲ್ಲಿ ಹೊರಳಬೇಕಿತ್ತು.

೧೯೯೩ರ 'ರೀಡರ್ಸ್ ಡೈಜೆಸ್ಟ್' ವಿಶೇಷ ಸಂಚಿಕೆಯಲ್ಲಿ ಪ್ರಕಟವಾದ ಅಶೋಕ್ ಮಹದೇವನ್ ಅವರ "ಮೀರಾ ಮಹದೇವನ್ಸ್ ಲಾಸ್ಟಿಂಗ್ ಲೆಗಸಿ" ಲೇಖನದ ಅನುವಾದ.

ಉಳಿದವು ರಕ್ಷಣೆ ಇಲ್ಲದ ನೀರಿನ ಟ್ಯಾಂಕಿನಲ್ಲಿ ಮುಳುಗಿಯೋ ಅಥವಾ ಭಾರವಾದ ತೊಲೆಗಳಡಿ ಸಿಕ್ಕಿಯೋ ಸಾಯುವ ಅಪಾಯದಂಚಿನಲ್ಲೇ ಬೆಳೆಯುತ್ತಿದ್ದವು. ಇದೆಲ್ಲವನ್ನು ಕಂಡು ಕರಗಿದ ರಾವ್, ತಕ್ಷಣವೇ ಮೀರಳಿಗೆ ಸಾಧ್ಯವಾದ ಎಲ್ಲ ಸಹಾಯಗಳನ್ನೂ ಒದಗಿಸುವಂತೆ ತಮ್ಮ ಸಹಾಯಕರಿಗೆ ಆಜ್ಞೆ ಮಾಡಿದರು.

ಮೀರ ಮಹದೇವನ್ ಸ್ಥಾಪಿಸಿದ ಸಂಸ್ಥೆ 'ಮೊಬೈಲ್ ಕ್ರಷ್ ಫಾರ್ ದಿ ಚಿಲ್ಡ್ರನ್ ಆಫ್ ವರ್ಕಿಂಗ್ ಮದರ್ಸ್' ದೆಹಲಿ, ಮುಂಬಯಿ ಹಾಗೂ ಪುಣೆಯಲ್ಲಿ ಇಂದು ೩೮೦೦೦ಕ್ಕೂ ಹೆಚ್ಚು ಮಕ್ಕಳಿಗೆ ವಿದ್ಯೆ, ಆರೋಗ್ಯ ಹಾಗೂ ಮನರಂಜನೆಯನ್ನೊದಗಿಸಲು, ೮೦ ಲಕ್ಷ ರೂ.ಗಳ ವಾರ್ಷಿಕ ವೆಚ್ಚದೊಂದಿಗೆ ೩೬೧ ಜನ ಸಹಾಯಕರೊಂದಿಗೆ ಶ್ರಮಿಸುತ್ತಿದೆ.

ಈ ಅಗಾಧ ಕೆಲಸದ ಹಿಂದಿನ ಶಕ್ತಿ ಮೀರ ಮೊದಲಿಂದಲೂ ಸಮಾಜ ಸುಧಾರಣೆಯ ಕೆಲಸ ಮಾಡಿದವರೇನಲ್ಲ. ೧೯೨೯ರ ಡಿಸೆಂಬರ್ ೫ರಂದು ಕರಾಚಿಯಲ್ಲಿ ಹುಟ್ಟಿದ ಮೀರ (ಮೊದಲ ಹೆಸರು ಮಿರಿಯಂ) ಪೋರ್ಟ್ ಟ್ರಸ್ಟಿನ ಅಧಿಕಾರಿ ತಂದೆ ಜಾಕಬ್‌ರಿಂದ ತೀವ್ರ ಪ್ರಭಾವಿತೆ. ತಮ್ಮ ಕೆಲಸಗಳನ್ನು ಲಂಚಕೊಟ್ಟು ಮೊದಲು ಮಾಡಿಸಿಕೊಳ್ಳಬೇಕೆಂಬ ಜನರ ಒತ್ತಡಕ್ಕೆ ಮಣಿಯದ ಸತ್ಯನಿಷ್ಠ ವ್ಯಕ್ತಿಯಾತ.

ಸಂಘಟನೆ ಹಾಗೂ ಮುಂದಾಳ್ತನದ ಸ್ವಭಾವ, ಉತ್ಸಾಹದ ಚಿಲುಮೆಯಂತಿದ್ದ ಮೀರಳಿಗೆ ಹುಟ್ಟಿನಿಂದಲೇ ಬಂದ ಬಳುವಳಿ. ಯಾವಾಗಲೂ ಆಟಗಳು ಹಾಗೂ ಪ್ರವಾಸಗಳಿಗಾಗಿ, ಆಕೆ ಜನರನ್ನು ಕಲೆಹಾಕುತ್ತಿದ್ದಳು ಎನ್ನುತ್ತಾರೆ. ಮೀರಳ ಬಾಲ್ಯಗೆಳತಿ ಡಯಾನಾ ಬೆಂಜಮಿನ್.

೧೯೪೭ರ ಭಾರತ-ಪಾಕಿಸ್ತಾನ ವಿಭಜನೆಯ ದಳ್ಳುರಿಗೆ ಸಿಕ್ಕ ಜೇಕಬ್ ಸಂಸಾರ, ಭಾರತಕ್ಕೆ ವಲಸೆ ಬಂದು, ಪುಣೆಯಲ್ಲಿ ನೆಲಸಿತು. ಪುಟ್ಟ ಸೈಕಲ್ ಅಂಗಡಿಯೊಂದನ್ನು ತೆರೆದ ಮೀರಳ ತಂದೆ ಅಪಾರ ನಷ್ಟ ಅನುಭವಿಸಬೇಕಾಯಿತು. ಅವರು ಮುಂಬಯಿಗೆ ಸ್ಥಳಾಂತರಗೊಂಡಾಗ, ೧೮ರ ಮೀರಳಿಗೆ ಸಿಕ್ಕಿದ್ದು ಕಂಪೆನಿಯೊಂದರ ಸ್ಟೆನೋಗ್ರಾಫರ್ ಕೆಲಸ. ತನ್ನ ಉಳಿದ ವೇಳೆಯಲ್ಲಿ ಹಿಂದಿ ಸಾಹಿತ್ಯಕ ಹಾಗೂ ರಾಜಕೀಯ ವಾರಪತ್ರಿಕೆಯೊಂದನ್ನು ಅಚ್ಚುಹಾಕಿಸುವ ಹೊಣೆಗಾರಿಕೆ.

'ಜ್ಯೂ' ಅಲ್ಲದ ಅಳಿಯನನ್ನು, ತಂದೆ, ತಾಯಿ ಒಪ್ಪದಿದ್ದರೂ ಮುಂಬಯಿಯ ಪತ್ರಿಕೋದ್ಯಮಿ ಟಿ. ಕೆ. ಮಹದೇವನ್ ಅವರನ್ನು ೧೯೫೫ರಲ್ಲಿ ಮೀರ ಮೆಚ್ಚಿ ಮದುವೆಯಾದರು. ಮೂರು ವರ್ಷಗಳ ನಂತರ, ಹಸುಳೆ ಉಪಮನ್ಯುವಿನೊಂದಿಗೆ, ದಂಪತಿಗಳು ದೆಹಲಿಗೆ ತಮ್ಮ ವಾಸ್ತವ್ಯ ಬದಲಿಸಿದರು. ದೆಹಲಿಯಲ್ಲಿ ಮೀರಳ ಮೊದಲ ವರ್ಷಗಳು ಮಕ್ಕಳ ಪಾಲನೆ ಹಾಗೂ ಬರವಣಿಗೆಯಲ್ಲಿ ಕಳೆದವು. ಜೀವನದ ಅನುಭವ ಅಪಾರವಾಗಿತ್ತು. ಅವುಗಳನ್ನಾಧರಿಸಿ, ಬರೆದ ಎರಡು ಕಾದಂಬರಿಗಳು ೧) 'ಸೋ ಕ್ಯಾಜಾನೆ ಪೀರ್ ಪರಾಯಿ' ಮುಂಬಯಿಯಲ್ಲಿ ನೌಕರಿಯಲ್ಲಿರುವ ಹೆಣ್ಣುಗಳ ಬದುಕು ಬವಣೆಗಳನ್ನು ಎತ್ತಿಹಿಡಿದರೆ, ೨) 'ಅಪ್ನಾ ಘರ್',

ಜ್ಯೂಯಿಷ್ ಸಂಸಾರವೊಂದು, ಹುಟ್ಟಿದ ಹಾಗೂ ನೆಲೆ ನಿಂತ ಇಸ್ರೇಲ್–ಭಾರತದ ನಡುವಿನ ನಿಷ್ಠೆಯ ಬಗೆಗಿನ ತೊಳಲಾಟವನ್ನು ಚಿತ್ರಿಸುತ್ತದೆ.

೧೯೬೦ರ ವೇಳೆಗೆ ಮೀರಳಜೀವನದಲ್ಲೇನೋ, ಖಾಲಿತನ, ಅಶಾಂತಿ ಅಸಂತೃಪ್ತಿ ತಲೆಹಾಕಿತ್ತು. ಒಮ್ಮೆ ಮೀರಳ ಸಹಾಯಕಿಯಾಗಿ ಈಗ ಆ ಸಂಸ್ಥೆಯ ಸಂಚಾಲಕಿಯಾಗಿರುವ ದೇವಿಕಾ ಸಿಂಗ್ "ಬರವಣಿಗೆಯೊಂದೇ ಅವಳ ಕಾರ್ಯಕ್ಷೇತ್ರವಾಗಿರಲಿಲ್ಲ, ತನ್ನನ್ನು ತಾನೇ ಸಂಪೂರ್ಣವಾಗಿ, ಅರ್ಪಿಸಿಕೊಳ್ಳಬಹುದಾದಂಥ ಕ್ರಿಯೆಗಾಗಿ ಹಾತೊರೆಯುತ್ತಿದ್ದಳು ಮೀರ" ಎನ್ನುತ್ತಾರೆ.

ಅಕಸ್ಮಾತ್ತಾಗಿ ಒದಗಿ ಬಂತು ಸಂದರ್ಭ. 'ಗಾಂಧಿ ಶತಾಬ್ದಿ' ಆಚರಿಸಲು ಸ್ಥಾಪನೆಯಾದ ಸಂಘ ಮೀರಳನ್ನು ತನ್ನ ಸದಸ್ಯೆಯಾಗಿ ಮಾಡಿಕೊಂಡಿತ್ತು. ಅದರ ಅನೇಕ ಚಟುವಟಿಕೆಗಳಲ್ಲಿ, ನಡೆಯಬೇಕಿದ್ದ ವಸ್ತುಪ್ರದರ್ಶನವೂ ಒಂದು. ಕಟ್ಟುತ್ತಿದ್ದ ಅನೇಕ ಕಟ್ಟಡಗಳನ್ನು ದಾಟಿ, ದಿನವೂ ಕಛೇರಿಗೆ ಹೋಗುತ್ತಿದ್ದ ಮೀರಳ ದೃಷ್ಟಿಗೆ ಬೀಳುತ್ತಿದ್ದುದು ಕೂಲಿಕಾರರ ಅರೆನಗ್ನ ಮಕ್ಕಳು. ಒಂದರ ತಲೆಯಿಂದೊಂದು ಹೇನು ಹೆಕ್ಕುತ್ತ ಕುಳಿತದ್ದು, ಅತ್ತಿತ್ತ ಹೋದಾನೆಂಬ ಭಯದಿಂದ ಕೆಲಸ ಮಾಡುವ ತಾಯಿ, ತನ್ನ ಹಸುಗೂಸನ್ನು ಕಂಬಕ್ಕೆ ಕಟ್ಟುತ್ತಿದ್ದುದು, ಅನಾರೋಗ್ಯದಿಂದ ನರಳುತ್ತ, ನೊಣ ಮುತ್ತಿ ಮಲಗಿದ್ದ ಮಕ್ಕಳ ಕರುಣಾಜನಕ ಸ್ಥಿತಿ.

ಇಂಥ ದೃಶ್ಯಗಳನ್ನವರು ಹಿಂದೆಯೂ ನೋಡಿದ್ದರೂ, ಜೀವನದ ತಿರುವಿನಲ್ಲಿ ನಿಂತಿದ್ದ ಮೀರಳನ್ನೀಗ, ಈ ದೃಶ್ಯಗಳು ಸಂಕಟಕ್ಕೀಡುಮಾಡಿದ್ದವು. ದಿನ ನಿತ್ಯವೂ ಈ ಸಮಸ್ಯೆಯನ್ನು ಹೇಗೆ ಪರಿಹರಿಸುವುದೆಂಬ ತೊಳಲಾಟ, ಪರಿಹಾರವೊಂದನ್ನು ಕಂಡುಕೊಂಡಿತು. ಕಟ್ಟಡದ ಕೆಲಸ ನಡೆಯುತ್ತಿದ್ದ ಒಂದು ಭಾಗದಲ್ಲೇ ಶಿಶುವಿಹಾರವೊಂದನ್ನು ತೆರೆದರೆ, ತನ್ನ ಮಕ್ಕಳು ಸುರಕ್ಷಿತರಾಗಿದ್ದಾರೆಂಬ ಭಾವನೆ, ಕೆಲಸ ಮಾಡುವ ತಾಯಿಯ ಕಳವಳವನ್ನು ಕೊನೆಗಾಣಿಸಿ ಕೆಲಸದಲ್ಲಿ ಮನತೊಡಗಿಸಬಹುದಿತ್ತು.

ಸರಳವಾದರೂ, ಅಪೂರ್ವವಾಗಿತ್ತು ಮೀರಳ ಯೋಜನೆ. ಕಾರಣ ಭಾರತದ ೧.೫ ಮಿಲಿಯನ್ ಕಟ್ಟಡದ ಕೆಲಸಗಾರರ ಸಮಸ್ಯೆಗಳನ್ನು ಕುರಿತು ಯೋಚಿಸಿ, ಅದಕ್ಕೊಂದು ಪರಿಹಾರ ಕಂಡು ಹಿಡಿದದ್ದು ಅದೇ ಮೊದಲಸಲವಾಗಿತ್ತು. ಸಣ್ಣ, ಪುಟ್ಟ ಹೊಲ ಹೊಂದಿದ್ದ ರೈತಾಪಿ ಜನ ಬೇಸಾಯದ ಕೆಲಸಗಳಿಲ್ಲದ ದಿನಗಳಲ್ಲಿ ಹೊಟ್ಟೆಪಾಡಿಗಾಗಿ ಕೆಲಸ ಅರಸಿ, ಪಟ್ಟಣಗಳಿಗೆ ವಲಸೆ ಬಂದು, ಬೇರಾವ ವಿದ್ಯೆಯೂ ಬಾರದ್ದರಿಂದ, ಗಾರೆ ಕೆಲಸಕ್ಕೆ ಸೇರಿ ಒಂದೆಡೆ ಕೆಲಸ ಮುಗಿದ ಕೂಡಲೇ, ಮತ್ತೊಂದು ಕಟ್ಟಡದ ಕೆಲಸಕ್ಕೆ ಸೇರುತ್ತಿದ್ದರು. ಅಸಂಘಟಿತರಾದ ಈ ಜನ ಸಾಹುಕಾರರ ಕೈಗೊಂಬೆಗಳಾಗುತ್ತಿದ್ದರು. ಬೃಹತ್ ಕಟ್ಟಡಗಳನ್ನು ಕಟ್ಟುವ ಈ ಜನಗಳ ವಾಸ, ರೋಗ ಮನೆಮಾಡಿದ ಮುರುಕು ಗುಡಿಸಲಲ್ಲಿ! ಬಹಳಷ್ಟು ಎಳೆಯ ಮಕ್ಕಳು ರೋಗರುಜಿನದಿಂದ ಎಳವೆಯಲ್ಲೇ ಸಾವನ್ನಪ್ಪುತ್ತಿದ್ದವು.

ಶಿಶುವಿಹಾರ ನಡೆಸುವುದರ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲದಿದ್ದರೂ, ಮೀರ ಕೆಲಸ ಪ್ರಾರಂಭಿಸಿದರು. ಗಾಂಧಿ ವಸ್ತು ಪ್ರದರ್ಶನದ ಕಂಟ್ರಾಕ್ಟರನಿಂದ, ಒತ್ತಾಯ ಪೂರ್ವಕವಾಗಿ ಒಂದು ಗುಡಾರ ಪಡೆದ ಮೇಲೆ ಸಮಾಜ ಕಲ್ಯಾಣ ಸಂಸ್ಥೆಗಳು ಹಾಗೂ ಸ್ನೇಹಿತರಿಂದ ೩ ಸಾವಿರ ರೂಪಾಯಿಗಳ ನಿಧಿ ಸಂಗ್ರಹಿಸಿದರು. ಆ ಹಣದಿಂದ 'ಆಯಾ' ಒಬ್ಬಳನ್ನು ನೇಮಿಸಿ ಕೆಲವು ತೊಟ್ಟಿಲುಗಳು, ಬಕೆಟ್ ಹಾಗೂ ಸೋಪು ಖರೀದಿಸಿ, ೧೯೬೯ರ ಮೇ ೧೪ರಂದು ಮೊದಲ ಬಡ ಮಕ್ಕಳ ಶಿಶುವಿಹಾರ ಪ್ರಾರಂಭಿಸಿದರು.

ಹಿಂದೆಯೇ ಆ ಶಿಶುವಿಹಾರವನ್ನು ಮುಚ್ಚುವ ಪರಿಸ್ಥಿತಿ. ಬಿಟ್ಟಿಯಾಗಿ ಮಕ್ಕಳ ರಕ್ಷಣೆಯ ಹೊಣೆ ಹೊರುತ್ತೇನೆಂದಾಗಲೂ, ಈ ಅಪರಿಚಿತೆಯೊಂದಿಗೆ ತಮ್ಮ ಮಕ್ಕಳನ್ನು ತಾಯಂದಿರು ಬಿಡಲೊಪ್ಪಲಿಲ್ಲ. ಕೊಳಕು ಮಕ್ಕಳ ಸೇವೆ ಮಾಡಲು ಗೊಣಗುಡ ಹತ್ತಿದಳು ಆಯಾ. ಜಮುನಾ ನದಿಯ ಮೇಲೆ ಬೀಸಿದ ಬಿರುಗಾಳಿಯಿಂದಾಗಿ ಗುಡಾರ ಕುಸಿದು ಬಿತ್ತು.

ಸೋಲೊಪ್ಪಲಿಲ್ಲ ಮೀರ. ಇದ್ದ ಆಯಾಳನ್ನು ಬಿಡಿಸಿ, ಮತ್ತೊಬ್ಬಳನ್ನು ಕರೆತಂದರು. ಕೆಲಸಗಾರರೊಂದಿಗೆ ಚರ್ಚಿಸಿ, ಅವರ ಮನ ಗೆದ್ದರು. ಇವರು ಕೈಕೊಂಡ ಕೆಲಸದ ಬಗೆಗಿನ ಸುದ್ದಿ, ಬೇಗನೆ ಸುತ್ತೆಲ್ಲ ಹರಡಿತು. ಮೊದಲ ಕ್ರೆಷ್ ಪ್ರಾರಂಭವಾದ ತಿಂಗಳಂತರದಲ್ಲಿ, ಹವಜ್‌ಖಾಸ್‌ನ ಯುಎಸ್‌ಎಐಡಿ ಕಟ್ಟಡಗಳ ಕೆಲಸದ ಮೇಲ್ವಿಚಾರಕರಾಗಿದ್ದ ಅಮೆರಿಕನ್ ಎಂಜಿನಿಯರ್ ಒಬ್ಬರು, ತಮ್ಮ ಕೆಲಸಗಾರರ ಮಕ್ಕಳಿಗೊಂದು ಕ್ರೆಷ್ ತೆರೆಯಲು ಹೇಳಿ ಹಣ ಸಹಾಯವಿತ್ತರು. ವರ್ಷದ ಕೊನೆಯ ವೇಳೆಗೆ 'ಇಂಡೋ ಜರ್ಮನ್ ಸಮಾಜ ಸೇವಾ ಸೊಸೈಟಿ'ಯಿಂದ ಅಂಥವೇ ಮತ್ತೊಂದು ಕೋರಿಕೆ. 'ಕೆನೆಡಿಯನ್ ಹೈ ಕಮೀಷನ್'ನ ಕಟ್ಟಡದ ಕೆಲಸ ಪ್ರಾರಂಭವಾದಾಗ ಅಲ್ಲೊಂದು ಕ್ರೆಷ್ ತೆರೆಯಲು ಕೆನೆಡಿಯನ್ ದೂತಾವಾಸದವರ ಧನ ಸಹಾಯ ಪಡೆಯಲು ಸಮರ್ಥರಾದರು ಮೀರ. ೧೯೬೯ರ ಕೊನೆಯ ವೇಳೆಗೆ ಬೆಳಗ್ಗೆ ೮ ರಿಂದ ಸಂಜೆ ೪-೩೦ರ ವರೆಗೆ, ವಾರಕ್ಕೆ ಆರು ದಿನಗಳು, ೨೪೦ ಮಕ್ಕಳು ಈ ಕ್ರೆಷ್‌ಗಳಲ್ಲಿ ಸ್ನಾನ, ಊಟ, ಆಟಗಳಲ್ಲಿ ತಲ್ಲೀನರಾಗುತ್ತಿದ್ದವು.

ಸಿಕ್ಕ ಯಶಸ್ಸಿನಿಂದ ಉತ್ತೇಜಿತರಾದ ಮೀರ, ದೆಹಲಿಯ ಇತರ ಕಟ್ಟಡಗಳ ಕೆಲಸದ ಸ್ಥಳಗಳ ಆಯ್ಕೆ ಮಾಡತೊಡಗಿದರು. ಅಷ್ಟರಲ್ಲೇ ೨೦ ಹೆಣ್ಣಾಳುಗಳನ್ನು ನೇಮಿಸಿಕೊಳ್ಳುವ ಕಂಟ್ರಾಕ್ಟರ್ ಕಟ್ಟಡದ ಬಳಿಯಲ್ಲೇ ಕ್ರೆಷ್ ಒಂದನ್ನು ತೆಗೆಯಬೇಕೆಂಬ ಕಾನೂನು, ಪಾರ್ಲಿಮೆಂಟಿನಿಂದಲೇ ಜಾರಿಯಾದರೂ ಅದರತ್ತ ಯಾರೂ ಗಮನ ಕೊಡಲಿಲ್ಲ. ಕಂಟ್ರಾಕ್ಟರುಗಳು ಕ್ರೆಷ್‌ನ ಖರ್ಚು ಭರಿಸಲೊಪ್ಪುವಂತೆ ಮಾಡಲು, ಮೀರ ಮಿತಿ ಮೀರಿ ಹೆಣಗಬೇಕಾಯಿತು. ಒಮ್ಮೆ ಅನೇಕ ತಿಂಗಳುಗಳವರೆಗೂ ಮೀರಳ ಕೇಳಿಕೆಗೆ ಕಿವಿಗೊಡದ ಕಂಟ್ರಾಕ್ಟರನ ಕಟ್ಟಡದ ಬಳಿ, ತಾವೇ ಒಂದು ಕ್ರೆಷ್‌ನ ಪ್ರಾರಂಭೋತ್ಸವಕ್ಕೆ ಮಂತ್ರಿಗಳೊಬ್ಬರನ್ನು ಆಮಂತ್ರಿಸಿ, ಅದನ್ನು ಕಂಟ್ರಾಕ್ಟರಿಗೆ ತಿಳಿಸಿದರು. ಅಪಮಾನವಾಗುವ ಹೆದರಿಕೆಯಿಂದ, ಗಲಿಬಿಲಿಗೊಂಡ ಕಂಟ್ರಾಕ್ಟರ್

ನಿಂದ ಮಂತ್ರಿಗಳು ಬರುವುದರೊಳಗಾಗಿ, ಆ ಜಾಗದಲ್ಲೊಂದು ಷೆಡ್ ಎದ್ದಿತು!

ಪ್ರಾರಂಭಕ್ಕೆ ಕೇವಲ ಹಸುಳೆಗಳನ್ನು ಮಾತ್ರ ನೋಡಿಕೊಳ್ಳುವ ಉದ್ದೇಶ ಮೀರಳದಾದರೂ, ಕೆಲಸ ಅಪೂರ್ಣವೆನಿಸು ತ್ತಿತ್ತು. ಕೆಲಸಗಾರರು ಅಲೆಮಾರಿ ಪ್ರಭಾವ ದವರಾದುದರಿಂದ, ಅವರ ದೊಡ್ಡ ಮಕ್ಕಳು ಎಲ್ಲೂ ಶಾಲೆಗೆ ಸೇರಲಾಗುತ್ತಿರಲಿಲ್ಲ. ಹಾಗಾಗಿ, ಕೆಲಸವಿಲ್ಲದ ಅಲೆಮಾರಿ ಹುಡುಗ ರನ್ನು ನೋಡಿದಾಗ, ಅವರಿಗಾಗೊಂದು ಯೋಜನೆ ತಯಾರಿಸಿದರು ಮೀರ. ಪ್ರತಿ ಕೇಂದ್ರದಲ್ಲಿಯೂ ೩–೬ ವರ್ಷದವರೆಗಿನ ಮಕ್ಕಳಿಗೆ ಕಿಂಡರ್‌ಗಾರ್ಟನ್ ತರಗತಿಗಳೂ, ೧೨ರ ವರೆಗಿನ ಮಕ್ಕಳಿಗಾಗಿ ತಕ್ಕ ತರಗತಿ ಗಳನ್ನೂ ಪ್ರಾರಂಭಿಸಿದ ಮೀರ, ಹಿರಿಯ ವ್ಯಕ್ತಿಯೊಬ್ಬ ಕಲಿಯುವ ಆಸೆ ವ್ಯಕ್ತ ಪಡಿಸಿದಾಗ ಸಂಜೆ ಅಲ್ಲಿಯೇ ವಯಸ್ಕರ ಶಿಕ್ಷಣ ಕೇಂದ್ರ ಪ್ರಾರಂಭಿಸಿದರು.

ಸಂಸ್ಥೆಯ ಚಟುವಟಿಕೆಗಳು ಹೆಚ್ಚಿದಂತೆ, ಖರ್ಚು ತೂಗಿಸುವುದು ಕಠಿಣವಾಯ್ತು. ಕಂಟ್ರಾಕ್ಟರುಗಳ ಹಣ ಸಹಾಯ, ಸರ್ಕಾರದ ಗ್ರಾಂಟ್, ಸಮಾಜ ಕಲ್ಯಾಣ ಕೇಂದ್ರಗಳ ಆರ್ಥಿಕ ನೆರವು, ಒಂದು ಭಾಗದ ಖರ್ಚನ್ನು ಮಾತ್ರ ಭರಿಸುತ್ತಿದ್ದವು. ಸಹಾಯದ ಇತರ ಮೂಲಗಳನ್ನರಸಿದರು ಮೀರ. ಸ್ನೇಹಿತರು ಹಣವಿತ್ತರು. ಬಟ್ಟೆ ತಯಾರಕರು ಬಟ್ಟೆ ದಾನ ಕೊಟ್ಟರು. ಕ್ರಷ್‌ನ ಮಕ್ಕಳೇ ತಯಾ ರಿಸಿದ ಚಿತ್ರಗಳ ಮಾರಾಟದಿಂದಲೂ ಹಣ ಹೊಂದಿಸಲಾಯ್ತು.

ಹಣದೊಂದಿಗೆ ಸರಿಯಾದ ನಿರ್ವಾಹಕ ರನ್ನು ಹೊಂದಿಸುವುದು ಸುಲಭದ ಕೆಲಸ ವಾಗಿರಲಿಲ್ಲ. ಕೆಲಸಗಾರರ ಮಕ್ಕಳನ್ನು ನೋಡಿಕೊಳ್ಳಲು ತರಬೇತಿ ಹೊಂದಿದ ಜನ, ಹೆಚ್ಚಿಲ್ಲವೆಂಬ ಅಂಶ ಮೀರಳ ಗಮನಕ್ಕೆ ಬಂದಾಗ, ಅನುಭವವಿಲ್ಲದ ಹೆಂಗಸರನ್ನೇ ನೇಮಿಸಿ, ಅವರಿಗೆ ತಾನೇ ಶಿಕ್ಷಣ ಕೊಡ ತೊಡಗಿದರು. ಕೆಲಸಗಳು ಸಮರ್ಪಕ ರೀತಿ ಯಲ್ಲಿ ನಡೆಯಲು ಮೀರ ಕಠಿಣರಾಗಲೇ ಬೇಕಾಗಿತ್ತು. ಅರೆಬರೆ ಕೆಲಸಗಳು ಅವರ ತಾಳ್ಮೆಗೆಡಿಸುತ್ತಿದ್ದವು. ವೇಳೆಗೆ ಮಹತ್ವ ವಿತ್ತ ಮೀರ, ಕೆಲಸಿವಿಷ ತಡಮಾಡುವ ಕೆಲಸಗಾರರಿಗೂ ದಂಡ ಹಾಕುತ್ತಿದ್ದರು. ಹಿರಿಯ ಮಹಿಳಾ ಕಾರ್ಯಕರ್ತೆ ಮೋತಿಯಾ ಶರ್ಮ "ಇಂದಿರಾಗಾಂಧಿ ಎಮರ್ಜೆನ್ಸಿ ತಂದಾಗ ನಮಗದರ ವ್ಯತ್ಯಾಸದ ಅರಿವೇ ಆಗಲಿಲ್ಲ; ಕಾರಣ, ಮೀರ ದೀದಿಯ ಎಮರ್ಜೆನ್ಸಿ ಅನುಭವ ಆಗಲೇ ನಮಗಾ ಗಿತ್ತು" ಎನ್ನುತ್ತಾರೆ ನಗುತ್ತ, ಅಂಥ ಶಿಸ್ತು ಗಾತಿ ಮೀರ.

ಒಂದು ಕಟ್ಟಡದ ಕೆಲಸ ಮುಗಿದು, ಮತ್ತೊಂದು ಶುರುವಾದಾಗ, ಈ ಕ್ರಷ್ ಗಳೂ ಅಲ್ಲಿಗೇ ಸ್ಥಳಾಂತರಗೊಳ್ಳುತ್ತಿದ್ದುದ ರಿಂದ ಅವು 'ಸಂಚಾರಿ ಕ್ರಷ್'ಗಳೆಂದೇ ಪ್ರಸಿದ್ಧಿಯಾದವು. ಕೆಳ ಮಧ್ಯಮ ತರಗತಿಯ ಹೈಸ್ಕೂಲು ವಿದ್ಯಾಭ್ಯಾಸ ಮುಗಿ ಸಿದ, ಈ ಸಂಚಾರಿ ಕ್ರಷ್‌ಗಳ ಸಿಬ್ಬಂದಿಯ ಬಗೆಗೆ, ಮೀರ ಅಪಾರ ಶ್ರದ್ಧೆ ವಹಿಸುತ್ತಿ ದ್ದರು. ತಾಯಿಯ ಸ್ಥಾನದಲ್ಲಿದ್ದ ಮೀರಳ ಬಳಿ ತಮ್ಮ ಸಮಸ್ಯೆಗಳಿಗೆ ಕೆಲಸಗಾರರು ಪರಿಹಾರ ಕಂಡುಕೊಳ್ಳುತ್ತಿದ್ದರು. ಒಮ್ಮೆ ಸಹಾರಿ ಬ್ರಾಹ್ಮಣಳಾದ ಇಂದು ಭಾಸಿನ್, ತಂದೆತಾಯಿಗಳ ಇಚ್ಛೆಗೆ ವಿರುದ್ಧವಾಗಿ ಒಬ್ಬ ಪಂಜಾಬಿ ಹುಡುಗನನ್ನು ಮದುವೆ ಯಾಗಲು ನಿರ್ಧರಿಸಿದಾಗ, ಆರ್ಯ ಸಮಾಜದ

ದೇವಸ್ಥಾನದಲ್ಲಿ ಅವರಿಬ್ಬರ ಮದುವೆ ಏರ್ಪಡಿಸಿ, ಹೆಣ್ಣಿನ ಕಡೆಯವರ ಕೋಪವನ್ನು ದುರಿಸಿದರು ವೀರ.

ಕೆಲವು ಕೆಲಸಗಳನ್ನು ಮಾಡಲಿಚ್ಛಿಸದ ಜನರನ್ನೂ ಹುರಿದುಂಬಿಸಿ ಆ ಕೆಲಸ ಮಾಡಿಸುವ ಕಲೆ ವೀರಳಿಗೆ ಕರಗತವಾಗಿತ್ತು. ಕೀಳುದರ್ಜೆಯ ಕೆಲಸಗಾರರ ಮಕ್ಕಳ ಕೊಳೆ ಬಟ್ಟೆಯನ್ನು ಒಗೆಯುವುದರಿಂದ, ತಾವು ಜಾತಿಹೀನರಾಗುವೆವೆಂಬ ಹಿಂಜರಿಕೆಯಿದ್ದ ಜನರೆದುರು, ಹೇಗೆ ಗಾಂಧೀಜಿ ಬಡವರ ಹಾಗೂ ಅಸ್ಪೃಶ್ಯರ ಶೌಚಾಲಯಗಳನ್ನು ಶುಚಿಗೊಳಿಸುತ್ತಿದ್ದರೆಂದು ಮನಕರಗುವಂತೆ ಮಾತಾಡಿ, ಅವರಿಗೆ ಮನದಟ್ಟು ಮಾಡಿಸುತ್ತಿದ್ದರು. ಏಕಾಗ್ರತೆಯಿಂದ ಅವರ ಭಾಷಣವನ್ನಾಲಿಸಿದ ಕೆಲಸಗಾರರು ಗಾಂಧೀಜಿಯ ಮಾರ್ಗದರ್ಶನದಂತೆ, ತಾವೂ ಕೆಲಸ ಮಾಡುತ್ತಿರುವುದಕ್ಕಾಗಿ ಹೆಮ್ಮೆ ಪಟ್ಟುಕೊಳ್ಳುತ್ತಿದ್ದರು.

ಅವಶ್ಯಕತೆ ಬಂದಾಗ, ವೀರ ತಾವೇ ನೆಲಗುಡಿಸಿ, ಮಕ್ಕಳನ್ನು ಶುಚಿಗೊಳಿಸುತ್ತಿದ್ದರು. ಒಮ್ಮೆ ಸರ್ಕಾರ ಕೊಡುತ್ತಿದ್ದ ದೇಣಿಗೆ ಹೇಗೆ ಉಪಯೋಗಕ್ಕೆ ಬರುತ್ತಿದೆ ಎಂದು ಪರೀಕ್ಷಿಸಲು ಬಂದ ಸರ್ಕಾರಿ ಅಧಿಕಾರಿಯೊಬ್ಬ ಮೂಲೆಯೊಂದರಲ್ಲಿ ತಾವೇ ಕಂಬಳಿಗಳನ್ನೊಗೆಯುತ್ತಿದ್ದ ವೀರಳನ್ನು ಕಂಡು "ಆಕೆಯ ಬಗ್ಗೆ ತಪಾಸಣೆ ಅನಗತ್ಯ" ಎಂದುಕೊಳ್ಳುತ್ತ ಕೂಡಲೇ ಅಲ್ಲಿಂದ ಹಿಂದಿರುಗಿದ.

೧೯೭೦ರ ಮಧ್ಯದ ವೇಳೆಗೆ ಸಂಚಾರಿ ಕ್ರಷ್‌ಗಳು ಭದ್ರ ಬುನಾದಿ ಪಡೆದವು. ಧನಸಹಾಯ ಧಾರಾಳವಾಗಿ ಹರಿದು ಬಂದು, ಮುಂಬಯಿಯಲ್ಲೇ ಶಾಖೆಯೊಂದನ್ನು ತೆರೆಯಲಾಯ್ತು. ಡೆಲ್ಲಿಯ ಕೊಳಚೆ ಪ್ರದೇಶಗಳಲ್ಲೂ ಕೆಲವು ಕೇಂದ್ರಗಳು ತೆರೆಯಲ್ಪಟ್ಟವು. ಸಂಚಾರಿ ಕ್ರಷ್‌ಗಳು ಆ ವೇಳೆಗೆ ಎಷ್ಟು ಪ್ರಸಿದ್ಧಿ ಪಡೆದವೆಂದರೆ, ನೆರೆರಾಷ್ಟ್ರಗಳಿಂದ (ಯುನಿಸೆಫ್) ಹಾಗೂ (ವೈಡಬ್ಲ್ಯುಸಿಎ) ಸಮಾಜ ಸೇವೆಯಲ್ಲಿ ಮಾರ್ಗದರ್ಶನ ಪಡೆದುಬರಲು, ಪ್ರತಿನಿಧಿಗಳನ್ನು ವೀರಳ ಬಳಿ ಕಳಿಸುತ್ತಿದ್ದವು.

ತಾನು ಸಾಧಿಸಿದ ಕೆಲಸಗಳ ಬಗ್ಗೆ ಹೆಮ್ಮೆ ಇದ್ದರೂ, ಕೇವಲ ಗುಡ್ಡದ ತುದಿಯೊಂದನ್ನಷ್ಟೇ ತಾನು ಮುಟ್ಟಿರುವೆನೆಂಬ ಅನಿಸಿಕೆ ವೀರಳದು. ಸಂಚಾರಿ ಕೆಲಸಗಾರರ ಬಡತನ, ಅಜ್ಞಾನ ಅಷ್ಟು ಅಗಾಧ ಸಮಸ್ಯೆಯಾಗಿತ್ತು. ಏನೇ ಆದರೂ, ಈ ಸಂಚಾರಿ ಕ್ರಷ್‌ಗಳು ಬಡ ಕೂಲಿಕಾರರ ಹೊರೆಯನ್ನಷ್ಟು ಕಡಿಮೆಯಾಗಿಸಿದ್ದವು. "ಕ್ರಷ್‌ನಲ್ಲಿ, ನನ್ನ ಮೂರು ಮಕ್ಕಳ ರಕ್ಷಣೆಯಾಗುವುದರಿಂದ ನಾನು, ನನ್ನ ಹೆಂಡತಿ ನಿರಾಳವಾಗಿ ನಮ್ಮ ಕೆಲಸ ನಿರ್ವಹಿಸಬಲ್ಲೆವೆನ್ನುತ್ತಾನೆ ೨೦ ವರ್ಷದ 'ಜಂಗಿ'. ಮಧ್ಯಪ್ರದೇಶದ 'ನೈನಾವ' ಜಿಲ್ಲೆಯ ರೈತ. ಹೊಳವು ಕಂಗಳ ೧೧ ವರ್ಷದ ರಮೇಶ್ ಕುರೀಲ್ "ನನ್ನ ತಂದೆ, ತಾಯಿ ಶಾಲೆಯಿಲ್ಲದ ಜಾಗಕ್ಕೆ ವಲಸೆ ಹೋದರೂ ತಾನಿಲ್ಲಿ ಕಲಿಯಲು ಬರುತ್ತೇನೆ" ಎನ್ನುತ್ತಾನೆ.

೧೯೭೫ರ ಕೊನೆಗೆ ಕೆಲಸದ ಹೊರೆಯಿಂದ ಜರ್ಝರಿತವಾದ ವೀರಳ ಆರೋಗ್ಯ ಹದಗೆಟ್ಟರೂ, ಇಂಥ ಕೆಲವು ಮನ ಕರಗಿಸುವ ಅಂಶಗಳು, ಅವರನ್ನು ಸಚೇತನರಾಗಿಸುತ್ತಿದ್ದವು. ೧೯೭೬ ಜುಲೈನಲ್ಲಿ ವೀರ ಕ್ಯಾನ್ಸರಿನಿಂದ ಬಳಲುತ್ತಿದ್ದುದು ಸ್ಥಿರಪಟ್ಟಿತು.

ಮೂರು ಆಪರೇಶನ್‌ಗಳನ್ನೂ, ಶರೀರವನ್ನು ಬೆಂಡಾಗಿಸುವ ಉಗ್ರ ರೀತಿಯ

ರೇಡಿಯೊ ಥೆರಪಿ ಚಿಕಿತ್ಸೆಯನ್ನೂ ತಾಳಿಕೊಳ್ಳಬೇಕಾಯ್ತು ಮೀರ. ಆದರೂ ಕಛೇರಿಗೆ ಹೋಗಲು ತೀರಾ ನಿಶ್ಯಕ್ತರೆನಿಸಿದಾಗ, ಮನೆಯಲ್ಲೇ ಸಭೆ ಕರೆದು ಕೆಲಸ ಮುಂದುವರಿಸಿದರು. ೧೯೭೭ರ ಡಿಸೆಂಬರ್‌ನಲ್ಲಿ ಕ್ಯಾನ್ಸರ್ ಪರಿಣಿತರಲ್ಲಿ ಪರೀಕ್ಷಿಸಿಕೊಳ್ಳಲು ಹೋದಾಗಲೂ ಸಂಚಾರಿ ಕ್ರೆಶ್‌ನ ವಾರ್ಷಿಕ ಪತ್ರಿಕೆಯ ಬಗ್ಗೆ ವಿಚಾರ ವಿನಿಮಯ ಮಾಡಿದರು. ಆದರೆ ಆ "ಪತ್ರಿಕೆ ಮುದ್ರಣವಾಗಿ ಹೊರ ಬರುವವರೆಗೂ, ಮೀರ ಉಳಿದಿರುವುದಿಲ್ಲವೆನ್ನುವ ವಿಷಯ ಎಲ್ಲರಿಗೂ ತಿಳಿದದ್ದೇ ಆಗಿತ್ತು" ಎನ್ನುತ್ತಾರೆ ಮುಂಬಯಿ ಶಾಖೆಯ ಕಾರ್ಯದರ್ಶಿ ರುಕ್ಮಿಣಿ ಮಹದೇವನ್. ಆದರೆ ಶಾಂತರಾಗಿ ಹಾಸಿಗೆಯ ಮೇಲೆ ಮಲಗಿದ್ದ ಮೀರ, ಕೆಲಸದ ಬಗ್ಗೆ ಸಲಹೆಗಳನ್ನು ಕೊಡುತ್ತಲೇ ಹೇಳಿದರು. ೧೯೭೭ರ ಜುಲೈ ೨೨ ರಂದು ತಮ್ಮ ೪೮ನೆಯ ವಯಸ್ಸಿನಲ್ಲಿ ಮೀರ ಇನ್ನಿಲ್ಲವಾದರು.

"ದೂರದಿಂದ ನೀವು ಬಡತನವನ್ನು ನೋಡಿದಾಗ, ಕಾಣದಂತೆ ನಟಿಸಬಹುದು. ಆದರೆ ಸಮೀಪದಿಂದ ನೋಡಿದಾಗ ಅದರ ವಿರುದ್ಧ ನೀವು ಹೋರಾಡಲೇ ಬೇಕು" ಎಂದ ಮೀರ ನುಡಿದಂತೆ ನಡೆದರು.

ಕೇವಲ ಎಂಟೇ ವರ್ಷಗಳಲ್ಲಿ, ಭಾರತದ ಅತ್ಯಂತ ಶೋಷಿತ ವರ್ಗದ ಸಾವಿರಾರು ಮಂದಿಯ ಸಹಾಯಕ್ಕಾಗಿ, ಹೊಯ್ದಾಡುವ ಗುಡಿಸಿಲಿನಿಂದ ಭವ್ಯವಾದ ಸಂಸ್ಥೆಯೊಂದರ ಸ್ಥಾಪನೆಯಾಯ್ತು.

ಸೂಕ್ಷ್ಮ ವಿವೇಚನೆಯೊಂದಿಗೆ ಮಾಡುವ ಕೆಲಸಗಳಿಂದ ತೀರ ಶೋಷಿತ ವರ್ಗದ ಮಕ್ಕಳೂ ಹೇಗೆ ಪ್ರಯೋಜನ ಪಡೆಯಬಹುದೆಂಬುದಕ್ಕೆ ಈ ಸಂಚಾರಿ ಕ್ರೆಷ್‌ಗಳೇ ನಿದರ್ಶನ ಎನ್ನುತ್ತಾರೆ ಎನ್‌ಸಿಇಆರ್‌ಟಿ ಸಂಸ್ಥೆಯ ಮಕ್ಕಳ ಮಾನಸಿಕ ತಜ್ಞರಾದ ರಾಜಲಕ್ಷ್ಮೀ ಮುರಳೀಧರನ್. ದೃಢ ಸಂಕಲ್ಪ ಹಾಗೂ ಪರಿಶ್ರಮದಿಂದ ಎಂಥ ಕಠಿಣ ಪ್ರಸಂಗಗಳನ್ನೂ ಎದುರಿಸಬಹುದೆಂಬುದನ್ನು ಪ್ರತ್ಯಕ್ಷವಾಗಿ ಪ್ರಮಾಣಿಸಿ ತೋರಿಸಿದ ಮೀರ, ಬಡವರ ಏಳಿಗೆಗಾಗಿ ದುಡಿವ ಎಲ್ಲರಿಗೂ ದಾರಿ ದೀಪವಾಗಿದ್ದಾರೆ!

ನಾಗರಿಕತೆ ಅಂದರೆ ತಾಳ್ಮೆ ಸಹಿಷ್ಣುತೆಗಳ ತವರು. ಹಿಂಸೆ ಪ್ರತಿಹಿಂಸೆಗಳ ಸಮುದ್ರವಲ್ಲ.

—ಗಾಂಧೀಜಿ

ಹೀಗಿದ್ದರು ನಮ್ಮ ಅಪ್ಪ

ಪಿ. ಎನ್. ಅಂಬಿಕೆ

ಪಂಪ ಪ್ರಶಸ್ತಿ ವಿಜೇತ ಪಂಡಿತ ಸೇಡಿಯಾಪು ಕೃಷ್ಣಭಟ್ಟರ (೮-೬-೧೯೦೨—೮-೨-೧೯೯೬) ಹಿರಿಮಗಳು ಆ ಮಹಾಚೇತನಕ್ಕೆ ಸಲ್ಲಿಸಿರುವ ನುಡಿನಮನ.

ನಮ್ಮ ಅಪ್ಪ ಎಂದರೆ ನಮಗೆಲ್ಲ ತುಂಬ ಗೌರವ, ಭಯ, ಭಕ್ತಿ, ಆ ಮಟ್ಟವನ್ನು ಅವರು ಏರಿದ್ದರು; ಸುತ್ತುಮುತ್ತಲ ಎಲ್ಲರಿಗಿಂತ ಬೇರೆಯಾಗಿ ಅದಕ್ಕೆ ತಕ್ಕಂತೆ ಅವರು ನಡೆದುಕೊಳ್ಳುತ್ತಿದ್ದರು; ಸ್ವಲ್ಪವೂ ವ್ಯತ್ಯಯವಾಗದಂತೆ ಮಕ್ಕಳ ಬಗ್ಗೆ ಅವರ ಪ್ರೀತಿ ಎಷ್ಟು ಆಳವಾಗಿತ್ತೋ. ತಪ್ಪು ಮಾಡಿದಲ್ಲಿ ಅವರ ದಂಡನೆಯ ಮಾತುಗಳೂ ಅಷ್ಟೇ ತೀಕ್ಷ್ಣವಾಗಿರುತ್ತಿದ್ದುವು.

ಒಬ್ಬ ಸಾಹಿತಿಯಾಗಿ ಅವರು ಹೇಗೆ ಬದುಕಿದರು ಎಂಬ ವಿವರಣೆ ನನ್ನ ಅಳವಿಗೆ ಮೀರಿದ ಸಂಗತಿ. ಒಬ್ಬ ಉನ್ನತ ಮಟ್ಟದ ವ್ಯಕ್ತಿತ್ವದವರಾಗಿ ಅವರು ಹೇಗೆ ಬಾಳಿದ ರೆಂಬುದರ ಪರಿಚಯವೇ ನನಗೆ ಹೆಚ್ಚಾಗಿ ಇರುವುದರಿಂದ ಆ ಕುರಿತು ತುಸು ವಿವರವಾಗಿ ಇಲ್ಲಿ ಹೇಳುತ್ತಿದ್ದೇನೆ.

ನಮ್ಮ ಅಪ್ಪ ದ. ಕ. ಜಿಲ್ಲೆಯ ಪುತ್ತೂರು ತಾಲ್ಲೂಕಿನ 'ಸೇಡಿಯಾಪು' ಎಂಬ ಹಳ್ಳಿಯಲ್ಲಿ ೮–೬–೧೯೦೨ ರಂದು ಹುಟ್ಟಿದರು. ಅವರ ಎಳವೆಯಲ್ಲೇ ನಮ್ಮ ಅಜ್ಜ (ಅಪ್ಪನ ತೀರ್ಥರೂಪರು) ತೀರಿ ಕೊಂಡಿದ್ದರು. ಅಜ್ಜಿ ತನ್ನ ಮೂವರು ಚಿಕ್ಕ ಮಕ್ಕಳೊಂದಿಗೆ (ಅಪ್ಪನ ಅಣ್ಣ, ಅವ್ವ, ಮತ್ತು ತಂಗಿ.) ತನ್ನ ತಮ್ಮನ ಆಶ್ರಯದಲ್ಲಿ ಇರಬೇಕಾಯಿತು. ಬಲು ಬಡತನದ ಬದುಕು. ಅಂದಿನ ಕಾಲದಲ್ಲಿ ನಮ್ಮ ಊರಿನ ಹಳ್ಳಿಗಳಲ್ಲಿ ವಿದ್ಯಾರ್ಜನೆಗೆ ಪ್ರೋತ್ಸಾಹವಿರಲಿಲ್ಲ. ಆದರೆ ಜ್ಞಾನ ಸಂಪಾದನೆಯ ಉತ್ಕಟ ಹಂಬಲ ಅಪ್ಪನನ್ನು ಎಳವೆಯಲ್ಲೇ ಮನೆ ಬಿಟ್ಟು ಹೊರಜಗತ್ತಿಗೆ ಕಾಲಿಡಲು ಪ್ರೇರೇಪಿಸಿತು. ಅಲ್ಲಿ ಇಲ್ಲಿ ಅಲೆದಾಡಿ, ದೂರದ ಬಂಧುಗಳ, ಪರಿಚಿತರ ಎದುರು ವಸ್ತುತಃ ಕೈಯೊಡ್ಡಿ ಸಿಕ್ಕಿದ ಅಲ್ಪ ಸಹಾಯದಲ್ಲೇ ತಮ್ಮ ಜ್ಞಾನದಾಹವನ್ನು ಹಿಂಗಿಸಿಕೊಳ್ಳಲು ಪ್ರಯತ್ನಿಸಿ, ಅದರಲ್ಲಿ ಬಹುಪಾಲು ಸಫಲರಾದರು ಕೂಡ. (ತಮ್ಮ ಬಾಲ್ಯದ ಬಗ್ಗೆ ಅವರೇ ಮಕ್ಕಳಾದ ನಮ್ಮೊಂದಿಗೆ ಒಂದೆರಡು ಬಾರಿ ಹೇಳಿದ್ದಾರೆ.)

ಪುತ್ತೂರಿನ ಬೋರ್ಡ್ ಹೈಸ್ಕೂಲಿನಲ್ಲಿ ಹೇಗೋ ೯ನೆಯ ಇಯತ್ತೆವರೆಗೆ ಓದಿ, ಮತ್ತೆ ಆರ್ಥಿಕ ತೊಂದರೆಗಳಿಂದ ವಿದ್ಯಾಭ್ಯಾಸ ಮುಂದುವರಿಸಲಾರದೆ ಹೋದರು.

ಆಗ ದೇಶದಲ್ಲಿ ಅಸಹಕಾರ ಚಳವಳಿಯು ಕಾವು ಏರಿತ್ತು. ಅದರಲ್ಲಿ ಭಾಗವಹಿಸಿ, ಮನೆಮನೆಗೆ ಹೋಗಿ ಖಾದಿ ಮಾರಾಟ ಮಾಡಿದರು. ಮತ್ತೆ ಚಳವಳಿಯು ಕಾವು ಕಡಮೆಯಾದ ಮೇಲೆ ಆಯುರ್ವೇದ ಗ್ರಂಥಗಳ ಅಧ್ಯಯನ ಮಾಡಿ, ವೈದ್ಯಕೀಯ ಜ್ಞಾನವನ್ನು ಸಂಪಾದಿಸಿ—(ಅದರೊಂದಿಗೆ ಹಲವಾರು ಸಂಸ್ಕೃತ ಗ್ರಂಥಗಳನ್ನು ಓದಿಕೊಂಡು ಸಂಸ್ಕೃತ ಭಾಷೆಯ ಆಳವಾದ ಜ್ಞಾನವನ್ನೂ ಸಂಪಾದಿಸಿಕೊಂಡರು; ಜೊತೆಗೆ ತಕ್ಕಮಟ್ಟಿಗೆ ಹಿಂದಿ ಭಾಷೆಯನ್ನೂ ಕಲಿತುಕೊಂಡರು; ಹೀಗೆ ಅವರ ಜ್ಞಾನವೆಲ್ಲವೂ ಸ್ವಯಾರ್ಜಿತ) — ಮಂಗಳೂರಿನಲ್ಲಿ ಆಯುರ್ವೇದ ಔಷಧಿಯ ಅಂಗಡಿ ಇಟ್ಟು ವೈದ್ಯರಾಗಿ ಕೆಲವು ವರ್ಷ ಕೆಲಸ ಮಾಡಿದರು. ಅನಂತರ ಆಗಿನ ಮದರಾಸು ಸರಕಾರದವರು ನಡೆಸುತ್ತಿದ್ದ ಕನ್ನಡ ವಿದ್ವಾನ್ ಪರೀಕ್ಷೆಗೆ ಕುಳಿತು ಉತ್ತೀರ್ಣರಾಗಿ ಮಂಗಳೂರಿನ ಸೈಂಟ್ ಅಲೋಶಿಯಸ್ ಹೈಸ್ಕೂಲಿನಲ್ಲಿ ಕನ್ನಡ ಅಧ್ಯಾಪಕರಾಗಿ ವೃತ್ತಿಜೀವನ ಆರಂಭಿಸಿದರು. ದಿ|| ಪಂ|| ಮುಳಿಯ ತಿಮ್ಮಪ್ಪಯ್ಯನವರು ಆ ಕಾಲದಲ್ಲಿ ಅಲೋಶಿಯಸ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದರು. ಅವರಲ್ಲಿ ಅಪ್ಪನಿಗೆ ಅಪಾರ ಗೌರವ, ಆದರ. ದಿ|| ಕಡೆಂಗೋಡ್ಲು ಶಂಕರಭಟ್ಟರ (ಇವರು ಮಂಗಳೂರಿನ ಸೈಂಟ್ ಆಗ್ನೆಸ್ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾಗಿ ಆಗ್ಗ ಕೆಲಸ ಮಾಡುತ್ತಿದ್ದರು) 'ರಾಷ್ಟ್ರಬಂಧು' ಪತ್ರಿಕೆಯಲ್ಲೂ ಸ್ವಲ್ಪ ಕಾಲ ಕೆಲಸ ಮಾಡಿದರು. ಆ ಸಮಯದಲ್ಲೇ ನಮ್ಮೂರವರೇ ಆದ ಶ್ಯಾಮಶಾಸ್ತ್ರಿಗಳ ಮಗಳು ಶಂಕರಿಯನ್ನು (ನಮ್ಮ ಅಮ್ಮ) ಮದುವೆಯಾಗಿ ಗೃಹಸ್ಥರಾದರು.

ನಾವು ಐದು ಮಂದಿ ಹೆಣ್ಣು ಮಕ್ಕಳು, ಒಬ್ಬನೇ ಗಂಡುಮಗ—ಐದನೆಯವನು. ತಮ್ಮ ಬಡತನದ ನಡುವೆಯೂ ಅವರು ನಮಗೆಲ್ಲ ಶಕ್ತಿ ಮೀರಿಯೇ ವಿದ್ಯೆ ಕೊಡಿಸಿದರು. ಸತ್ಯ, ಸದಾಚಾರ, ಪ್ರಾಮಾಣಿಕತೆ, ಸರಳ ನಡೆ, ನುಡಿಗಳ ಉದಾತ್ತ ಜೀವನದ ಪಾಠ ಕಲಿಸಿದರು. ಆಡಂಬರ ಅವರಿಗೆ ಎಂದೂ ಹಿಡಿಸುತ್ತಿರಲಿಲ್ಲ. ಯಾವುದೇ ಮತ, ಧರ್ಮ ಜಾತಿಯ ಬಗೆಗೆ ಅವರಿಗೆ ದ್ವೇಷವಿರಲಿಲ್ಲ. ತನ್ನದು ತಪ್ಪಾಗಿದ್ದರೆ, ಅದನ್ನು ಕೂಡಲೇ ಒಪ್ಪಿಕೊಳ್ಳುವ ನಿಸ್ಪೃಹತೆ ಅವರಲ್ಲಿತ್ತು. ನಾನು ಪ್ರೌಢಶಾಲೆಯಲ್ಲಿ ಕಲಿಯುತ್ತಿದ್ದಾಗ ಹರಿಜನ ಹುಡುಗಿಯೊಬ್ಬಳನ್ನು ಮನೆಕೆಲಸಕ್ಕೆ ನೇಮಿಸಿಕೊಳ್ಳುವ ಧೈರ್ಯವನ್ನು ಅವರು ತೋರಿದ್ದರು.

ಆಗ ಎರಡನೇ ಮಹಾಯುದ್ಧದ ಕಾಲ. ಪಡಿತರ ಚೀಟಿ ಆರಂಭವಾದ ಕಾಲ. ಎಲ್ಲ ಆಹಾರ ವಸ್ತುಗಳೂ ತುಟ್ಟಿಯಾಗಿದ್ದುವು. ದೊಡ್ಡವರು ಒಬ್ಬರಿಗೆ ದಿನಕ್ಕೆ ಒಂದು ಪಾವು ಅಕ್ಕಿ, ಮಕ್ಕಳಿಗೆ ಅರ್ಧ ಪಾವು ಅಕ್ಕಿ ಸಿಗುತ್ತಿತ್ತು. ರಾಗಿ ಜೋಳ ತಕ್ಕಮಟ್ಟಿಗೆ ಸಿಗುತ್ತಿತ್ತು; ಸ್ವಲ್ಪ ಗೋದಿ ಸಿಗುತ್ತಿತ್ತು. ಸಿಗುತ್ತಿದ್ದ ಸ್ವಲ್ಪ ಸೀಮೆ ಎಣ್ಣೆ ಜೊತೆಗೆ 'ಕೊರಸಂದಿ' ಎಣ್ಣೆ ಬರುತ್ತಿತ್ತು (ದೀಪಕ್ಕೆ). ಆದರೆ ಅವರು ಎಂದೂ ಕಾಳಸಂತೆಯ ಪಾಲುದಾರರಾಗಲಿಲ್ಲ. ಮಾಸ್ತರಿಕೆಯ ಅಲ್ಪ ವೇತನ ಇದಕ್ಕೆಲ್ಲ ಏನೂ ಸಾಕಾಗುತ್ತಿರಲಿಲ್ಲ. ನಮ್ಮ ಅಪ್ಪನಿಗೆ ಆಯುರ್ವೇದ ವೈದ್ಯದ ಜ್ಞಾನವಿತ್ತು ಎಂದು ಈ ಮೊದಲೇ ಎಂದಿದ್ದೆನಲ್ಲ; ಹುಚ್ಚರಿಗೆ ಔಷಧಿ ಕೊಡುತ್ತ

ಇದ್ದರು. ವಿದ್ಯಾರ್ಥಿಗಳಿಗೆ ಟ್ಯೂಶನ್ ಹೇಳುವುದು ಇತ್ಯಾದಿಗಳಿಂದ ಅಲ್ಪ ಸ್ವಲ್ಪ ಸಂಪಾದನೆ ಆಗುತ್ತಿತ್ತು. ಹುಚ್ಚರಿಗೆ ಕೊಡುವ ಔಷಧಿ ಮನೆಯಲ್ಲೇ ತಯಾರಾಗುತ್ತಿತ್ತು. ಅಮ್ಮ ಮನೆಕೆಲಸಗಳ ನಡುವೆ ಅವನ್ನು ತಯಾರಿಸಿ (ತಂದೆಯವರ ನಿರ್ದೇಶನದಲ್ಲಿ) ಕೊಡುತ್ತಿದ್ದರು. ಬಡವರಿಗೆ ರಿಯಾಯಿತಿ ದರದಲ್ಲಿ ಔಷಧಿ ಕೊಡುವುದಿತ್ತು. ನಮ್ಮೆಲ್ಲರಿಗೂ ಅಪ್ಪ ಖಾದಿ ಬಟ್ಟೆ ಬರೆಗಳನ್ನೇ ಖರೀದಿಸುತ್ತಿದ್ದರು. ಒಂದು ಜೊತೆ ಉಡುಪು ೨ ವರ್ಷಕಾಲ ಬಾಳಿಕೆ ಬರುತ್ತಿತ್ತು. ಗಿರಣಿ ಬಟ್ಟೆಗಿಂತ ಇವುಗಳ ಬೆಲೆ ಸ್ವಲ್ಪ ಹೆಚ್ಚಾಗಿರುತ್ತಿತ್ತು. ಆದರೂ ಅವರು ತಾವು ನಂಬಿದ ದಾರಿಯನ್ನು ಬಿಡಲಿಲ್ಲ; ಪ್ರಾಮಾಣಿಕತೆ, ಸತ್ಯಗಳನ್ನು ತೊರೆಯಲಿಲ್ಲ. ನಮ್ಮ ಅಮ್ಮ ವಸ್ತ್ರ, ಒಡವೆ ಯಾವುದಕ್ಕೂ ಅಪ್ಪನನ್ನು ಎಂದೂ ಕಾಡಿದ್ದು ಇರಲಿಲ್ಲ. ಅಮ್ಮನ ಸಹಕಾರವಿಲ್ಲದಿದ್ದರೆ ಅಪ್ಪನಿಗೆ ಬಹುಶಃ ಬದುಕು ಸಹ್ಯವಾಗುತ್ತಿರಲಿಲ್ಲ. ಅಂತೆಯೇ ಮಕ್ಕಳಾದ ನಮಗೆ ಸರಳ ಜೀವನದ ಪಾಠವನ್ನು ಕಲಿಸಿದರು. ನಮ್ಮ ತಪ್ಪುಗಳನ್ನು ತಿದ್ದುವುದಕ್ಕಾಗಿ ಪ್ರಾರ್ಥನೆ, ಉಪವಾಸಗಳನ್ನೂ ಮಾಡಿದ ಸಂದರ್ಭಗಳಿದ್ದುವು. ಸೋಮಾರಿಗಳಾಗಿ ಕುಳ್ಳಿರಲು ಬಿಡದೆ, 'ಕಾಯಕವೇ ಕೈಲಾಸ' ಎಂಬ ಮಂತ್ರವನ್ನು ಕಲಿಸಿದರು. ಧ್ರುವ, ಪ್ರಹ್ಲಾದ, ಕೋಳೂರು ಕೊಡಗೂಸು ಮುಂತಾದ ಭಗವದ್ಭಕ್ತರ ಕತೆಗಳನ್ನು ರೋಚಕವಾಗಿ ಹೇಳುತ್ತಿದ್ದರು. ಸ್ವಲ್ಪ ದೊಡ್ಡವರಾದ ಮೇಲೆ, ಪುಸ್ತಕಗಳು ವಿರಳವಾಗಿದ್ದ ಆ ಕಾಲದಲ್ಲಿ ನೀತಿ ಬೋಧಕ ಕತೆಗಳುಳ್ಳ ಸೆಕೆಂಡ್ ಹ್ಯಾಂಡ್ ಪುಸ್ತಕಗಳನ್ನು ಕೊಂಡುಕೊಡುತ್ತಿದ್ದರು. ಅವುಗಳಲ್ಲಿ ಒಂದು ಕತೆ—'ದೃಢ ಪ್ರತಿಜ್ಞೆಯ ಒಕ್ಕಲಿಗ' ನನ್ನ ಮನಸ್ಸಿನಲ್ಲಿ ಅಚ್ಚೊತ್ತಿ ನಿಂತಿದೆ—ಬರಗಾಲ ಬಂದು, ನೀರಿಲ್ಲದೆ ಗದ್ದೆಗಳೆಲ್ಲ ಒಣಗುತ್ತಿದ್ದಾಗ ದೂರದ ನದಿಯಲ್ಲಿದ್ದ ಅಲ್ಪ ನೀರನ್ನು ಊರವರ ಹಾಸ್ಯಕ್ಕೆಡೆಯಾಗಿಯೂ, ಸ್ವತಃ ಒಬ್ಬಂಟಿಯಾಗಿ ಕಾಲುವೆ ಕಡಿದು, ತನ್ನ ಒಣಗಿ ಹೋಗಿದ್ದ ಹೊಲವನ್ನು ಹಸುರಾಗಿಸಿದ ಕತೆ.

ಗಾಂಧೀಜಿಯವರ ಮೇಲೆ ಅಪ್ಪನಿಗೆ ಅಗಾಧ ಭಕ್ತಿ, ಅಭಿಮಾನ, ಗೌರವ. ಅವರ ತತ್ವಾದರ್ಶನಗಳನ್ನು ತನ್ನದಾಗಿ ಮಾಡಿಕೊಂಡರು; ನಮಗೂ ಕಲಿಸಿದರು. ಭಗವಂತನಲ್ಲಿ ಅವರಿಗೆ ಭಕ್ತಿ ಅಪಾರ; ಆತನನ್ನು ನಂಬಿ ನಡೆದರು. ಅವರು ನಿಷ್ಠುರ ಸತ್ಯವಾದಿಗಳು; ಎಂಥ ಕಟು ಸತ್ಯವನ್ನಾದರೂ ಮುಖದ ಎದುರಿನಲ್ಲೇ ನಿಷ್ಠುರವಾಗಿ ಹೇಳುತ್ತಿದ್ದರು – ತಮ್ಮ ಕೊನೆಯ ದಿನಗಳವರೆಗೂ, ಯಾರಲ್ಲೇ ಆಗಲಿ ಉತ್ತಮ ಗುಣಗಳನ್ನು, ಒಳ್ಳೆಯ ನಡೆನುಡಿಗಳನ್ನು, ಇತರರ ಕೆಲಸಗಳ ಕೃತಿಗಳ ಶ್ರೇಷ್ಠ ಗುಣಮಟ್ಟವನ್ನು ಕಂಡರೆ, ಮುಕ್ತವಾಗಿ ಪ್ರಶಂಸಿಸುತ್ತಿದ್ದರು. ದೋಷಗಳನ್ನು ಕಂಡರೆ ಅಷ್ಟೇ ಕಟುವಾಗಿ ಟೀಕಿಸುತ್ತಿದ್ದರು. ಅತ್ಯಂತ ಕಹಿಯಾಗಿದ್ದರೂ ಅದು ಕತ್ತಲಲ್ಲಿ ಮುನ್ನಡೆಸುವ ಬೆಳಕಾಗಿದೆ?

ನಾವೆಲ್ಲ ಅವರ ಮಟ್ಟಕ್ಕೆ ಏರಬೇಕೆಂದು ಅವರು ಬಯಸುತ್ತಿದ್ದರು–ಕೃತಿಯಲ್ಲಿ, ನಡೆನುಡಿಯಲ್ಲಿ ಎಲ್ಲದರಲ್ಲೂ ನಾವು ಅವರ ಎತ್ತರಕ್ಕೆ ಏರಲಾರದೆ ಚಡಪಡಿಸುತ್ತಿದ್ದೆವು. ಊಟದ ಕೆಲಸ, ಬರವಣಿಗೆ, ಎಲ್ಲೆಲ್ಲೂ ಓರಣ, ಅಚ್ಚುಕಟ್ಟು. ಆದರೆ ಅವರ ಬರವಣಿಗೆ,

ಕಾವ್ಯರಚನೆ ಯಾವಾಗ ನಡೆಯುತ್ತಿತ್ತೋ! ಮಕ್ಕಳಾದ ನಮಗೆ ಒಂದೂ ತಿಳಿಯುತ್ತಿರಲಿಲ್ಲ. ಬಹುಶಃ ರಾತ್ರಿ, ರಜಾದಿನಗಳಲ್ಲಿ ಇರಬಹುದೆಂದು ತೋರುತ್ತದೆ.

ನಾನು ಅವರ ಹಿರಿಯ ಮಗಳು. ಅವರು ಒಬ್ಬ ಹಿರಿಯ ಕವಿ, ಸಂಶೋಧಕ, ಲೇಖಕ ಎಂದು ಗಣಿಸಲ್ಪಡುವ ಎಷ್ಟೋ ಮೊದಲೇ ನಾನು ಗಂಡನ ಮನೆ ಸೇರಿದ್ದುದರಿಂದ ನಾನು ಆ ಬಗ್ಗೆ ಹೆಚ್ಚು ಬರೆಯಲಾರೆ- ಅದಕ್ಕೂ ಮೊದಲು ಮಂಗಳೂರಿನಲ್ಲಿದ್ದಾಗ, 'ಭಾರತೀಸುತ,' ತೆಕ್ಕುಂಜ ಗೋಪಾಲಕೃಷ್ಣ ಭಟ್ಟ ಮೊದಲಾದ ಲೇಖಕರೂ, ಸಾಹಿತ್ಯ ಪ್ರೇಮಿಗಳೂ ಅಪ್ಪನನ್ನು ನೋಡುವುದಕ್ಕಾಗಿ ಆಗಾಗ್ಗೆ ಬರುತ್ತಿದ್ದರು. 'ಭಾರತೀಸುತ' ಅವರು 'ಶಬ್ದಮಣಿದರ್ಪಣ'ದ ಕುರಿತು ಪಾಠ ಹೇಳಿಸಿಕೊಳ್ಳುವುದಕ್ಕೆ ಬರುತ್ತಿದ್ದರು ಆಗಾಗ್ಗೆ-ಕೆಲವು ತಿಂಗಳುಗಳವರೆಗೆ. ಶ್ರೀ ಶಂಬಾಜೋಶಿ, ವಿಸೀ ಅವರೂ ಒಮ್ಮೆ ನಮ್ಮಲ್ಲಿಗೆ ಬಂದಿದ್ದರೆಂದು ನೆನಪು. ಆಗ್ಗೆ ಮಂಗಳೂರಿನಲ್ಲಿ ಪ್ರಥಮವಾಗಿ ಹಿಂದೀ ಪ್ರಚಾರವನ್ನು ಆರಂಭಿಸಿದ ಒಬ್ಬ ಮಹನೀಯರು ಇದ್ದರು. ಅವರು ತುಂಬ ಸಾಹಿತ್ಯ ಪ್ರೇಮಿಗಳು, ಸಜ್ಜನರು. ಅವರಿಗೆ ನಮ್ಮ ಅಪ್ಪನನ್ನು ಕಂಡರೆ ಬಲು ಅಭಿಮಾನ. ಎಂದಾದರೊಮ್ಮೆ ಅಪ್ಪನನ್ನು ಕಾಣುವುದಕ್ಕೆ ಬರುತ್ತಿದ್ದರು. ಶ್ರೀ ಎದುರ್ಕಳ ಶಂಭುಭಟ್ಟರು ಸಜ್ಜನರು. ಅವರು ಆಗ್ಗೆ ಮಂಗಳೂರಿನ ಲೇಡಿಹಿಲ್ ಹೈಸ್ಕೂಲಿನಲ್ಲಿ (ಕಾನ್ವೆಂಟ್) ಕನ್ನಡ ಪಂಡಿತರಾಗಿದ್ದರು. ಅವರ ಮನೆ ನಮ್ಮ ಮನೆ ಪಕ್ಕದಲ್ಲೇ ಇತ್ತು. ಅವರು ಅಪ್ಪನ ಆತ್ಮೀಯ ಗೆಳೆಯರಾಗಿದ್ದರು. ಅಪ್ಪ ಆಗಿಂದಾಗ್ಗೆ ಬರೆಯುತ್ತಿದ್ದ ಕವಿತೆಗಳನ್ನು ಓದಿಸಿ ಕೇಳಿ ಸಂತೋಷಪಡುತ್ತಿದ್ದರು. ಸದ್ಗೃಹಸ್ಥರು. ನೆರೆಯಲ್ಲಿದ್ದವರು ಹಿಂದೀ ಮಾಸ್ತರರು. ಪುಟ್ಟಪ್ಪಯ್ಯ ಕಾರಂತ ಎಂದು ಅವರ ಹೆಸರು ; ಎಂದಾದರೊಮ್ಮೆ ಅಂಗಳದ ಹುಲ್ಲು ಕೀಳಲು ಬರುತ್ತಿದ್ದ ಆಳು 'ಸೋಮಪ್ಪ' ಎಲ್ಲರನ್ನು ಅಪ್ಪ ಪ್ರೀತಿ, ವಿಶ್ವಾಸಗಳಿಂದ ಕಾಣುತ್ತಿದ್ದರು.

ಶಬ್ದಗಳ ಪ್ರಯೋಗದ ಬಗ್ಗೆ, ಶಬ್ದಗಳ ಸ್ವರೂಪದ ಬಗ್ಗೆ ಅವರು ತುಂಬ ನಿಸ್ಪಷ್ಟವಾಗಿರುತ್ತಿದ್ದರು. ಅದರ ಬಗ್ಗೆ ಅವರು ನಿಖರವಾಗಿ, ಅಧಿಕಾರಯುತವಾಗಿ ಹೇಳಬಲ್ಲವರಾಗಿದ್ದರು. ಒಮ್ಮೆ ನಮ್ಮ ಶಾಲೆಯ ನಾಟಕೋತ್ಸವವಿತ್ತು. ಅದರ ಕರೆಯೋಲೆಯಲ್ಲಿ ಮಕ್ಕಳ 'ಹೆತ್ತವರು' ಬರುವಂತೆ ಆಹ್ವಾನವಿತ್ತು. ಆ ದಿನ ನನ್ನೊಂದಿಗೆ ಅಪ್ಪ ಶಾಲೆಗೆ ಬಂದರು ಆದರೆ ಅವರನ್ನು ಕಾರ್ಯಕ್ರಮ ವೀಕ್ಷಣೆಗೆ ಒಳಗೆ ಹೋಗಲು ಬಾಗಿಲು ಕಾಯುವವರು ಬಿಡಲಿಲ್ಲ. ಏಕೆ ಹೀಗೆ? ಎಂದರೆ 'ತಾಯಂದಿರಿಗೆ' ಮಾತ್ರ ಪ್ರವೇಶ ಎಂದರಂತೆ! ಮತ್ತೆ 'ಹೆತ್ತವರು' ಎಂಬ ಶಬ್ದದ ಸರಿಯಾದ ಅರ್ಥವನ್ನು (ತಂದೆ, ತಾಯಿ ಎಂದು) ಅಪ್ಪ ಅಧಿಕಾರಿಗಳಿಗೆ ತಿಳಿಸಿ ಹೇಳಿದರು. ಆ ದಿನ ಅವರು ಹೊರಗಡೆಯೇ ಕೂರಬೇಕಾಗಿ ಬಂದರೂ, ಮತ್ತೆ ಅಂಥ ಅಚಾತುರ್ಯವಾಗಲಿಲ್ಲ. (ಶಾಲಾಧಿಕಾರಿಗಳು 'ಹೆತ್ತವರು' ಎಂದರೆ 'ತಾಯಂದಿರು' ಎಂಬುದಾಗಿದೆ ಎಂದೇ ತಿಳಿದಿದ್ದರು.)

ಮೊದಲಿನಿಂದಲೂ ಅವರ ಆರೋಗ್ಯ ಅಷ್ಟು ಚೆನ್ನಾಗಿ ಇರಲಿಲ್ಲ ಹೀಗಾಗಿ ಅವರು ನಿಗದಿತ ವಯಸ್ಸಿಗಿಂತ ಮೊದಲೇ ನಿವೃತ್ತಿ ಪಡೆದುಕೊಂಡಿದ್ದರು. ಅದೇ ಕೆಲವು ವರ್ಷ

ಗಳ ಮೊದಲು ಅವರು ಹೈಸ್ಕೂಲು ಪಂಡಿತನ ಸ್ಥಾನದಿಂದ ಅದೇ ಕಾಲೇಜಿನ ಕನ್ನಡ ಟ್ಯೂಟರ್ ಆಗಿ ಬಡ್ತಿ ಹೊಂದಿದ್ದರು. ಅಪ್ಪ ನಿವೃತ್ತಿ ಪಡೆಯುವ ಮೊದಲೇ ಒಬ್ಬಳು ಕಿರಿಯ ತಂಗಿ ಹಾಗೂ ತಮ್ಮನ ಹೊರತಾಗಿ ನಮಗೆಲ್ಲ ಮದುವೆಯಾಗಿತ್ತು. ತಮ್ಮನು ತನ್ನ ಎಂ.ಟೆಕ್. ಮುಗಿಸಿ, ಕಾನ್ಪುರದಲ್ಲಿ ಉದ್ಯೋಗಸ್ಥನಾಗಿದ್ದ. ಹೀಗಾಗಿ ತಂದೆ ಊರಿನಲ್ಲಿ ತಮ್ಮ ಪಾಲಿಗೆ ಬಂದಿದ್ದ ಜಮೀನನ್ನು ಮಾರಿ ಕುಟುಂಬಸಮೇತರಾಗಿ ಮಂಗಳೂರನ್ನು ಬಿಟ್ಟು ಅತ್ತಕಡೆ ಹೋದರು. ಅಲ್ಲಿಂದ ಒಂದೆರಡು ವರ್ಷಗಳ ಅನಂತರ ತಮ್ಮ ಪಿಎಚ್.ಡಿ. ಮಾಡಲೆಂದು ಬೆಂಗಳೂರಿಗೆ ಬಂದಾಗ ಮೈಸೂರಿನಲ್ಲಿ ನೆಲೆನಿಂತರು. ಅವನ ಪಿಎಚ್.ಡಿ. ಮುಗಿದು ಬೆಂಗಳೂರಿನಲ್ಲಿ ಉದ್ಯೋಗ ದೊರೆಯಿತು. ಈ ಮೊದಲು ಅಜ್ಜ ಮೈಸೂರಿನಲ್ಲಿ ತೀರಿಕೊಂಡರು. ಕಿರಿಯ ತಂಗಿಯ ಮದುವೆಯೂ ಆಯಿತು. ಮತ್ತೆ ಅಪ್ಪ ಅಮ್ಮ ತಮ್ಮನೊಡನೆ ಇರಲಿಕ್ಕಾಗಿ ಬೆಂಗಳೂರಿಗೆ ಹೋದರು. ಆದಾಗಿ ೧–೨ ವರ್ಷಗಳಲ್ಲಿ ಅವನ ಮದುವೆಯಾಯಿತು. ಅಷ್ಟರಲ್ಲಿ ಅಪ್ಪನಿಗೆ ಬೆಂಗಳೂರಿನ ಹವೆ ಹಿಡಿಸದೆ ಮಣಿಪಾಲದಲ್ಲಿ ತಮ್ಮ ಕೆಲಸ ಹಿಡಿಯಬೇಕಾಯಿತು. ಅಂದಿನಿಂದ ಅಪ್ಪ ತಮ್ಮ ಕೊನೆಯ ದಿನದ ವರೆಗೆ—ಅಂದರೆ ಸುಮಾರು ೨೫ ವರ್ಷ ಅಲ್ಲೇ ಇದ್ದರು.

ಅವರ ಸಂಶೋಧನ ಲೇಖನಗಳಲ್ಲಿ ಕೆಲವು ಎಷ್ಟೋ ಮೊದಲೇ ಬರೆಯಲ್ಪಟ್ಟವುಗಳಾಗಿದ್ದರೂ ಪುಸ್ತಕ ರೂಪವನ್ನು ತಳೆದು, ಬೆಳಕು ಕಂಡದ್ದು ಮಣಿಪಾಲದಲ್ಲೇ. ಅಲ್ಲಿ ಅವರ ಅಭಿಮಾನಿಗಳ ಬಳಗ ತುಂಬ ಬೆಳೆಯಿತು. ಅವರಿಗೆ ಎಲ್ಲ ವಿಧದಲ್ಲೂ ಹಲವು ಸಜ್ಜನರು ಸಹಾಯಕರಾದರು. ಅವರ ನೀಳ್ಗವಿತೆ ‘ಶ್ವಮೇಧ’ ‘ಶಬರಿ’ ‘ಕರುಣ ಧಮನಿ’ ಮತ್ತು ‘ಕೆಲವು ಕವಿತೆಗಳು’ ‘ಪಳಮೆಗಳು’ ಎಂಬ ಕಥಾ ಸಂಕಲನ ಮಾತ್ರ ಮಂಗಳೂರಿನಲ್ಲಿದ್ದಾಗ ಪುಸ್ತಕ ರೂಪದಲ್ಲಿ ಪ್ರಕಟಗೊಂಡಿದ್ದರೆ, ಬಾಕಿ ಅವರ ಸಂಶೋಧನ ಕೃತಿಗಳು, ಹಲವರ ಪ್ರೀತಿಯ ಸಹಾಯಹಸ್ತದಿಂದ ಮಣಿಪಾಲದಲ್ಲಿ ಪುಸ್ತಕ ರೂಪ ಪಡೆದು ಇವುಗಳಿಗೆ ರಾಜ್ಯ ಪ್ರಶಸ್ತಿಗಳೂ ಬಂದುವು. ಈಗ ೩–೪ ವರ್ಷಗಳ ಕೆಳಗೆ ಅವರ ಸಾಹಿತ್ಯ ಸೇವೆಯನ್ನು ಗಮನಿಸಿ ‘ಚಿದಾನಂದ ಪ್ರಶಸ್ತಿ’ಯನ್ನು ಕೊಡಲಾಯಿತು. ಮರಣೋತ್ತರವಾಗಿ ಕೊಡಲಾದ ‘ಪಂಪಪ್ರಶಸ್ತಿ’ ಕೆಲವು ವರ್ಷಗಳ ಕೆಳಗೆ ಪ್ರಕಟವಾದ ಅವರ ‘ಛಂದೋಗತಿ’ ಅಥವಾ ‘ಕನ್ನಡ ಛಂದಸ್ಸು’ ಎಂಬ ಕೃತಿಗಳಿಗೆ ಸಿಗಬೇಕಾಗಿತ್ತು ಎಂದು ಅನಿಸುತ್ತದೆ. ಏನೇ ಆಗಲಿ, ಮರಣೋತ್ತರವಾಗಿಯಾದರೂ ಕರ್ನಾಟಕ ಸರಕಾರ ಅವರನ್ನು ಗುರುತಿಸಿ, ಗೌರವಿಸಿತೆನ್ನುವುದು ಸಮಾಧಾನ ಹಾಗೂ ಸಂತೋಷಕರವಾದ ವಿಚಾರ. ಎರಡು ವರ್ಷಗಳ ಕೆಳಗಷ್ಟೆ ಬಿಡುಗಡೆಯಾದ ಅವರ ಕೃತಿ ‘ತಥ್ಯದರ್ಶನ’ ನಮ್ಮ ದೇಶದ ಘನತೆ, ಗೌರವಗಳನ್ನು ಉತ್ತುಂಗ ಶಿಖರಕ್ಕೆ ಏರಿಸುವಂಥವುಗಳಾಗಿವೆ. ಭಾರತೀಯರಾದವರೆಲ್ಲರೂ ಓದಲೇಬೇಕಾದಂತಹುದಾಗಿದೆ. ಈ ಪುಸ್ತಕಗಳಲ್ಲಿ ಕೊನೆಯವೆರಡೂ ಅಪ್ಪ ದೃಷ್ಟಿಯನ್ನು ಕಳೆದುಕೊಂಡನಂತರ ಸನ್ಮಿತ್ರರಿಂದ ಹೇಳಿ ಬರೆಯಿಸಿದವುಗಳಾಗಿವೆ. ಹೀಗೆ ಮಣಿಪಾಲದ ಸುತ್ತಮುತ್ತಲಿನ ಅವರ ಅಭಿಮಾನಿಗಳು, ಹಿತೈಷಿಗಳು, ಹತ್ತು

ಹಲವು ವಿಧದಲ್ಲಿ ತಮ್ಮ ಪ್ರೀತಿಯ ಸಹಾಯಹಸ್ತವನ್ನು ಚಾಚಿ, ಅವರ ಅಭ್ಯುದಯಕ್ಕೆ ಕಾರಣರಾಗಿದ್ದಾರೆ. ಅವರ ಕನಸು ನನಸಾಗುವಲ್ಲಿ ಅವರೆಲ್ಲರ ಪಾತ್ರ ಹಿರಿದಾಗಿದೆ. ಇದಕ್ಕಾಗಿ ಮಕ್ಕಳಾದ ನಾವೆಲ್ಲ ಅತ್ಯಂತ ಕೃತಜ್ಞರು. ಅವರೆಲ್ಲರನ್ನೂ ಭಗವಂತನು ಸದಾ ಅನುಗ್ರಹಿಸಲೆಂದು ಪ್ರಾರ್ಥಿಸುವೆ.

ಅವರ ಆರೋಗ್ಯ ಹಲವು ವರ್ಷಗಳಿಂದೀಚೆ ತುಂಬಾ ನಾಜೂಕಾಗಿತ್ತು. ೧೦-೧೨ ವರ್ಷಗಳ ಕೆಳಗೆ ವಿಧಿ ಅವರ ದೃಷ್ಟಿಯನ್ನು ಕಸಿದುಕೊಂಡು, ಕತ್ತಲಿನ ಕೂಪಕ್ಕೆ ತಳ್ಳಿತು. (ಈ ದೃಷ್ಟಿಯಿಲ್ಲದಿದ್ದಾಗಲೇ ಅವರ ಅಮೂಲ್ಯ ಸಂಶೋಧನ ಗ್ರಂಥಗಳು ಬೆಳಕು ಕಂಡದ್ದು.) ಏನು ಬರೆಯುವುದಿದ್ದರೂ ಹೇಳಿ ಬರೆಯಿಸಬೇಕಷ್ಟೆ. ಈ ರೀತಿ ಆಯಿತು. ೬ ವರ್ಷಗಳ ಕೆಳಗೆ ನಮ್ಮ ಅಮ್ಮ ತೀರಿಕೊಂಡರು ಹೃದಯಾಘಾತದಿಂದ. ಈ ಕಡು ಕಷ್ಟದ ದಿನಗಳಲ್ಲಿ ವಿಧಿಯೊಡನೆ ಹೋರಾಡಿ ತಾವು ಮಾಡಬೇಕೆಂದು ಇದ್ದುದನ್ನು ಮಾಡಿದರು. ಸಾಧಿಸಬೇಕೆಂದು ಇದ್ದುದನ್ನು ಸಾಧಿಸಿದರು. ಇದು ಅವರ ಪ್ರಬಲ ಇಚ್ಛಾಶಕ್ತಿಯ ನಿದರ್ಶನ. ಆದರೆ ಈ ದಿನಗಳಲ್ಲಿ ತಮ್ಮ ಏಕಮಾತ್ರ ಪುತ್ರನ ಹಾಗೂ ಸೊಸೆಯ ಸಂಪೂರ್ಣ ಸಹಕಾರ ಹಾಗೂ ಶ್ರದ್ಧಾಪೂರ್ವಕ ಸೇವೆಯಿಲ್ಲದಿದ್ದರೆ ಅವರ ಈ ಸಾಧನೆ ತುಂಬಾ ಕಷ್ಟಸಾಧ್ಯವಾಗುತ್ತಿತ್ತು (ಇದರೊಂದಿಗೆ ಅವರ ಬರವಣಿಗೆಗೆ ಹಲವರು ಪ್ರೀತಿಯ ಹಸ್ತ ಚಾಚಿ ಅವರ ಪ್ರಯತ್ನವನ್ನು ಸಫಲಗೊಳಿಸಿದರು). ತನಗೆ ದೊರಕಬಹುದಾಗಿದ್ದ ವಿದೇಶದ ಉನ್ನತ ಹುದ್ದೆಗಳ ಅವಕಾಶಗಳನ್ನು ಕೈಬಿಟ್ಟು ಶ್ರದ್ಧೆಯಿಂದ ಅವನು ತನ್ನ ಅಪ್ಪನ ಸೇವೆಯನ್ನು ಮಾಡಿದ್ದಾನೆ. ಅವನ ಈ ಶ್ರದ್ಧಾಭಕ್ತಿ ಎಲ್ಲರ ಅದೃಷ್ಟದಲ್ಲಿ ಬಹುಶಃ ಇರಲಾರದು.

ಅವರ ಬದುಕಿನ ಕೊನೆಯ ಘಟ್ಟದಲ್ಲಿ ಏಕೋ ಅವರು ಸಿಡುಕು ಸ್ವಭಾವದವರಾಗಿ ತೋರುತ್ತಿದ್ದರು. ದೃಷ್ಟಿಹೀನತೆಯ ಅಸಹಾಯಕತೆ, ಅನಾರೋಗ್ಯ ಕಳೆದ ದಿನಗಳ ಕಹಿ ನೆನಪುಗಳು, ಅಪಮಾನ, ಬಡತನದ ಕಷ್ಟನಿಷ್ಠುರಗಳು, ಇವು ಅವರನ್ನು ಆ ಸ್ಥಿತಿಗೆ ತಳ್ಳಿರಬಹುದೇನೊ.

ಆಹಾರದಲ್ಲಿ ಸ್ವಲ್ಪ ವ್ಯತ್ಯಯವಾದರೂ ಅವರ ಆರೋಗ್ಯ ಏರುಪೇರಾಗುತ್ತಿತ್ತು. ಅತ್ಯಂತ ಅಲ್ಪ ಆಹಾರದಲ್ಲೇ ಇತ್ತೀಚಿನ ವರ್ಷಗಳನ್ನು ಕಳೆದರು. ಕಳೆದ ಒಂದು ವರ್ಷದಿಂದ ಎದ್ದು ಅತ್ತಿತ್ತ ಹೋಗಲೂ ಆಗದೆ ಹಾಸಿಗೆಯಲ್ಲೇ ಇರಬೇಕಾಯಿತು. ಅವರಿಗೆ ಆಗಬೇಕಾದ ಕೆಲಸಗಳಲ್ಲಿ ಸ್ವಲ್ಪ ಅತ್ತಿತ್ತ ಆದರೂ ಅವರು ಸಹಿಸುತ್ತಿರಲಿಲ್ಲ. ನಮ್ಮ ಪ್ರತಿಯೊಂದು ಕೆಲಸದಲ್ಲೂ ಅವರು ಪರಿಪೂರ್ಣತೆಯನ್ನು ಬಯಸುತ್ತಿದ್ದರು. ಆ ಮಟ್ಟವನ್ನು ತಲಪಲು ನಮಗೆ ಆಗುತ್ತಿರಲಿಲ್ಲ.

‘ಅಪ್ಪ ಯಾಕೆ ಹೀಗಾದರು?’ ಎಂದು ಎಷ್ಟೋ ಬಾರಿ ನನಗೆ ನಾನೇ ಪ್ರಶ್ನಿಸಿಕೊಂಡಿದ್ದೇನೆ. ಹಾಸಿಗೆಗೆ ಅಂಟಿಕೊಂಡ ಅವರ ಜೀರ್ಣದೇಹ ಕಂಡು ಕರುಳು ಹಿಂಡುತ್ತಿತ್ತು. ಆ ವಾತ್ಸಲ್ಯಮಯಿ, ಕರುಣಾಳು ಅಪ್ಪ ಇವರೇ? ಎಂದುಕೊಳ್ಳುತ್ತಿದ್ದೆ. ಏನಿದ್ದರೂ ಅವರು ನಮ್ಮ ಅಪ್ಪ. ನಮ್ಮಲ್ಲಿ ಏನಾದರೂ ಒಳ್ಳೆಯದು ಇದ್ದರೆ ಅದು ಅವರಿಂದ ಪಡೆದುದು ಎಂದು ನೆನೆದಾಗ ಕಣ್ಣು ಹನಿಗೂಡುತ್ತಿತ್ತು.

ಇಂದು ಅವರು ಇಲ್ಲ. ತಮ್ಮ 'ತಥ್ಯ ದರ್ಶನ'ದ ಇಂಗ್ಲಿಷ್ ಅನುವಾದ 'ಡಿಸ್ಕವರಿ ಆಫ್ ಫ್ಯಾಕ್ಟ್' ಬಿಡುಗಡೆಯಾದ ದಿನವೇ, ತಮ್ಮ ಜನ್ಮದಿನದಂದೇ ರಾತ್ರಿ (೮-೬-೧೯೯೬) ಅವರ ದಿವ್ಯ ಚೇತನ ಅನಂತದಲ್ಲಿ ಲೀನವಾಯಿತು. ಮಗ, ಇಬ್ಬರು ಮೊಮ್ಮಕ್ಕಳು, ಸೊಸೆ ಇವರ ಹೊರತಾಗಿ ಹೆಣ್ಣುಮಕ್ಕಳಾದ ನಮಗಾರಿಗೂ ಆ ಹೊತ್ತಿನಲ್ಲಿ ಅವರ ಬಳಿ ಇರಲಾಗಲಿಲ್ಲ ಎಂಬ ನಮ್ಮ ದೌರ್ಭಾಗ್ಯಕ್ಕೆ ದುಃಖವಾಗುತ್ತಿದೆ. ಅವರ ಆತ್ಮ ಆ ಗ್ರಂಥ ಬಿಡುಗಡೆಗೊಳ್ಳುವುದನ್ನು ಕಾಯುತ್ತಿತ್ತೇನೊ? ಅದೇ ಒಂದು ಆಕಾಂಕ್ಷೆಯಿಂದ ಅವರ ಜೀರ್ಣ ಶರೀರದಲ್ಲಿ ಕುಟುಕು ಜೀವ ಇಟ್ಟುಕೊಂಡು, ಈ ಲೋಕಕ್ಕೆ ಅಂಟಿಕೊಂಡಿತ್ತೇ?

ಅದಕ್ಕೆ ಕೆಲವು ದಿನಗಳ ಮೊದಲು ನನಗೆ ಅವರ ಪಕ್ಕ ೬-೭ ದಿನಗಳ ಕಾಲ ಇರುವ ಭಾಗ್ಯ ಲಭಿಸಿತ್ತು. ಮತ್ತೆ ಅವರಿಂದ ಬೀಳ್ಕೊಂಡು ಹೊರಟ ಕಡೆಯ ಕ್ಷಣದಲ್ಲಿ ಅವರು ನನಗೆ ಹೇಳಿದ ಕೊನೆಯ ಮಾತು —"ಸತ್ಯ ಹೇಳಲು ಹೆದರಬಾರದು." ಅವರೆಂದಂತೆ ನಡೆದರೆ ಅದೇ ನಾನು ಅವರಿಗೆ ಮಾಡಬಹುದಾಗಿದ್ದ ಸೇವೆ, ಸಲ್ಲಿಸಬಹುದಾದ ಕಾಣಿಕೆ ಎಂದು ಭಾವಿಸುವೆ.



ಕಲ್ಲು ಇಟ್ಟಿಗೆಗಳಿಂದ ಕಟ್ಟಿರುವ ಗುಡಿಗೋಪುರಗಳಿಗಿಂತ ನರಮಾಂಸಗಳಿಂದ ನಿರ್ಮಾಣವಾಗಿರುವ ಮಾನವ ಶರೀರಗಳೇ ನಿಜವಾದ ದೇವಾಲಯಗಳು.

ಮಾನವ ಕುಲವೊಂದು ಮಹಾಸಾಗರ. ಕೆಲವು ಹನಿಗಳು ಹೊಲಸಾದರೆ ಇಡೀ ಸಾಗರ ಹೊಲಸಾಗುವುದಿಲ್ಲ.

—ಗಾಂಧೀಜಿ

ಗುರುಗಳು

ಎಂ. ಎಸ್. ಲಕ್ಷ್ಮಣಾಚಾರ್

ಹೊರಗಿನ ಅಂಗಳದ ಮೂಲೆಯಲ್ಲಿ ಸ್ವಲ್ಪ ಹೊತ್ತು ಅಡ್ಡಾಡಿದ ನಂತರ ರಾಮಯ್ಯರ್ ಜಗುಲಿಯ ಮೇಲೆ ಬಂದರು.

"ಯಾರದೂ?" ರಾಮಯ್ಯರ್ ಕೇಳಿದರು.

"ನಾನು, ಅಯ್ಯಪ್ಪನ್" ಆ ಹುಡುಗನು ಅವರಿಗೆ ನಮಸ್ಕಾರ ಮಾಡುತ್ತಾ ಹೇಳಿದನು.

"ಅಂದರೆ?" ಅಯ್ಯರ್ ಹುಬ್ಬುಗಂಟಿಕ್ಕಿ ಕೇಳಿದರು.

"ಕೆಳ ಹಿತ್ತಲಿನ ಚಾತ್ತುವಿನ ಮಗ ಅಯ್ಯಪ್ಪನ್".

"ಓ" ಅವರ ಹುಬ್ಬುಗಂಟು ಬಿಚ್ಚಿಕೊಂಡಿತು. ಅನಂತರ ಹಿತ್ತಲೆಲ್ಲಾ ಮೊಳಗುವಂತೆ ಕೇಳಿದರು "ಏನು ಬೇಕು?"

"ನನ್ನನ್ನು ಅನುಗ್ರಹಿಸಬೇಕು". ಅಯ್ಯಪ್ಪನ್ ಮನೆಯ ಸೂರಿನ ಬಳಿ ಸರಿದು ನಿಂತು ಹೇಳಿದನು.

"ಅಂದರೆ?"

"ನನಗೆ ಲೆಕ್ಕ ಕಲಿಸಬೇಕು."

"ಅರ್ಥವಾಗಲಿಲ್ಲ?"

"ನಿಮ್ಮ ಶಿಷ್ಯನಾಗಬೇಕು."

"ಅಹಹಾಹಾ" ಅಯ್ಯರ್ ಜೋರಾಗಿ ನಕ್ಕು ಹೇಳಿದರು. "ಆಸೆಯೇನೋ ಬೆಟ್ಟದಷ್ಟಿರುವಂತಿದೆ."

"ಯಾಕೆ ಸ್ವಾಮಿ?

"ಚಾತ್ತುವಿನ ಮಗನಿಗೆ ಗಣಿತ ವಿದ್ಯೆ ತಕ್ಕದ್ದಲ್ಲ."

"ತಂದೆಯವರು ಮಳಿಗೆಯಲ್ಲಿ ಪ್ಯೂನ್ ಆಗಿದ್ದರು. ಅಲ್ಲಿ ಲೆಕ್ಕ ಬರೆಯುವುದನ್ನು ಬಹಳ ನೋಡಿದ್ದಾರೆ."

"ಇದೊಳ್ಳೆ ಕಾಲಹರಣವಾಯಿತು. ಸೇಟರ ಮಳಿಗೆಯಲ್ಲಿ ಲೆಕ್ಕ ಬರೆಯುವುದನ್ನು ಚಾತ್ತು ನೋಡಿದ್ದನಂತೆ. ಬಹಳ ಆಶ್ಚರ್ಯ."

"ಲೆಕ್ಕಾ ಬರೆಯುವುದನ್ನು ನಾನು ಕಲಿತು ಮುಂದಕ್ಕೆ ಬರಬೇಕೆಂದು ತಂದೆಯವರು ಬೆಟ್ಟದಷ್ಟು ಆಸೆಯಿಟ್ಟುಕೊಂಡಿದ್ದರು.

"ಅಂದರೆ."

"ಚಾರ್ಟರ್ಡ್...." ಅಯ್ಯಪ್ಪನ್ ತಟ್ಟನೆ ಮಾತನಾಡುವುದನ್ನು ನಿಲ್ಲಿಸಿ, ಅಯ್ಯರ್‌ರ ಮುಖದ ಬಣ್ಣ ಬದಲಾಗುವುದನ್ನು ಗಮನಿಸಿದನು. ತಾನು ಮೂರ್ಖನಂತಾಡಿ

ಆಧಾರ: ಸೇತುಮಾಧವನ್ ಅವರ ಮಳಯಾಳಂ ಕತೆ.

ದೆನೇ ಎಂಬ ಸಂಶಯದಿಂದ ಅವನು ಮಾತು ಮುಂದುವರಿಸಲಿಲ್ಲ.

ಅಯ್ಯರ್‌ರ ದೃಷ್ಟಿ ಆ ಕಪ್ಪಗಿನ ಸಣಕಲ ಹುಡುಗನ ಮೇಲೆ ಅಪಾದಮಸ್ತಕವಾಗಿ ಹರಿಯಿತು. ಇಸ್ತ್ರಿ ಮಾಡಿದ್ದರೂ ಸುಕ್ಕುಗಳು ಬಿದ್ದ ಅರ್ಧ ತೋಳಿನ ಷರ್ಟು, ಕೊಳೆಯಾದ ಮುಖ, ಕ್ಷೀಣಗೊಂಡ ಕಣ್ಣುಗಳು, ಮನಸ್ಸಿಗೆ ನಾಟುವ ಮುಖಭಾವ.

"ಅಯ್ಯಪ್ಪ, ಹಿಂದಿನ ಕಾಲದವರು ಕೆಲ ಮಾತುಗಳನ್ನು ಹೇಳುತ್ತಿದ್ದರು. ಜಾತಿಯ ವಿಷಯ. ಅವರು ಒಂದೊಂದು ಜಾತಿಗೂ ಒಂದೊಂದು ಸ್ಥಾನ ಕೊಟ್ಟಿದ್ದಾರೆ. ಅದಕ್ಕೆ ಅತಿರಿಕ್ತವಾದ ಮೋಹ ಪಡದೆ ಇರುವುದು ನಿನಗೇ ಒಳ್ಳೆಯದು. ವಿದ್ಯಾದಾನವೆಂದರೆ ಅದಕ್ಕೆ ತಕ್ಕ ಯೋಗ್ಯತೆ ಇರಬೇಕಲ್ಲವೇ ?"

ಆದರೆ ಅಯ್ಯಪ್ಪನ್ ಆಗಲೂ ಕೈ ಜೋಡಿಸಿಕೊಂಡೇ ನಿಂತಿದ್ದನು.

"ನಿಮ್ಮ ಬಳಿ ಶಿಷ್ಯವೃತ್ತಿ ಮಾಡಬೇಕೆಂಬುದೇ ನನ್ನ ಮಹದಾಸೆ. ಬೇರೊಬ್ಬ ಗುರುವನ್ನು ನನ್ನ ಮನದಲ್ಲಿ ನೆನೆಯಲೂ ಸಹ ಸಾಧ್ಯವಿಲ್ಲ. ನಾನು ಏನು ಕೆಲಸ ಬೇಕಾದರೂ ಮಾಡುತ್ತೇನೆ. ಮನೆ ಗುಡಿಸಿ ಸಾರಿಸುವುದೋ, ಸೌದೆ ಒಡೆಯುವುದೋ, ನೀರು ಸೇದುವುದೋ, ಎಂಜಲು ಪಾತ್ರೆಗಳನ್ನು ತೊಳೆಯುವುದೋ ಬಟ್ಟೆ ಒಗೆಯುವುದೋ. ಏನು ಬೇಕಾದರೂ ಮಾಡಿಕೊಡುತ್ತೇನೆ. ತಾವು ಮಾತ್ರ ನನ್ನ ಕೈಬಿಡಬೇಡಿ."

ಅವನ ಮುಖ ಬಾಡುತ್ತಿರುವುದನ್ನು, ಕಣ್ಣುಗಳಲ್ಲಿ ನೀರು ತುಂಬುವುದನ್ನು ಅಯ್ಯರ್‌ರು ನೋಡಿದರು.

"ಅರೆರೇ ಏನಿದು ?" ಅಯ್ಯರ್‌ರೆಂದರು." ನಿನ್ನ ಭಕ್ತಿಯನ್ನು ನೋಡಿದರೆ ನನಗೇ ಖುಷಿಯಾಗುತ್ತಿದೆ. ಆದರೂ ಶಿಷ್ಯತನವೆಂದೆನ್ನುವಾಗ ಅದಕ್ಕೆ ಆವಶ್ಯವೆನಿಸುವ ಕೆಲ ಯೋಗ್ಯತೆಗಳನ್ನು ನಾನು ಈ ಮೊದಲೇ ಖಚಿತಪಡಿಸಿಕೊಂಡಿದ್ದೇನಲ್ಲಾ, ಅವರಂತೆ ಕೆಲ ನಿಯಮಗಳನ್ನೂ ಸಹ ಮಾಡಿಕೊಂಡಿದ್ದೇನೆ. ಆ ವಿಷಯವು ಬಲು ಮುಖ್ಯವಾಗಿದೆ. ನೀರು ತುಂಬಿಸುವುದರಿಂದಲೋ, ದರ್ಭೆಯ ಹುಲ್ಲು ಹಾಸುವುದರಿಂದಲೋ ಯಾವನೂ ಶಿಷ್ಯನೆನಿಸಿಕೊಳ್ಳುವುದಿಲ್ಲ. ರಿಯಾಯಿತಿಯನ್ನು ತೋರಿಸಲು ಯಾವುದೇ ಕಾರಣ ತೋರುತ್ತಲೂ ಇಲ್ಲವಲ್ಲಾ ?"

"ಸ್ವಾಮಿ ತಾವು ಹಾಗೆನ್ನಬಾರದು." "ಅಯ್ಯಪ್ಪನ್ ಮತ್ತೆ ಮತ್ತೆ ಬೇಡುತ್ತಿದ್ದನು. "ಈ ವಿಷಯವನ್ನು ತತ್ಕಾಲಕ್ಕೆ ಮನಸ್ಸಿನಲ್ಲಿಟ್ಟುಕೊಂಡಿರಬೇಕು. ನಾನು ಎರಡು ಮೂರು ದಿನಗಳನಂತರ ಬರುತ್ತೇನೆ."

"ಬೇಡ" ಅಯ್ಯರ್‌ರು ಖಡಾಖಂಡಿತವಾಗಿ ಹೇಳಿದರು. "ಬರಬೇಕಿಲ್ಲ. ಇದರ ನೆಪ ಮಾಡಿಕೊಂಡು ನೀನು ಮತ್ತೆ ಮತ್ತೆ ಇಲ್ಲಿಗೆ ಬರಬೇಕಿಲ್ಲ. ನಿನ್ನ ಮುಖ ನೋಡುತ್ತಾ ಮತ್ತೆ ಮತ್ತೆ ಆಗೋದಿಲ್ಲ, ಆಗೋದಿಲ್ಲ ಎಂದು ಹೇಳುವುದಕ್ಕೆ ನನಗೆ ಕಷ್ಟವೆನಿಸುತ್ತದೆ. ವಿದ್ಯೆಯನ್ನು ಯಾವಾಗಲೂ ಮನಃಪೂರ್ವಕವಾಗಿ ಕಲಿಸಬೇಕಾದದ್ದು. ಅದಕ್ಕೆ ಸೇರಿದ ನಿಯಮಗಳನ್ನು ಈ ವಯಸ್ಸಿನಲ್ಲಿ ನಾನು ಮೀರಲು ನನಗೆ ಕಷ್ಟವೆನಿಸುತ್ತಿದೆ."

ಇನ್ನು ಅಲ್ಲಿ ನಿಂತು ಪ್ರಯೋಜನವಿಲ್ಲವೆಂದು ಅಯ್ಯಪ್ಪನ್‌ಗೆ ಅರ್ಥವಾಯಿತು. ಆದರೂ ಹಲವಾರು ವರ್ಷಗಳಿಂದ ಆ

ಮಹದಾಸೆಯು ತನ್ನಲ್ಲಿ ಬಲವಂತವಾಗಿ ಪ್ರವೇಶ ಮಾಡುತ್ತಲೇ ಇದೆ. ಅದನ್ನು ಹತ್ತಿಕ್ಕಲು ಸಾಧ್ಯವೇ ಆಗುತ್ತಿಲ್ಲ. ಆದ್ದರಿಂದ ಇನ್ನೂ ಸ್ವಲ್ಪ ಹೊತ್ತು ಹಾಗೇ ಕಾಯುತ್ತಾ ನಿಂತನು. ಅನಂತರ ಅಯ್ಯರ್‌ರು ಜಗುಲಿಯಿಂದ ಪೋರ್ಟಿಕೋಗೆ ಬಂದಿಳಿದು ತಲೆಬಾಗಿಲನ್ನು ದೊಡ್ಡ ಶಬ್ದದೊಂದಿಗೆ ಎಳೆದು ಮುಚ್ಚಿದಾಗ ಅವನು ಅಲ್ಲಿಂದ ಕಾಲ್ತೆಗೆದು ಜೋಲು ಮುಖ ಹಾಕಿಕೊಂಡು ಹಿಂದಿರುಗಿ ನಡೆದನು.

ಆದರೂ ಆ ಮಹತ್ತರ ಆಸೆಯನ್ನು ಬಿಟ್ಟುಕೊಡಲು ಅಯ್ಯಪ್ಪನ್ ಸಿದ್ಧನಿರಲಿಲ್ಲ. ಚಿಕ್ಕಂದಿನಿಂದಲೇ ಮನಸ್ಸಿನಲ್ಲಿಟ್ಟುಕೊಂಡು ನೀರೆರೆದು ಬೆಳೆಸಿದ್ದ ಆ ಆಸೆ ಅವನ ಮನಶ್ಶಾಂತಿಯನ್ನು ಕೆಡಿಸಿತ್ತು. ಒಂದು ವೇಳೆ ತಾನು ಹೋಗಿ ಸ್ವಾಮಿಯವರನ್ನು ಮಾತನಾಡಿಸಿದ ಸಮಯವೇ ಸರಿಯಿರಲಿಲ್ಲವೇನೋ? ಅವರೇ ತನ್ನ ಗುರುಗಳೆಂದು ಹೋಗಿ ಕಾಲಿಗೆ ನಮಸ್ಕರಿಸಿದಾಗ ತನ್ನನ್ನು ಹೀಗೆ ನಿರಾಕರಿಸುವುದು ಅವರಿಗೆ ತರವೇ? ನ್ಯಾಯವೇ?

ಏನೇ ಆಗಲಿ ಈ ಕೆಲಸ ಕಲಿಯಲೇಬೇಕು. ಅದರಲ್ಲಿ ಹೆಸರುವಾಸಿಯಾಗಬೇಕು. ಅಯ್ಯಪ್ಪನ ಮನಸ್ಸಿನಲ್ಲಿ ಒಂದು ಹಠ ಹುಟ್ಟಿತು.

ಆದರೆ ಅದನ್ನು ಕಲಿಸಲು ಗುರುಗಳೊಬ್ಬರು ಬೇಡವೇ?.

ಲೆಕ್ಕಗಳ ಮಾಯಾಲೋಕದಲ್ಲಿನ ವಕ್ರದಾರಿಗಳನ್ನೂ, ತಿರುವುಗಳನ್ನೂ, ಸರಿಯಾದ ದಾರಿಗಳನ್ನೂ, ಏರಿಳಿತಗಳನ್ನೂ, ಅಂಕುಡೊಂಕುಗಳನ್ನೂ ಚೆನ್ನಾಗಿ ತಿಳಿದಿರುವ ಒಬ್ಬರೇ ಒಬ್ಬರೆಂದರೆ ಇಲ್ಲಿಯ ರಾಮಯ್ಯರ್ ಮಾತ್ರವಾಗಿದ್ದರು. ಬಹಳಷ್ಟು ಜನರು ಶಿಷ್ಯತನಕ್ಕೆಂದು ಅವರ ಕಂಪೆನಿಯಲ್ಲಿ ಸೇರಿದ್ದರೂ, ಅವರ ಪ್ರೀತಿ ವಿಶ್ವಾಸಗಳಿಗೆ ಅರ್ಹನಾದವನು ಒಬ್ಬನೇ ಒಬ್ಬನೆಂದು ಎಲ್ಲರಿಗೂ ಗೊತ್ತಿತ್ತು. 'ಕಲ್ಪಾತಿ'ಯಿಂದ ಬಂದಿದ್ದ ಸ್ವಲ್ಪ ಮೆಳ್ಳೆಗಣ್ಣನ ಆ ವ್ಯಕ್ತಿಯ ಹೆಸರು ವೆಂಕಿ ಎಂಬುದಾಗಿ. ಅವನಿಗೆ ಮಾತ್ರವೇ ಗುರುಗಳು ತಮ್ಮ ವಿದ್ಯೆಯನ್ನೆಲ್ಲಾ ಧಾರೆಯೆರೆಯುತ್ತಿದ್ದಾರೆಂದು ಮಿಕ್ಕ ಶಿಷ್ಯರೆಲ್ಲಾ ದೂರುತ್ತಿದ್ದರು.

ಏನೇ ಆಗಲಿ ಬಾಲ್ಯದಲ್ಲಿಯೇ ತನ್ನ ಮನಸ್ಸಿನಲ್ಲಿ ಬಿತ್ತಿದ ಇಚ್ಛೆಯು ಆಳವಾಗಿ ಬೇರು ಬಿಟ್ಟು ಕವಲೊಡೆದಾಗಿತ್ತು. ಇನ್ನು ಅದನ್ನು ಕಿತ್ತುಹಾಕಲು ತನಗೆ ಸಾಧ್ಯವಿಲ್ಲ. ಸಾಯುವುದಕ್ಕಿಂತ ಮುಂಚೆಯೇ ತಂದೆಯವರಿಗೆ ಮಾತು ಕೊಟ್ಟಾಗಿದೆ. ಅದರಂತೆ ಒಬ್ಬ ಗುರುವನ್ನು ಮಾತ್ರವೇ ತಾನು ತನ್ನ ಮನಸ್ಸಿನಲ್ಲಿ ಚಿತ್ರಿಸಿಕೊಂಡಿದ್ದಾಗಿದೆ. ಇನ್ನು ಬೇರೆಯ ಒಂದು ರೂಪವನ್ನು ಕಾಣಲು ಸಾಧ್ಯವಿಲ್ಲ.

ಏನೇ ಆದರೂ ತನ್ನ ಈ ತೀರ್ಮಾನವು ಬದಲಾಗಲು ಸಾಧ್ಯವಿಲ್ಲ.

ಅನಂತರ ಅಯ್ಯಪ್ಪನ್ ರಾಮಯ್ಯರ್‌ರ ಒಂದು ಫೋಟೋ ಸಂಪಾದಿಸಬೇಕೆಂದು ಯೋಚಿಸಿದನು. ಅದಕ್ಕೆ ಸರಿಯಾದ ವ್ಯವಸ್ಥೆಯೇ ಆಗಬೇಕಿತ್ತು. ಅಯ್ಯರ್‌ರು ಸಾಧಾರಣವಾಗಿ ಬಂದು ಫೋಟೋ ತೆಗೆಸಿಕೊಳ್ಳಲು ನಿಂತುಕೊಳ್ಳುವವರಲ್ಲ. ಒಂದೊಂದು ಫೋಟೋವನ್ನು ತೆಗೆಯುವಾಗ ಅವರು ನಿಂತುಕೊಳ್ಳುವಷ್ಟು ಸಮಯ ಅವರ ಆಯುಸ್ಸಿನಿಂದ ಕಡಿಮೆಯಾಗಿ ಹೋಗುತ್ತೆಂದು ಅವರು ನಂಬಿದ್ದರು. ಆದ್ದ

ರಿಂದ ಅವರು ತೆಗೆಸಿಕೊಂಡಿದ್ದ ಒಂದು ಹಳೆಯ ಗ್ರೂಪ್ ಫೋಟೋವನ್ನು ಸಂಪಾದಿಸಲು ಅವನು ಬಹಳ ಕಷ್ಟಪಡಬೇಕಾಯಿತು. ಆದರೆ ಅದರಲ್ಲಿದ್ದ ಅವರ ಮುಖವೂ, ಅದರಲ್ಲಿ ರೂಪುಗೊಂಡಿದ್ದ ಭಾವವೂ ಅಯ್ಯಪ್ಪನಿಗೆ ಸ್ವಲ್ಪವೂ ಹಿಡಿಸಲಿಲ್ಲ. ಅವರಿಗೇ ಒಂದು ಪ್ರತ್ಯೇಕವಾದ ಅವರ ಮುಖದಲ್ಲಿನ ಒಂದು ವಕ್ರತೆ, ನರಿಯ ಕಣ್ಣುಗಳ ತೀಕ್ಷ್ಣತೆ ಅವರ ಆ ಫೋಟೋದಲ್ಲಿರಲಿಲ್ಲ.

ಕೊನೆಗುಳಿದಿದ್ದು ಒಂದೇ ದಾರಿ. ಅವರ ಚಿತ್ರವನ್ನು ತಾನೇ ಬಿಡಿಸುವುದು. ಆದರೆ ಅದು ಅಯ್ಯಪ್ಪನಿಗೆ ಪರಿಚಿತ ವಿದ್ಯೆಯಾಗಿರಲಿಲ್ಲ. ಆದರೂ ಒಂದು ದಿನ ಬೆಳಗಿನ ಜಾವವೇ ಅಯ್ಯಪ್ಪನೆದ್ದು ಹಣೆಗೆ ವಿಭೂತಿ ಹಚ್ಚಿಕೊಂಡು ದೇವರ ಮನೆ ಹೊಕ್ಕು ಸ್ವಲ್ಪ ಹೊತ್ತು ಧ್ಯಾನಮಗ್ನನಾಗಿ ಕುಳಿತವನೆ ಚಿತ್ರ ಬಿಡಿಸತೊಡಗಿದ; ತನ್ನನ್ನೇ ಮರೆತು ಅವನು ಬಿಡಿಸುವುದರಲ್ಲಿ ಮಗ್ನನಾದ. ಅವನ ಕಣ್ಣ ಮುಂದೆ ಇದ್ದದ್ದು ಒಂದೇ ಒಂದು ರೂಪವಾಗಿತ್ತು. ಮನಸ್ಸಿನಲ್ಲೆಲ್ಲಾ ತುಂಬಿ ಕವಿದಿರುವ ಭಕ್ತಿಯಲ್ಲಿ ಒಂದೇ ಒಂದು ರೂಪ ಅವನ ಕಣ್ಣ ಮುಂದೆ ಸ್ಪಷ್ಟವಾಗಿ ಕಾಣುತ್ತಿತ್ತು. ಅದೇ ಸರ್ವಶಕ್ತನಾದ ಗುರುವಿನ ರೂಪ.

ಚಿತ್ರ ಪೂರ್ಣವಾದ ನಂತರ ಅವನದನ್ನು ಕಣ್ತುಂಬಾ ನೋಡುತ್ತಾ ಕುಳಿತನು. ನೋಡಿ ನೋಡಿ ಅವನ ಕಣ್ಣುಗಳು ತುಂಬಿದವು. ಆಶ್ಚರ್ಯ? ಅವನ ಶಕ್ತಿ ಚೈತನ್ಯಗಳು ಆ ಕಾಗದದಲ್ಲಿ ಹರಡಿ ಹೋಗಿದ್ದವು. ಆ ಮುಖದಲ್ಲಿ ಈಗ ರಕ್ತದ ತುಡಿತವಿತ್ತು. ಆ ಕಣ್ಣುಗಳಲ್ಲಿ ಈಗ ನರಿಯ ಕಣ್ಣುಗಳ ತೀಕ್ಷ್ಣತೆ ಮಾರ್ದನಿಸುತ್ತಿತ್ತು.

ಆ ಭಾವಚಿತ್ರಕ್ಕೆ ಕಟ್ಟು ಹಾಕಿಸಿ ತನ್ನ ಕೋಣೆಯ ಗೋಡೆಗೆ ತಗುಲಿ ಹಾಕಿದನು. ಅದರ ಎದುರಿಗೆ ದಿನವೂ ಎರಡು ಹೊತ್ತೂ ದೀಪ ಹಚ್ಚಿಟ್ಟನು. ಎರಡು ಹೊತ್ತೂ ನಮಸ್ಕಾರ ಮಾಡತೊಡಗಿದನು. ಅದರ ಬಳಿ ಒಂದು ಮೇಜನ್ನು ಹಾಕಿ ಬೇಕಾದ ಪುಸ್ತಕಗಳನ್ನೆಲ್ಲಾ ತಂದಿರಿಸಿ ಓದಿಕೊಳ್ಳತೊಡಗಿದನು. ಓದುವುದು ಎಂದರೆ ಎಲ್ಲವನ್ನೂ ಮರೆತು ಓದತೊಡಗಿದನು. ಅವನ ಓದು ಅಷ್ಟು ಶ್ರಮದಿಂದ ಕೂಡಿದ್ದಾಗಿತ್ತು. ಪರೀಕ್ಷೆ ಬರೆಯಲೆಂದು ಬೇರೆ ಒಬ್ಬ ಹುಡುಗನೊಂದಿಗೆ ಹೋಗಿ ಬರೆದು ಬರುತ್ತಿದ್ದನಾದರೂ ಪರೀಕ್ಷೆಗೆ ತಯಾರಿ ನಡೆಸಿದ್ದು ಗುರುವಿನ ಫೋಟೋವಿನ ಮುಂದೆ ಮಾತ್ರವಾಗಿತ್ತು. ಅದರಂತೆಯೇ ಆ ಪರೀಕ್ಷೆಯಲ್ಲಿ ಅವನು ಫಸ್ಟ್ ಕ್ಲಾಸ್‌ನಲ್ಲಿ ಪಾಸ್ ಸಹ ಮಾಡಿದನು. ಆದರೆ ಈ ವಿಷಯಗಳ್ಯಾವುವೂ ಗುರುಗಳಿಗೆ ಗೊತ್ತಾಗಲೇ ಇಲ್ಲ.

ಅವರೆ ಪೇಟೆಯಲ್ಲಿ ಒಂದು ಅಂಗಡಿ ಕೋಣೆಯನ್ನು ಬಾಡಿಗೆಗೆ ತೆಗೆದುಕೊಂಡು ಅಯ್ಯಪ್ಪನ್ ಬೋರ್ಡೊಂದನ್ನು ಮೊಳೆ ಹೊಡೆದು ತಗುಲಿ ಹಾಕಿದಾಗ ವಿಷಯ ಗುರುಗಳಿಗೆ ಗೊತ್ತಾಯಿತು. ಅಂದು ಬೆಳಗೆ ಅಯ್ಯಪ್ಪನ್ ಮೂರು ವಿಭೂತಿ ಹಚ್ಚಿಕೊಂಡು ದೇವಸ್ಥಾನಕ್ಕೆ ಹೋಗಿ ನಮಸ್ಕರಿಸಿದ ನಂತರ ಗುರುಗಳ ಬಳಿ ಬಂದನು.

"ನಾನು ಅಯ್ಯಪ್ಪನ್" ಹೊರಾಂಗಣದಲ್ಲಿ ನಿಂತುಕೊಂಡೇ ಅಯ್ಯಪ್ಪನ್ ತನ್ನ ಗುರುಗಳಿಗೆ ನಮಸ್ಕರಿಸಿದನು.

"ನನಗೆ ಆಶೀರ್ವಾದ ಮಾಡಬೇಕು."

"ಯಾತಕ್ಕಾಗಿ?" ರಾಮಯ್ಯರ್ ಗುರುಗುಟ್ಟಿದರು.

ಈ ದಿನ ನಾನು ಪ್ರಾಕ್ಟೀಸ್ ಆರಂಭಿಸು ತ್ತಿದ್ದೇನೆ."

"ಗೊತ್ತಾಯಿತು."

"ತಮ್ಮ ಆಶೀರ್ವಾದ ಬೇಕು."

ಅಯ್ಯರ್ ಸ್ವಲ್ಪ ಆಲೋಚಿಸಿ ಹೇಳಿದರು :

"ಆಶೀರ್ವಾದವೆಂದು ಹೇಳುವಾಗ ಅದಕ್ಕೆ ಕೆಲ ರೂಲ್ಸ್‌ಗಳೆಲ್ಲಾ ಇವೆ ಅಯ್ಯಪ್ಪ. ನೀನು ಪರೀಕ್ಷೆಗಳನ್ನು ಪಾಸ್ ಮಾಡಿರಬಹುದು. ಆದರೆ ನೀನು 'ಚಾತ್ತು' ವಿನ ಮಗನಲ್ಲದೆ ಬೇರೆಯುವನಾಗುತ್ತೀಯೇನು?'

ಆ ಮಾತುಗಳು ಅಯ್ಯಪ್ಪನ ಮನಸ್ಸಿನ ಮೂಲೆಯಲ್ಲಿ ಚೆನ್ನಾಗಿಯೇ ನಾಟಿದವು. ನಾಟಿದ ಜಾಗದಲ್ಲಿ ಗಾಯವಾಗಿ ರಕ್ತ ಸುರಿಯಿತು. ಹಾಗಾಗಿದ್ದರೂ ಅಯ್ಯಪ್ಪನ್ ಆ ಗಾಯದ ಉರಿಯನ್ನು ಸಹಿಸಿದನು. ಎಷ್ಟೇ ಆದರೂ ಅವರು ತನ್ನ ಗುರುಗಳಲ್ಲವೇ? ಅವರಿಗೆ ರಕ್ಷಿಸಲೂ ಶಿಕ್ಷಿಸಲೂ ಶಕ್ತಿ ಇದ್ದೇ ಇದೆ. ಅವರೇನೇನೆಂದರೂ ಅವರ ಆ ಫೋಟೋವಿನ ಸಾನಿಧ್ಯದಲ್ಲಿದ್ದರಿಂದಲ್ಲವೇ ತಾನು ಇಷ್ಟು ಮೇಲೇರಲು ಸಾಧ್ಯವಾದದ್ದು? ತನ್ನ ಕೋಣೆಯ ಸರ್ವಸ್ವವನ್ನೂ ಅವರು ವ್ಯಾಪಿಸಿಕೊಂಡಿದ್ದರಲ್ಲವೇ? ಯಾವುದೇ ಪ್ರಶ್ನೆಯ ಉತ್ತರಗಳೂ, ಯಾವುದೇ ಕ್ಲಿಷ್ಟ ಸಮಸ್ಯೆಯಿಂದ ಹೊರಬರುವಂತಹ ತಂತ್ರಗಳೂ ಎಲ್ಲಾ ಅವರ ಮುಖದಿಂದ ತತ್‌ಕ್ಷಣ ಹೊರ ಬರುತ್ತಿದ್ದವಲ್ಲಾ? ದಾರಿ ಕಾಣದಾದಾಗ ಆ ಕಣ್ಣುಗಳನ್ನೊಮ್ಮೆ ನೋಡಿದರೆ ಸಾಕು ದಾರಿ ಸುಲಭವಾಗಿ ಕಂಡುಬರುತ್ತಿತ್ತು.

"ನನ್ನನ್ನೊಮ್ಮೆ ಆಶೀರ್ವದಿಸಬೇಕು."

ಅಯ್ಯಪ್ಪನ್ ಮತ್ತೆ ಮತ್ತೆ ಅದೇ ವಾಕ್ಯವನ್ನುಚ್ಚರಿಸಿದನು.

ರಾಮಯ್ಯರ್ ಒಮ್ಮೆ ನಕ್ಕರು. ಅವನಿಗೆ ಬೆನ್ನು ಮಾಡಿ ನಿಂತವರು ಮೂರು ಹೆಜ್ಜೆ ಹಾಕಿ ಪೋರ್ಟಿಕೋವನ್ನು ಪ್ರವೇಶಿಸಿ, ಅನಂತರ ದೊಡ್ಡ ಶಬ್ದ ಮಾಡುತ್ತಾ ತಲೆಬಾಗಿಲನ್ನೆಳೆದು ಮುಚ್ಚಿಬಿಟ್ಟರು.

ತನ್ನನ್ನು ತುಳಿದು ಮೆಟ್ಟಿದಂತೆನಿಸಿತು ಅಯ್ಯಪ್ಪನಿಗೆ. ಆದರೂ ಅವನದನ್ನು ಸಹಿಸಿದನು. ಏನೇ ಆದರೂ ಅವರು ತನ್ನ ಗುರುಗಳಲ್ಲವೇ? ಅವರು ಯಾವುದೇ ರೀತಿ ವರ್ತಿಸಿದರೂ ಅವರ ಅನುಗ್ರಹ ತನ್ನ ಮೇಲಿದೆ ಎಂಬುದು ವಾಸ್ತವವು. ಅಲ್ಲದಿದ್ದರೆ ಈ ಅತಿ ಸ್ವಲ್ಪ ಸಮಯದಲ್ಲೇ ತಾನು ಈ ಮಟ್ಟಕ್ಕೇರುತ್ತೇನೆಂದು ಯಾರಾದರೂ ಅಂದುಕೊಂಡಿದ್ದರೇ?

ಅಯ್ಯಪ್ಪನ್ ಪ್ರಾಕ್ಟೀಸ್ ಆರಂಭಿಸುವಾಗ ಗುರುಗಳ ಫೋಟೋವನ್ನು ಓದುವ ಕೋಣೆಯಿಂದ ಆಫೀಸ್ ಕೋಣೆಗೆ ಬದಲಾಯಿಸಿದನು. ಕುರ್ಚಿಯಲ್ಲಿ ಕುಳಿತುಕೊಂಡು ತನ್ನ ಕಕ್ಷಿಗಾರರೊಂದಿಗೆ ಮಾತನಾಡುವಾಗ ಎದುರಿನ ಗೋಡೆಯ ಮೇಲಿಂದ ಗುರುಗಳು ತನ್ನನ್ನೇ ದಿಟ್ಟಿಸಿ ನೋಡುತ್ತಿರುವಂತಿರುತ್ತಿತ್ತು. ಆ ನರಿಯ ನೋಟವು ತನ್ನ ಮುಖದ ಕಡೆಗೇ ಇರುತ್ತಿತ್ತು. ಆ ಮುಖದಲ್ಲಿನ ವಕ್ರದೃಷ್ಟಿಯು ಯಾವಾಗಲೂ ತನ್ನ ಕಾರ್ಯಕ್ರಮಗಳ ಮೇಲೆಯೇ ಇರುವಂತಿತ್ತು.

ಆ ಸಾನ್ನಿಧ್ಯದ ಬಲದ ಮೇಲೆಯೇ ಅಯ್ಯಪ್ಪನ್ ಬೆಳೆಯತೊಡಗಿದನು.

ಕಕ್ಷಿಗಾರರ ಸಂಖ್ಯೆ ಬೆಳೆಯತೊಡಗಿತು. ಫೈಲ್‌ಗಳ ಎತ್ತರ ಹೆಚ್ಚಾಯಿತು. ಬಹಳ ಜನರೊಂದಿಗೆ ಪರಿಚಯವಾಯಿತು.

ಕಾಲ ಕಳೆದು ಹೋಗುತ್ತಿತ್ತು.

ದೊಡ್ಡದೊಂದು ಕಟ್ಟಡಕ್ಕೆ ಆಫೀಸನ್ನು ಬದಲಾಯಿಸುವ ದಿನದಂದು ಬೆಳಗ್ಗೆ ಅಯ್ಯಪ್ಪನ್ ರೂಢಿಯಂತೆ ಮೂರು ವಿಭೂತಿ ಹಚ್ಚಿಕೊಂಡು ದೇವಸ್ಥಾನಕ್ಕೆ ಹೋಗಿ ನಮಸ್ಕರಿಸಿ ಅನಂತರ ಗುರುಗಳ ಮನೆಯ ಹೊರಾಂಗಣದಲ್ಲಿ ಬಂದು ನಿಂತನು.

ಸ್ವಲ್ಪ ಹೊತ್ತು ಕಾದು ನಿಂತನಂತರ ಗುರುಗಳು ಹೊರಬಂದರು.

"ನಾನು ಅಯ್ಯಪ್ಪನ್" ನಮಸ್ಕರಿಸುತ್ತಾ ಅಯ್ಯಪ್ಪನ್ ಹೇಳಿದನು.

"ಗೊತ್ತಾಯಿತು."

"ನನ್ನನ್ನು ಆಶೀರ್ವದಿಸಬೇಕು."

"ಏನು ವಿಷಯ?" ಅದೇ ಹಳೆಯ ಗುಡುಗುವ ಧ್ವನಿ.

"ಆಫೀಸನ್ನು ಹೊಸ ಕಟ್ಟಡಕ್ಕೆ ಬದಲಾಯಿಸುತ್ತಿದ್ದೇನೆ."

"ಗೊತ್ತಾಯಿತು"

"ತಮ್ಮ ಆಶೀರ್ವಾದ ಆಗಬೇಕು."

ತಟ್ಟನೆ ಅಯ್ಯರ್‌ರವರ ಕಣ್ಣುಗಳು ಕಿರಿದಾದವು. ಮುಖದಲ್ಲೊಂದು ಕಳ್ಳನಗು ಅರಳಿತು.

"ಆಗಬೇಕೇನೂ?" ನಾಲ್ಕು ದಿಕ್ಕುಗಳಲ್ಲೂ ಮೊಳಗುವಂತೆ ಎತ್ತರಿಸಿದ ದನಿಯಲ್ಲಿ ಅಯ್ಯರ್ ಕೇಳಿದರು.

ಅಯ್ಯಪ್ಪನ್ ನಡುಗುತ್ತ ನಿಂತಿದ್ದನು. ಅವರ ಧ್ವನಿಯಲ್ಲಿ ಇಂತಹ ಬದಲಾವಣೆಯನ್ನು ಅವನು ನಿರೀಕ್ಷಿಸಿರಲಿಲ್ಲ. ತನ್ನ ಕಿವಿಯ ಮೇಲೆ ತನಗೇ ನಂಬಿಕೆ ಇಲ್ಲದವನಂತೆ ಅವನು ಅವರನ್ನು ಮತ್ತೆ ದಿಟ್ಟಿಸಿ ನೋಡಿದನು.

"ಆಗಬೇಕೇನು?" ಅಯ್ಯರ್ ಮತ್ತೆ ಕೇಳಿದರು.

"ಆಗಬೇಕು, ಆಗಬೇಕು." ಮಹದಾನಂದದಿಂದ ಅಯ್ಯಪ್ಪನ್ ಕೂಗಿಕೊಂಡನು. ನಾಲ್ಕು ದಿಕ್ಕುಗಳಿಗೂ ಕೇಳಿಸುವಂತೆ ಕೂಗಬೇಕೆಂದು ಅವನಿಗನ್ನಿಸಿತು. ಕೊನೆಗೂ....ಕೊನೆಗೂ ಗುರುಗಳು ನನ್ನ ಮೇಲೆ ದಯೆ ತೋರಿದರು. ನನ್ನ ತಪಸ್ಸು ಫಲಿಸಿತು. ನಾನು ಮಾಡಿದ ಕಷ್ಟ ಫಲ ತೋರಿತು. ಅವನು ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದನು.

"ಲೋ ವೆಂಕಿ!" ಅಯ್ಯರ್‌ರು ಒಳಕ್ಕೆ ನೋಡಿ ಕರೆದರು.

ವೆಂಕಿ ಬಂದನು. ಸಣಕಲ ಮನುಷ್ಯ. ಅವರಿಗೆ ಪ್ರೀತಿಪಾತ್ರನಾದ ಶಿಷ್ಯನೆನಿಸಿದ ವೆಂಕಿ. ಅವನು ಅಯ್ಯರ್‌ರ ಅಳಿಯನಾಗಿದ್ದನು.

ವೆಂಕಿ ಅಯ್ಯಪ್ಪನನ್ನು ಕಂಡು ಪರಿಚಯದ ನಗೆಬೀರಿ ಕೇಳಿದನು.

"ಜೋರಾದ ಪ್ರಾಕ್ಟೀಸ್, ಅಲ್ಲವೇ?"

"ಅಹ....ಹ....ಜೋರೇನಿಲ್ಲ. ಒಂದು ವಿಧವಾಗಿ ನಡೆಯುತ್ತಿದೆ." ಅಯ್ಯಪ್ಪನ್ ಹೇಳಿದನು "ಎಲ್ಲಾ ನಮ್ಮ ಗುರುಗಳ ದಯೆ."

"ಗುರುಗಳೇ? ಯಾರು ನಿಮ್ಮ ಗುರುಗಳು" ವೆಂಕಿ ಹೀನಾಯದಿಂದ ಕೇಳಿದನು.

"ಇವರೇ ನನ್ನ ಗುರುಗಳು." ಅಯ್ಯರ್‌ರವರನ್ನು ದಿಟ್ಟಿಸಿ ನೋಡುತ್ತಾ ಕೈಜೋಡಿಸಿಕೊಂಡು ಅಯ್ಯಪ್ಪನ್ ಹೇಳಿದನು.

ವೆಂಕಿ ಬೆಚ್ಚಿಬಿದ್ದನು. 'ಸರಿಯೇ ಇವನು ಹೇಳಿದ್ದು?' ಎಂಬ ಅರ್ಥದಲ್ಲಿ ಅವನು

ಮಾವನವರನ್ನು ನೋಡಿದನು. ತನಗೆ ಗೊತ್ತಿಲ್ಲದಂತೆ ತಮ್ಮ ವೃತ್ತಿ ರಹಸ್ಯಗಳನ್ನು ಇವನಿಗೆ ಹೇಳಿಕೊಟ್ಟಿರಬಹುದೇ?

ಅಯ್ಯರ್‌ರವರೋ ವೆಂಕಿಯನ್ನು ನೋಡಿ ಒಮ್ಮೆ ಕಣ್ಣು ಮಿಟುಕಿಸಿದರು.

"ಏನೇ ಆಗಲಿ, ನೀನು ಬಂದದ್ದು ಒಳ್ಳೆಯದಾಯಿತು ಅಯ್ಯಪ್ಪ." ಗುರುಗಳೆಂದರು. "ಇಲ್ಲಿಗೆ ಬಂದು ನನಗೆ ಹೇಳಬೇಕೆಂದು ನಿನಗೆ ಅನ್ನಿಸಿತಲ್ಲ. ನನ್ನ ಮೇಲೆ ನಿನಗೆ ಅಷ್ಟು ಗೌರವ ಇದೆ ಅನ್ನು. ಆದರೆ ಸಾಧಾರಣವಾಗಿ ಇಂತಹ ಕಾರ್ಯಕ್ರಮಗಳಿಗೆ ನಾನು ಯಾವಾಗಲೂ ಹೋಗುವವನಲ್ಲ. ಆದರೂ ನಿನ್ನ ಆಫೀಸಿಗೆ ಬರುತ್ತೇನೆ. ನಾನೂ ವೆಂಕಿಯೂ ಇವತ್ತೇ ಬರುತ್ತೇವೆ. ನಿನ್ನ ಕಾರ್ಯಕ್ರಮಗಳೆಲ್ಲಾ ಮುಗಿಯುವ ವೇಳೆಗೆ ಬರುತ್ತೇವೆ."

ಅಯ್ಯಪ್ಪನ್ ಹಗುರವಾದ ಹೃದಯದೊಂದಿಗೆ ಮೆಟ್ಟಿಲಿಳಿದು ಹೋದನು.

ಬಿಸಿಲು ನೆತ್ತಿಗೆ ಬರುವುದಕ್ಕೆ ಮುಂಚೆಯೇ ಅಯ್ಯರ್‌ರು ತಮ್ಮ ಹಳೆಯ ಹಿಲ್‌ಮ್ಯಾನ್ ಕಾರಿನಲ್ಲಿ ಹೊಸ ಆಫೀಸಿಗೆ ಬಂದರು. ಜೊತೆಯಲ್ಲಿ ವೆಂಕಿಯೂ ಇದ್ದನು.

ಕಛೇರಿ ದೊಡ್ಡದಾಗೇ ಇತ್ತು. ದೊಡ್ಡ ರತ್ನಗಂಬಳಿ ಹಾಸಿದ್ದ ಏರ್ ಕಂಡಿಷನ್ಡ್ ಲೌಂಜ್. ಮೆತ್ತನೆಯ ಸೋಫಾಗಳು. ಅದರಲ್ಲಿ ಕುಳಿತುಕೊಂಡಾಗ ವೆಂಕಿ ಸ್ವಲ್ಪ ಅಸೂಯೆಯಿಂದ ಹೇಳಿಯೇ ಬಿಟ್ಟನು.

"ಮಾಮಾ, ಬಲು ಚೆನ್ನಾಗಿದೆ."

ಅಯ್ಯರ್ ತಟ್ಟನೆ ಅವನನ್ನು ದಿಟ್ಟಿಸಿ ನೋಡಿದರು. ಅವರ ನೋಟದ ಉರಿಗೆ ಸಿಕ್ಕಿ ಅವನು ಸುಟ್ಟು ಕರಕಲಾಗಬೇಕಿತ್ತು.

'ಎಷ್ಟೋ ಅಪರೂಪವೆನಿಸಿದ ವರಸೆಗಳನ್ನೆಲ್ಲಾ ನಾನು ನಿನಗೆ ಧಾರೆಯೆರೆದೆ. ಆದರೂ ಸಹ ಆ ಕೊಬ್ಬರಿ ಮಂಡಿಯ ಆ ಹಳೆಯ ಕೊಠಡಿಯನ್ನು ಬದಲಾಯಿಸಲು ನಿನಗೆ ಇದುವರೆಗೂ ಸಾಧ್ಯವಾಗಲಿಲ್ಲವಲ್ಲಾ? ಈ ಪಟ್ಟಣದಲ್ಲಿನ ಪ್ರಮುಖವೆನಿಸಿದ ಯಾವುದಾದರೊಂದು ಪಾರ್ಟಿ ನಿನ್ನ ಕೈಯಲ್ಲಿದೆಯೇ? ಎಷ್ಟೋ ವರ್ಷಗಳಿಂದ ನನ್ನನ್ನೇ ನಂಬಿಕೊಂಡಿದ್ದ ಎಷ್ಟೋ ದೊಡ್ಡ ದೊಡ್ಡ ಪಾರ್ಟಿಗಳು ಈಗ ಅಲ್ಲಲ್ಲಿ ಹೋಗಿ ಸೇರಿ ಬಿಟ್ಟಾಯಿತು. ನಾನು ಕಷ್ಟಪಟ್ಟು ಕಟ್ಟಿದ್ದ ಅಡಿಗಲ್ಲನ್ನೇ ತೋಡಿಹಾಕಿ ಬಿಟ್ಟೆಯಲ್ಲಾ ನನ್ನ ಪ್ರೀತಿ ಶಿಷ್ಯಾ?"

ಗುರುಗಳು ಮನಸ್ಸಿನೊಳಗಿಟ್ಟುಕೊಂಡಿದ್ದದ್ದನ್ನೆಲ್ಲಾ ಕಾರುವಂತಿದ್ದ ಆ ಉರಿ ನೋಟದ ಅರ್ಥ ವೆಂಕಿಗಾಯಿತು. ಅವನ ತಲೆ ತಗ್ಗಿತು. ಅವನ ಹಲ್ಲುಗಳ ಕಟಕಟನೆಂದವು.

ರಿಸೆಪ್ಷನಿಸ್ಟ್ ಅವರನ್ನು ಅಯ್ಯಪ್ಪನ ಕೋಣೆಗೆ ಕರೆದೊಯ್ದಳು.

ಅಯ್ಯಪ್ಪನ್ ಓಡಿ ಬಂದು ಬಾಗಿಲು ತೆರೆದು ಹಿಡಿದನು. ಗುರುಗಳ ಕಾಲುಗಳನ್ನು ಮುಟ್ಟಿ ನಮಸ್ಕರಿಸಿದನು.

ಅಯ್ಯರ್‌ರು ಕೋಣೆಯಲ್ಲೆಲ್ಲಾ ನೋಟ ಹರಿಸಿದಾಗ ನಿಜವಾಗಲೂ ಚಕಿತರಾದರು. ಈಟಿ ಮರದಿಂದ ಮಾಡಿದ ಅರ್ಧವೃತ್ತಾಕೃತಿಯ ಒಂದು ಮೇಜು. ಅದರ ಹಿಂದೆ ತಿರುಗುವ ಕುರ್ಚಿ. ಬಣ್ಣಬಣ್ಣದ ಫೋನುಗಳು ನಾಲ್ಕಾರಿದ್ದವು. ಹಿಂದು ಪಕ್ಕದಲ್ಲಿ ಒಂದು ಪರ್ಸನಲ್ ಕಂಪ್ಯೂಟರ್. ನಡೆದರೆ ಕಾಲು ಹೂತು ಹೋಗುವಂತಹ ರತ್ನಗಂಬಳಿ. ಭಾರಿ ಸೋಫಾಗಳು.

ಅಯ್ಯರ್‌ರು ಕುಳಿತರು. ಅವರ ಪಕ್ಕ ಪಕ್ಕದಲ್ಲೇ ವೆಂಕಿಯೂ ಕುಳಿತನು.

ಅವರೆಷ್ಟು ಹೇಳಿದರೂ ಅಯ್ಯಪ್ಪನ್ ಕುಳಿತುಕೊಳ್ಳಲಿಲ್ಲ. ಕೈ ಜೋಡಿಸಿಕೊಂಡು ನಿಂತೇ ಇದ್ದನು.

"ನನಗೆ ಆಶೀರ್ವಾದ ಮಾಡಬೇಕು." ಅಯ್ಯಪ್ಪನ್ ಮತ್ತೆ ಕೇಳಿಕೊಂಡನು.

"ಹುಂ" ಅಯ್ಯರ್‌ರವರು ಹೂಂಕರಿಸಿದರಷ್ಟೆ.

ಥಟ್ಟನೇ ವೆಂಕಿಯ ಕಣ್ಣುಗಳಿಗದು ಬಿದ್ದಿತು. ಅವನು ತನ್ನ ದೃಷ್ಟಿಯನ್ನು ಅಲ್ಲಿಂದ ಬಲವಂತವಾಗಿ ಕಿತ್ತು ಅಯ್ಯರ್‌ರ ಬಳಿ ಸರಿದು ಪಿಸುಗುಟ್ಟಿದನು!

"ಮಾವ, ಅಲ್ಲಿ ನೋಡಿ. ಆ ಫೋಟೋ...."

ಅಯ್ಯರ್ ಹಿಂದಿರುಗಿ ನೋಡಿದರು. ಅಯ್ಯಪ್ಪನ್‌ನ ಕುರ್ಚಿಯ ಎದುರಿಗಿದ್ದ ಗೋಡೆಯ ಮೇಲೆ ತಮ್ಮದೊಂದು ದೊಡ್ಡ ಫೋಟೊ ಇರುವುದನ್ನು ಕಂಡರು. ಅದರ ಕೆಳಗೆ ಪುಟ್ಟದೊಂದು ದೀಪ ಹತ್ತಿಸಿತ್ತು.

ಅಯ್ಯರ್‌ರ ತಲೆಯೊಳಗೆ ಮಿಂಚು ಹೊಡೆದಂತಾಯಿತು. ಕಳೆದ ಕೆಲ ವರ್ಷಗಳಿಂದ ತಮ್ಮ ಬಳಿ ಜಗಳವಾಡಿಕೊಂಡು ಬಿಟ್ಟುಹೋದ ಬಹಳಷ್ಟು ದೊಡ್ಡ ದೊಡ್ಡ ಪಾರ್ಟಿಗಳ ಬಣ್ಣ ಬಣ್ಣದ ಫೈಲುಗಳು ಸಾಲು ಸಾಲಾಗಿ ಅವರ ಕಣ್ಣ ಮುಂದಿನಿಂದ ಹಾದುಹೋದವು.

ಆ ಫೈಲುಗಳೆಲ್ಲಾ ಇಲ್ಲಿಯ ಬೀರುಗಳಲ್ಲಿ ಸೇರಿರಬೇಕು. ಆಗ ಅವರ ತಿರುಳೇನು? ಅಯ್ಯರ್‌ರ ಹಣೆಯ ಮೇಲೆ ಬೆವರಿನ ಹನಿಗಳು ಮೂಡಿದುವು.

ಅಯ್ಯರ್‌ರು ಮತ್ತೊಮ್ಮೆ ಆ ಫೋಟೋವನ್ನೂ ಚೆನ್ನಾಗಿ ದಿಟ್ಟಿಸಿ ನೋಡಿದರು. ಆ ಕಣ್ಣುಗಳಲ್ಲಿ ಅಪೂರ್ವವಾದ ಪ್ರಕಾಶವೂ, ತೀಕ್ಷ್ಣತೆಯೂ ಮೂಡಿದಂತಿತ್ತು. ಕನ್ನಡಿಯಲ್ಲಿ ನೋಡಿಕೊಂಡರೆ ಕಾಣುವ ತಮ್ಮ ಮುಖದಲ್ಲಿಲ್ಲದ ದೊಡ್ಡದೊಂದು ಅದೃಶ್ಯ ಶಕ್ತಿ ಅದರಲ್ಲಿ ಅಡಗಿದ್ದಂತಿತ್ತು.

ತಮ್ಮ ಆ ಕಣ್ಣುಗಳು ಈ ಪಟ್ಟಣದಲ್ಲಿನ ವ್ಯಾಪಾರ ಲೋಕವನ್ನು ಸಂಪೂರ್ಣವಾಗಿ ಹಿಡಿದು ನಿಲ್ಲಿಸಿತ್ತೆಂಬುದನ್ನು ಅವರು ನೆನಸಿಕೊಂಡರು. ಆದರೆ ಈ ಶಕ್ತಿ ಈಗ ತಮ್ಮಿಂದ ಮರೆಯಾಗಿಬಿಟ್ಟಿದೆ. ಆ ಹಳೆಯ ಫೈಲ್‌ಗಳನ್ನೆಲ್ಲ ಒಂದೊಂದನ್ನಾಗಿ ಇಲ್ಲಿಗೆ ಎಳೆದುಕೊಂಡು ಬಂದದ್ದು ಈ ಫೋಟೋದಲ್ಲಿನ ಕಣ್ಣುಗಳೇ.

ಅಯ್ಯರ್ ವೆಂಕಿಯನ್ನು ದಿಟ್ಟಿಸಿ ನೋಡಿದರು. ವೆಂಕಿ ಅಯ್ಯರ್‌ರನ್ನು ದಿಟ್ಟಿಸಿ ನೋಡಿದ. ಅಯ್ಯರ್‌ರ ಮುಖ ಕೆಂಪೇರಿತು.

"ಇದೆಲ್ಲಿಂದ ನಿನಗೆ ಸಿಕ್ಕಿತು?" ಇದ್ದಕ್ಕಿದ್ದಂತೆ ಪ್ರಶ್ನೆ ಕೇಳಿದ್ದರಿಂದ ಅಯ್ಯಪ್ಪನ್ ಗಾಬರಿಯಾದನು. ಅಯ್ಯರ್‌ರ ಧ್ವನಿ ಆ ಕೋಣೆಯಲ್ಲೆಲ್ಲಾ ಪ್ರತಿಧ್ವನಿಸಿತು.

"ನಾನೇ ಬಿಡಿಸಿದೆ." ಅಯ್ಯಪ್ಪನ್ ತೊದಲುತ್ತಾ ಹೇಳಿದನು.

"ಯಾರೂಂದೆ?"

"ನಾನೇನೇ!"

"ಹೌದೇನು?"

"ನನಗೆ ಚಿತ್ರ ಬಿಡಿಸಲು ಬರುವುದಿಲ್ಲ. ಆದರೂ ಹೇಗೋ ಏನೋ ಬಿಡಿಸಿದೆ."

"ಇದನ್ನು ಬಿಡಿಸಲು ಕಾರಣ?"

"ನನಗೆ ಬೇರೆ ದಾರಿಯೇ ಇರಲಿಲ್ಲ. ಒಬ್ಬ ಗುರುವಿಲ್ಲದೆ ಈ ವಿದ್ಯೆಯನ್ನು ಕಲಿಯಲು ಸಾಧ್ಯವಿಲ್ಲವೆಂದು ನಾನು ಖಚಿತವಾಗಿ ತಿಳಿ

ದಿದ್ದೆ. ನಿಮ್ಮನ್ನು ನಾನು ಗುರುವಾಗಿ ಸ್ವೀಕರಿಸಿದ್ದರಿಂದ ಬೇರೆ ಯಾರನ್ನೂ ಆ ಸ್ಥಾನದಲ್ಲಿ ಊಹಿಸಿಕೊಳ್ಳಲು ನನಗೆ ಸಾಧ್ಯವಿರಲಿಲ್ಲ."

"ಸರಿ" ಅಯ್ಯರ್ ಕುಳಿತಂತೆಯೇ ಗುರುಗುಟ್ಟಿದರು. "ನನ್ನ ಒಪ್ಪಿಗೆ ಇಲ್ಲದೆ ನನ್ನನ್ನು ಪೂಜಿಸಲು ಯಾರು ಹೇಳಿದರು?"

"ಗುರುವೇ ದೇವರಲ್ಲವೇ? ದೇವರನ್ನು ಪೂಜಿಸಲು...."

"ವಾದಿಸಬೇಕಿಲ್ಲ. ಗುರುಗಳಿಗೆ ಅವಮಾನ ಮಾಡಲೆಣಿಸಬೇಡ." ಗುರುಗಳ ಧ್ವನಿ ಏರಿತು.

ಅಯ್ಯಪ್ಪನ್ ಮಾತು ಮುಂದುವರಿಸಿದನು.

"ನನ್ನನ್ನು ತಪ್ಪಾಗಿ ತಿಳಿಯಬೇಡಿ. ಈ ಗಳಿಕೆಯಲ್ಲಿ ನನಗೆ ಮೋಹವೇನಿಲ್ಲ. ನಿಮ್ಮ ಆಶೀರ್ವಾದವಿದ್ದರೆ ಸಾಕಷ್ಟೆ."

ಅಯ್ಯರ್‌ರ ಕೋಪವು ಉಲ್ಬಣಿಸಿತು. ಕಣ್ಣುಗಳು ಕಿರಿದಾದವು. ಮುಖ ಸೊಟ್ಟಗಾಯಿತು.

"ನನ್ನ ಆಶೀರ್ವಾದ ಬೇಕು ಅಲ್ಲವೇ?" ಅಯ್ಯರ್‌ರು ಕೇಳಿದರು.

"ಬೇಕು, ಬೇಕು" ಅಯ್ಯಪ್ಪನ್ ಮನಃಪೂರ್ವಕವಾಗಿ ಹೇಳಿದನು.

"ಹಾಗಾದರೆ ನನ್ನ ಗುರುದಕ್ಷಿಣೆ"

"ನೀವೇನು ಕೇಳಿದರೂ ಕೊಡುತ್ತೇನೆ"

"ಏನು ಕೇಳಿದರೂ ಕೊಡುತ್ತೀಯಲ್ಲವೇ?"

ಅಯ್ಯಪ್ಪನ್ ಹೂಂಗುಟ್ಟಿದನು.

ತಟ್ಟನೆ ಅಯ್ಯಪ್ಪನ್‌ನ ತಲೆಯಲ್ಲಿ ಏನೋ ಮಿಂಚಿದಂತಾಯಿತು. ಅವನು ತನ್ನ ಬಲಗೈ ಹೆಬ್ಬೆಟ್ಟನ್ನೊಮ್ಮೆ ನೋಡಿಕೊಂಡನು.

ಅದನ್ನು ಕಂಡ ಅಯ್ಯರ್‌ರು ಅಟ್ಟಹಾಸದಿಂದ ನಕ್ಕರು.

"ಹೆದರಬೇಡ. ಅದು ನನಗೆ ಬೇಡ. ಅದು ಬಹಳ ಹಳೆಯ ಕಥೆ."

"ಮತ್ತೆ...."

"ನನಗೆ ಬೇಕಾದದ್ದು ಒಂದೇ ಒಂದು."

"ಹೇಳಿ ಗುರುಗಳೇ!"

"ಆ ಫೋಟೋ ಕೊಡು. ಅದು ಮಾತ್ರ ನನಗೆ ಸಾಕು." ಅಯ್ಯರ್‌ರು ತಮ್ಮ ಆ ಫೋಟೋದತ್ತ ಬೆರಳು ತೋರಿಸಿದರು.

ಅಯ್ಯಪ್ಪನ್ ಕಾಲು ಕೀಲಿಸಿದಂತೆ ನಿಂತುಬಿಟ್ಟನು. ನಡುಗುತ್ತಾ ಗುರುಗಳ ಮುಖದ ಕಡೆ ನೋಡಿದನು. ವೆಂಕಿಯ ಮುಖದಲ್ಲಿ ಒಂದು ಕಳ್ಳನಗು ಕಂಡೂ ಕಾಣದಂತೆ ತೋರಿ ಮರೆಯಾಯಿತು.

"ಅಷ್ಟೇ ಅಲ್ಲ." ಗುರುಗಳು ಮುಂದುವರೆಸಿದರು "ಇದನ್ನು ಕೊಟ್ಟನಂತರ ಮತ್ತೆ ಬೇರೊಂದು ಚಿತ್ರ ಬಿಡಿಸಿ ತಗಲುಹಾಕಿ ಪೂಜೆ ಮಾಡುವುದಿಲ್ಲವೆಂದು ಆಣೆಮಾಡು."

"ಅದು....ಅದು .. ಹೇಗೆ ಸಾಧ್ಯ?" ಅಯ್ಯಪ್ಪನ್ ಗಂಟಲಿಂದ ಸ್ವಲ್ಪ ಹೊತ್ತು ಮಾತೇ ಹೊರಡಲಿಲ್ಲ.

"ಸಾಧ್ಯವಿಲ್ಲದಿದ್ದರೆ ಬೇಡ." ಅಯ್ಯರ್‌ರವರ ಮುಖ ಅತೀವ ಕೋಪದಿಂದ ಕಪ್ಪಾಯಿತು. "ನಾನು ಕೇಳುವುದನ್ನು ಕೇಳಿದೆ ಅಷ್ಟೆ."

"ಹಾಗೇ ಆಗಲಿ ಗುರುಗಳೇ. ಆದರೂ ತಾವು ಮತ್ತೊಮ್ಮೆ ಯೋಚಿಸಿ...."

"ಬಾರೋ ವೆಂಕಿ ಹೋಗೋಣ" ಅಯ್ಯರ್‌ರು ಎದ್ದರು.

"ಬೇಡ ಗುರುಗಳೇ." ಅಯ್ಯಪ್ಪನ್ ಅವರನ್ನು ತಡೆದನು. "ನೀವು ಹೇಳಿದಂತೆಯೇ ಆಗಲಿ. ನೀವೇನು ಹೇಳಿದರೂ ನಾನು ಒಪ್ಪಿಕೊಳ್ಳುತ್ತೇನೆ."

ಅಯ್ಯಪ್ಪನ್ ತನ್ನ ಕೈಗಳಿಂದಲೇ ಆ ಫೋಟೋವನ್ನು ಇಳಿಸಿದಾಗ ತನ್ನೊಳಗೇ ಏನೋ ತುಡಿಯುತ್ತಿರುವಂತೆ ಅವನಿಗನ್ನಿಸಿತು. ಸೋಪಾದ ಕೈಗಳ ಮೇಲೆ ತನ್ನ ಕೈಗಳನ್ನೂರಿ ಬಲವಾಗಿ ಹಿಡಿದುಕೊಂಡು ಸುಸ್ತಾಗಿ ಅವನು ಸ್ವಲ್ಪ ಹೊತ್ತು ನಿಂತನು. ಅನಂತರ ಆ ಫೋಟೋವನ್ನು ಪೇಪರ್ ಒಂದರಲ್ಲಿ ಸುತ್ತಿ ಗುರುಗಳ ಕೈಯಲ್ಲಿ ಕೊಡುವಾಗ ಅಯ್ಯಪ್ಪನ್ ನಡುಗುವ ಧ್ವನಿಯಲ್ಲಿ ಹೇಳಿದನು.

"ನಿಮ್ಮ ಒಪ್ಪಿಗೆ ಇಲ್ಲದೆ ಇಲ್ಲಿಯವರೆಗೂ ನಿಮ್ಮನ್ನು ಪೂಜಿಸಿದ್ದಕ್ಕೆ ನಾನು ನಿಮ್ಮ ಕ್ಷಮಾಪಣೆ ಕೇಳುತ್ತಿದ್ದೇನೆ." ಅವನ ಧ್ವನಿ ಗದ್ಗದಿತವಾಯಿತು. ಅವನ ಗಂಟಲೇ ಹೂತುಹೋದಂತಾಯಿತು. ಕಣ್ಣುಗಳಲ್ಲಿ ನೀರು ಹರಿಯತೊಡಗಿತು. "ಇನ್ನಾದರೂ ನನ್ನನ್ನು ಆಶೀರ್ವದಿಸಬೇಕು."

ಒಂದು ಮಾತೂ ಆಡದೆ ಮತ್ತೊಮ್ಮೆ ಹೂಂಕರಿಸುತ್ತ ಗುರುಗಳು ಎದ್ದರು. ಫೋಟೋವನ್ನು ವೆಂಕಿಯ ಕೈಯಲ್ಲಿ ಕೊಡುತ್ತ ಹೇಳಿದರು.

"ಬಾರೋ ಅಯೋಗ್ಯ"

ಕೋಣೆಯಿಂದ ಹೊರ ಹೋಗುವಾಗ ವೆಂಕಿ ಹಿಂದಿರುಗಿ ನೋಡಿ ಅಯ್ಯಪ್ಪನನ್ನು ಹೀನೈಸುವಂತೆ ನಕ್ಕನು. ಆ ನಗು ಅವನನ್ನು ಕೊಲ್ಲುವಂತಿತ್ತು.

ಆ ನಗುವಿನ ಶಕ್ತಿಯಲ್ಲಿ ಸೋತ ಅಯ್ಯಪ್ಪನ್ ಕುರ್ಚಿಯಲ್ಲಿ ಕುಸಿದು ಬಿದ್ದನು. ಆಗಲೂ ಅವನ ತುಟಿಗಳು ಗೊಣಗುತ್ತಲೇ ಇದ್ದವು. "ನನ್ನನ್ನು ಆಶೀರ್ವದಿಸಿ ಗುರುಗಳೇ...."



ಶೀಲ ಪ್ರಗತಿಗೆ ಮೂಲ, ಸಂಪತ್ತಿಗೆ ತಳಹದಿ, ಆನಂದ, ಶಾಂತಿಗಳಿಗೆ ರಾಜಮಾರ್ಗ.

—ಗಾಂಧೀಜಿ

ಅದೃಷ್ಟದ ಡಾಲರ್

ಗ. ನಾ. ಭಟ್ಟ

ಕ್ಯಾಮ್‌ರನ್ ಮ್ಯಾಂಗರ್ ಮತ್ತು ನಾನು ಹದಿಹರೆಯದ ವಯಸ್ಸಿನವರಾದಂದಿನಿಂದ ಗೆಳೆಯರಾಗಿದ್ದೇವೆ. ನಾವಿಬ್ಬರೂ ಸಂಗೀತ ಪ್ರಿಯರು. ಅನೇಕ ವರ್ಷಗಳ ಅನಂತರ ನಾವು ಸ್ಕೂಲ್ ಬಿಟ್ಟಮೇಲೆ ಕ್ಯಾಮ್ ಸಂಗೀತಕಲಾವಿದನಾದ.

ಇತ್ತೀಚೆಗೆ ಆತ ತನ್ನ ಬಳಿಯಿದ್ದ ಒಂದೇ ಒಂದು ಡಾಲರ್‌ಗೆ ತಾನು ಮುಳುಗಿ ಹೋಗಲಿದ್ದ ದಿನವೊಂದರ ಕಥೆಯನ್ನು ಹೇಳಿದ. ಆ ದಿನ ಅವನ ಪಾಲಿನ ಅದೃಷ್ಟದ ದಿನವಾಗಿತ್ತು ಮತ್ತು ಅವನ ಜೀವನ ಗತಿಯೇ ಬದಲಾಯಿತು. ೧೯೭೦ ರಲ್ಲಿ ಕ್ಯಾಮ್ ಟೆಕ್ಸಾಸನ ಆಕಾಶವಾಣಿಯೊಂದರಲ್ಲಿ ಉದ್ಘೋಷಕನಾಗಿ ನೇಮಕಗೊಂಡು ಸಾಮಾಜಿಕ ಪ್ರತಿಷ್ಠೆಯನ್ನು ಗಳಿಸಿದಾಗಿನಿಂದ ಮೊದಲು ಕಥೆ ಆರಂಭವಾಯಿತು. ಆಗ ಆತ ಅನೇಕ ಸಂಗೀತಗಾರರನ್ನು ಭೇಟಿಯಾಗಿದ್ದ ಮತ್ತು ಸಂಗೀತದ ದೇಶವೆನಿಸಿಕೊಂಡ ನ್ಯಾಷವಿಲ್ಲೆಗೆ ನಿಲಯದ ನಿರ್ದೇಶಕರೊಡನೆ ಸಂಸ್ಥೆಯ ವಿಮಾನದಲ್ಲಿ ಸಂಚರಿಸಿದ್ದ.

ಒಂದು ರಾತ್ರಿ ಕ್ಯಾಮ್ ಸಂಗೀತ ಪ್ರದರ್ಶನಕ್ಕಾಗಿ ನ್ಯಾಷವಿಲ್ಲೆಯಲ್ಲಿ ಇದ್ದ. ಸಂಗೀತ ಕಾರ್ಯಕ್ರಮವೆಲ್ಲಾ ಮುಗಿದ ಮೇಲೆ ಪರಿಚಿತನೊಬ್ಬ ಕ್ಯಾಮನ್ನು ಇತರ ಸಂಗೀತ ವಿದ್ವಾಂಸರೊಡನೆ ನೇಪಥ್ಯಕ್ಕೆ ಬರಬೇಕೆಂದು ಆಹ್ವಾನಿಸಿದ. "ಪ್ರಖ್ಯಾತ ಸಂಗೀತ ವಿದ್ವಾಂಸರ ಹಸ್ತಾಕ್ಷರಕ್ಕಾಗಿ ನನ್ನ ಬಳಿ ಯಾವುದೇ ಪೇಪರ್ ಇರಲಿಲ್ಲವಾಗಿತ್ತು. ಅದಕ್ಕಾಗಿ ನಾನು ನನ್ನ ಬಳಿಯಿದ್ದ ಕಡೆಯ ಡಾಲರ್ ನೋಟನ್ನೇ ತೆಗೆದೆ"—ಎಂದು ಕ್ಯಾಮ್ ಹೇಳಿದ. "ರಾತ್ರಿ ಕಳೆಯುವುದರೊಳಗೆ ನಾನು ಎಲ್ಲರ ಹಸ್ತಾಕ್ಷರವನ್ನು ಪಡೆದಿದ್ದೆ. ಆ ಡಾಲರ್ ನೋಟನ್ನು ನಾನು ಜಾಗರೂಕನಾಗಿ ಇಟ್ಟುಕೊಂಡೆ ಮತ್ತು ಯಾವಾಗಲೂ ಅದನ್ನು ನನ್ನೊಡನೆ ಒಯ್ಯುತ್ತಿದ್ದೆ. ಅದನ್ನು ಒಂದು ನಿಧಿಯೆಂದು ಭಾವಿಸಿದ್ದೆ."

ಅದೊಂದು ದಿನ ಅವನು ಕೆಲಸ ಮಾಡುತ್ತಿದ್ದ ಆಕಾಶವಾಣಿ ಕೇಂದ್ರವು ಮಾರಾಟವಾಗಿ ಹೋಗಿದ್ದರಿಂದ ಅಲ್ಲಿಯ ಅನೇಕ ಉದ್ಯೋಗಿಗಳು ತಮ್ಮ ಕೆಲಸವನ್ನು ಕಳೆದು

೧೯[illegible]ರ ಅಕ್ಟೋಬರ್ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ ರಾಬರ್ಟ್ ಡಂಕನ್ ಅವರ "ದಿ ಲಾಸ್ಟ್ ಡಾಲರ್" ಎಂಬ ಲೇಖನದ ಅನುವಾದ.

ಕೊಳ್ಳಬೇಕಾಯಿತು. ಆಮೇಲೆ ಕ್ಯಾಮ್ ಬೇರೊಂದು ಆಕಾಶವಾಣಿಯಲ್ಲಿ ಅರೆಕಾಲಿಕ ನೌಕರನಾಗಿ ಕೆಲಸಕ್ಕೆ ಸೇರಿಕೊಂಡ. ಅಂತೆಯೇ ಆ ಕೆಲಸ ಪೂರ್ಣಕಾಲಿಕ ಅವಧಿಯನ್ನು ಪಡೆಯುವವರೆಗೆ ಅದನ್ನೇ ಆಶ್ರಯಿಸಬೇಕೆಂದು ಯೋಚಿಸಿದ.

ಟೆಕ್ಸಾಸ್‌ನಲ್ಲಿ ೧೯೭೬-೭೭ರ ಚಳಿಗಾಲ ಅತ್ಯಂತ ತೀಕ್ಷ್ಣವಾಗಿತ್ತು. ಕ್ಯಾಮ್‌ನ ಹಳೇ ಕಾರಿನಲ್ಲಿಯ ಹೀಟರ್ ಕೇವಲ ಬಿಸಿಗಾಳಿಯ ಸೂಚನೆಯನ್ನು ನೀಡುತ್ತಿತ್ತೇ ಹೊರತು ಬಿಸಿಗಾಳಿಯನ್ನು ಸೂಸುತ್ತಿರಲಿಲ್ಲ. ಮಂಜು ಹಾಗೂ ಗಾಳಿಯನ್ನು ತಡೆಯುವ ಕಿಟಕಿಯ ಅರ್ಧ ತೆರೆಬಿಟ್ಟು ಸ್ವಲ್ಪವೂ ಕೆಲಸ ಮಾಡುತ್ತಿರಲಿಲ್ಲ. ಜೀವನ ಕಷ್ಟಕರವಾಗಿತ್ತು. ಕ್ಯಾಮ್ ಜರ್ಜರಿತನಾಗಿದ್ದ. ಸ್ಥಳೀಯ ಮಾರುಕಟ್ಟೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಗೆಳೆಯನೋರ್ವನ ಸಹಾಯದಿಂದ ಆಕಸ್ಮಿಕವಾಗಿ ಅನುಪಯುಕ್ತವಾಗಿ ಎಸೆಯಲ್ಪಡುತ್ತಿದ್ದ ಆಹಾರವನ್ನು ಪಡೆದ. "ಇದು ನನ್ನನ್ನೂ ನನ್ನ ಹೆಂಡತಿಯನ್ನು ರಕ್ಷಿಸಿತು. ಆದರೆ ನಾವಿನ್ನು ಹಣವನ್ನು ಸಂಪಾದಿಸಿರಲಿಲ್ಲ."

ಒಂದು ಬೆಳಗ್ಗೆ ಕ್ಯಾಮ್ ಆಕಾಶವಾಣಿಯಿಂದ ಬರುತ್ತಿದ್ದಾಗ ಕಾರ್ ಪಾರ್ಕ್‌ನಲ್ಲಿ ಹಳದಿಬಣ್ಣದ ಕಾರೊಂದರಲ್ಲಿ ಕೂತಿದ್ದ ಒಬ್ಬ ತರುಣನನ್ನು ನೋಡಿದ. ಕ್ಯಾಮ್ ಅವನ ಕಡೆ ಕೈಬೀಸುತ್ತಾ ಓಡಿಸಿದ. ಅದೇ ರಾತ್ರಿ ಕ್ಯಾಮ್ ರಾತ್ರಿ ಪಾಳಿಗಾಗಿ ಆಕಾಶವಾಣಿಯ ಕಡೆ ಹೋಗುತ್ತಿದ್ದಾಗ ಮತ್ತೆ ಅದೇ ಸ್ಥಳದಲ್ಲಿ ಕಾರ್ ನಿಂತಿದ್ದನ್ನು ಗಮನಿಸಿದ. ಎರಡು ದಿನಗಳ ನಂತರ ಆ ಕಾರು ಚಲಿಸದಿದ್ದುದು ಅವನ ಗಮನಕ್ಕೆ ಬಂತು. ಕ್ಯಾಮ್ ಆ ದಾರಿಯಲ್ಲಿ ಓಡಾಡುತ್ತಿದ್ದಾಗ ಆ ವ್ಯಕ್ತಿ ಅವನಿಗೆ ಹೃತ್ಪೂರ್ವಕವಾಗಿ ಕೈಬೀಸುತ್ತಿದ್ದ. ಆ ಭಯಂಕರ ಚಳಿ ಮತ್ತು ಮಂಜಿನಲ್ಲಿ ಆ ವ್ಯಕ್ತಿ ಮೂರು ದಿನಗಳಿಂದ ಕಾರ್‌ಲ್ಲಿ ಕೂತು ಏನು ಮಾಡುತ್ತಿರಬಹುದೆಂದು ಕ್ಯಾಮ್ ಯೋಚಿಸಿದ.

ಮರುದಿನ ಬೆಳಗ್ಗೆ ಕ್ಯಾಮ್ ಅದಕ್ಕೆ ಉತ್ತರ ಕಂಡುಹಿಡಿದ. ಈ ಸಮಯ ಕ್ಯಾಮ್ ಅವನ ಕಾರ್ ಬಳಿ ಹೋದಾಗ ಆತ ತನ್ನ ಕಾರಿನ ಕಿಟಕಿಯಲ್ಲಿ ಮುದುಡಿ ಕೂತಿದ್ದ. ಹಣ ಮತ್ತು ತಿನ್ನುವುದಕ್ಕೆ ಆಹಾರವಿಲ್ಲದೆ ಕೆಲವು ದಿನಗಳಿಂದ ತಾನಿಲ್ಲಿರುವುದಾಗಿ ಆತ ಅವನನ್ನು ಪರಿಚಯಿಸಿಕೊಂಡ. "ಆತ ಕೆಲಸ ಪಡೆಯುವುದಕ್ಕಾಗಿ ಬೇರೆ ಪಟ್ಟಣದಿಂದ ಇಲ್ಲಿಗೆ ಬಂದಿದ್ದಾನೆ. ಆದರೆ ಮೂರು ದಿನ ಮುಂಚಿತವಾಗಿಯೇ ಬಂದಿದ್ದಾನೆ ಮತ್ತು ಕೂಡಲೆ ಕೆಲಸಕ್ಕೆ ಹೋಗದವನಾಗಿದ್ದಾನೆ."

ಆತ ಮನಸ್ಸಿಲ್ಲದೆ ಮರುದಿನದವರೆಗಿನ ಊಟ-ತಿಂಡಿಗಾಗಿ ನನ್ನಲ್ಲಿ ಒಂದು ಡಾಲರನ್ನು ಕೈಗಡವಾಗಿ ಕೇಳಿದ. ತಾನು ಕೆಲಸಕ್ಕೆ ಸೇರಿ ಅವರಿಂದ ಮುಂಗಡ ಹಣ ಪಡೆದು ಹಿಂದಿರುಗಿಸುವುದಾಗಿ ಹೇಳಿದ. "ಆದರೆ ನನ್ನ ಬಳಿ ಡಾಲರ್ ಇರಲಿಲ್ಲವಾಗಿತ್ತು. ಕೇವಲ ಮನೆಗೆ ಹೋಗುವಷ್ಟು ಮಾತ್ರ ಪೆಟ್ರೋಲ್ ಖರ್ಚಿನ ಹಣವಿತ್ತು. ನಾನು ನನ್ನ ಪರಿಸ್ಥಿತಿಯನ್ನು ವಿವರಿಸಿ, ಅವನಿಗೆ ಮಾಡಬಹುದಾದ ಸಹಾಯವನ್ನು ಯೋಚಿಸುತ್ತಾ ನನ್ನ ಕಾರಿನೆಡೆ ಸಾಗಿದೆ."

ಅಷ್ಟರಲ್ಲಿ ಕ್ಯಾಮ್‌ಗೆ ಆತ ನ್ಯಾಷವಿಲ್ಲೆಯಲ್ಲಿ ಪ್ರಖ್ಯಾತ ಸಂಗೀತ ಕಲಾವಿದರಿಂದ

ಡಾಲರ್ ಮೇಲೆ ಹಸ್ತಾಕ್ಷರ ಹಾಕಿಸಿದ್ದು ನೆನಪಾಯಿತು. ಎರಡುನಿಮಿಷಗಳ ಕಾಲ ಆ ಡಾಲರ್‌ನ್ನು ಕೊಡುವುದರ ಬಗ್ಗೆ ಅವನ ಮನಸ್ಸು ಹೊಯ್ದಾಡಿತು. ಚೀಲದಿಂದ ಡಾಲರ್‌ನೋಟನ್ನು ಹೊರತೆಗೆದ ಕ್ಷಣ ಕಾಲ ಆ ಹಸ್ತಾಕ್ಷರಗಳ ಮೇಲೆಲ್ಲ ಕಣ್ಣಾಡಿಸಿದ. ಆ ಮೇಲೆ ಆ ಮನುಷ್ಯನತ್ತ ನಡೆದು ಅವನಿಗೆ ಅದನ್ನು ನೀಡಿದ. "ಯಾವನೋ ಇದರ ಮೇಲೆಲ್ಲಾ ಬರೆದಿದ್ದಾನೆ" ಎಂದು ಅವನು ನುಡಿದ. ಆದರೆ ಅವು ಪ್ರಖ್ಯಾತ ಸಂಗೀತ ಕಲಾವಿದರ ಸಹಿಗಳೆಂದು ಅವನಿಗೆ ಗೊತ್ತಾಗಲಿಲ್ಲ, ಆತ ಅದನ್ನು ಸ್ವೀಕರಿಸಿದ. "ಮರುದಿನ ನನ್ನ ಕೆಲಸವನ್ನು ಮುಗಿಸಿ ಡಾಲರ್ ಕೊಟ್ಟದ್ದಕ್ಕೆ ಯೋಚಿಸದಿರುವುದಕ್ಕೆ ಯತ್ನಿಸುತ್ತಾ ಮನೆಗೆ ಹಿಂತಿರುಗಿದಾಗ ನನಗೆ ಒಳ್ಳೆಯದಾಗಲು ಆರಂಭವಾಗಿದ್ದವು" ಎಂದು ಕ್ಯಾಮ್ ಹೇಳಿದ. ಫೋನ್ ಕರೆಯೊಂದು ನನಗೆ ೫೦೦ ರೂ. ಸಲ್ಲಿಸಿದ್ದನ್ನು ಹೇಳಲು ಇಷ್ಟಪಟ್ಟಿತ್ತು. ಅದು ನನಗೆ ಲಕ್ಷ ರೂಪಾಯಿಯಂತಾಗಿತ್ತು. ನಂತರದ ಕೆಲವೇ ದಿನಗಳಲ್ಲಿ ಎಲ್ಲೆಲ್ಲಿಂದಲೋ ನನಗೆ ಸದವಕಾಶಗಳು ಬರತೊಡಗಿದವು. ಕೂಡಲೆ ನಾನು ನನ್ನ ಕಾಲ ಮೇಲೆ ನಿಲ್ಲುವಂತಾದೆ."

ಮಿಕ್ಕಿದ್ದು ಅವನು ಹೇಳಿದಂತೆ ಇತಿಹಾಸವಾಗಿರುತ್ತವೆ. ಮುಂದಿನ ಘಟನೆಗಳು ಕ್ಯಾಮ್‌ಗೆ ನಾಟಕೀಯವಾಗಿ ಅನುಕೂಲವನ್ನುಂಟುಮಾಡಿದವು. ಅವನ ಹೆಂಡತಿ ಜೋಸುಲ ಎಂಬ ಮಗುವಿಗೆ ತಾಯಿಯಾದಳು. ಕ್ಯಾಮ್ ಕಾರ್ ರಿಪೇರಿಯ ಒಂದು ಯಶಸ್ವೀ ಅಂಗಡಿಯನ್ನು ತೆರೆದು ಮತ್ತು ಸುಂದರವಾದ ಒಂದು ಮನೆ ಕಟ್ಟಿಸಿದ ಇವೆಲ್ಲಾ ಆರಂಭವಾಗಿದ್ದು ತನ್ನ ಕಡೆಯ ಒಂದೇ ಒಂದು ಡಾಲರ್ ನೋಟನ್ನು ಕಾರ್ ಪಾರ್ಕ್‌ನಲ್ಲಿ ಕಷ್ಟದಲ್ಲಿದ್ದ ಆ ವ್ಯಕ್ತಿಗೆ ಕೊಟ್ಟಾಗಿನಿಂದ.

ಕ್ಯಾಮರನ್ ಮತ್ತೆಂದೂ ಆ ಹಳದೀ ಕಾರನ್ನಾಗಲೀ ಆ ವ್ಯಕ್ತಿಯನ್ನಾಗಲೀ ನೋಡಲಿಲ್ಲ. ಕೆಲವೊಮ್ಮೆ ಆತ, ಅಂದು ಕಾಣಿಸಿಕೊಂಡ ವ್ಯಕ್ತಿ ಭಿಕ್ಷುಕನೇ ಅಥವಾ ದೇವತೆಯೋ ಎಂದು ನೆನೆದು ಆಶ್ಚರ್ಯಗೊಳ್ಳುತ್ತಾನೆ.

ಅದು ಸಂಗತಿಯಲ್ಲ. ಅಂದಿನ ಸನ್ನಿವೇಶವೇನಿತ್ತೋ ಅದು ಅವನ ಪಾಲಿಗೆ ಪರೀಕ್ಷಾ ಕಾಲವಾಗಿತ್ತು. ಕ್ಯಾಮ್‌ರನ್ ಅದರಲ್ಲಿ ಉತ್ತೀರ್ಣನಾಗಿದ್ದ.

ಮನುಷ್ಯ ಎಷ್ಟರ ಮಟ್ಟಿಗೆ ಇತರರ ಒಳ್ಳೆಯದಕ್ಕೆ ದುಡಿಯುತ್ತಾನೆಯೋ ಅಷ್ಟರ ಮಟ್ಟಿಗೆ ಅವನು ದೊಡ್ಡವನಾಗುತ್ತಾನೆ.

—ಗಾಂಧೀಜಿ

ನೆತ್ತರುಕುಡಕನೀಗ ಆರೋಗ್ಯದಾಯಕ!

ಜಿ. ಟಿ. ರಾಘವೇಂದ್ರ

ತೆಳ್ಳಗೆ ಬಳುಕುವ ಪರೋಪಜೀವಿ ಜಿಗಣೆ (ಇಂಬಳ) ಅಳಲೇಕಾಯಿ ಪಂಡಿತರು ಆಧುನಿಕ ವೈದ್ಯರನ್ನು ಅನುಕರಿಸಲೆಂದು ಬಳಸುವ ಸಾಧನವೇ? ಅಲ್ಲ. ನವೀನ ವೈದ್ಯಕೀಯ ಪ್ರಪಂಚದಲ್ಲಿ 'ಜಿಗಣೆ' ಅತ್ಯಂತ ಪ್ರಬಲ ಮತ್ತು ಉಪಯುಕ್ತ ಉಪಕಾರಿ.

ಫ್ರೆಡ್ರಿಕ್ ಪರ್ಸನ್ ಸ್ವೀಡನ್ ದೇಶದ ಸಾಮಾನು ಸಾಗಣೆ ಹಡಗಿನ ಅಟ್ಟಣಿಗೆಯಲ್ಲಿ ನಿಂತಿದ್ದಾನೆ. ಆ ಹಡಗನ್ನು ದಂಡೆಗೆ ಸರಿಸಲು ಕೆಲಸಗಾರರು ಅದಕ್ಕೆ ಕಟ್ಟಿದ್ದ ಬಲಿಷ್ಠ ಹಗ್ಗವನ್ನು ಎಳೆಯುತ್ತಿದ್ದಾರೆ. ಪರ್ಸನ್ ತನ್ನ ಕೈಗಳನ್ನು ಈ ಜಗನ್ನಾಥನ ತೇರೆಳೆಯುವ ಕೆಲಸಕ್ಕೆ ಚಾಚಿ ಶಕ್ತಿ ಹೂಡಿದ್ದಾನೆ. ಅಷ್ಟರಲ್ಲಿ ಎಳೆಯುತ್ತಿದ್ದ ಹಗ್ಗ ತನ್ನಿಂದ ತಾನೆ ಈತನ ಬಲಗೈಯತ್ತ ಜಾರಿ ಗಂಟಾಗಿ ಬಿಟ್ಟಿತು. ಈ ಗಂಟಿನ ಮಧ್ಯದಲ್ಲಿ ಈತನ ಕೈ ಬೆರಳುಗಳು ಸಿಕ್ಕಿ ಹಾಕಿಕೊಂಡು ಬಿಟ್ಟವು.

ತತ್‌ಕ್ಷಣ ಆತನನ್ನು ಸ್ಥಳೀಯ ಆಸ್ಪತ್ರೆಯ ವಿಶೇಷ ಪುನರ್‌ನವೀಕರಣ ಶಸ್ತ್ರಕ್ರಿಯೆ ವಿಭಾಗಕ್ಕೆ ಸಾಗಿಸಲಾಯಿತು. ವೈದ್ಯರುಗಳು ಪರಸ್ಪರ ಚರ್ಚಿಸಿ ಜಜ್ಜಿ ಹೋದ ಬೆರಳುಗಳಲ್ಲಿ ಎರಡನ್ನಾದರೂ ಉಳಿಸಿಕೊಳ್ಳಬಹುದೆಂದು ತೀರ್ಮಾನಿಸಿ ಅತ್ಯಾಧುನಿಕ, ಸೂಕ್ಷ್ಮತಮ ತಾಂತ್ರಿಕ ಜ್ಞಾನವನ್ನು ಹೂಡಿ ಎಡೆಬಿಡದೆ ಎಂಟು ಗಂಟೆ ಕಾಲ ಶಸ್ತ್ರಚಿಕಿತ್ಸೆ ನಡೆಸಿದರು. ಸುರೂಪಿಕ ಶಸ್ತ್ರವೈದ್ಯ ಡೊನಾಲ್ಡ್ ಸುಮ್ಮರ್ ಉಳಿದ ಬೆರಳುಗಳನ್ನು ಜೋಡಿಸಿದರು. ಶಸ್ತ್ರಕ್ರಿಯೆ ಯಶಸ್ವಿ ಆದ ಮೇಲೆ ಫ್ರೆಡ್ರಿಕ್ ತಾನು ಕಳೆದುಕೊಳ್ಳಬೇಕಾಗಿದ್ದ ಬೆರಳುಗಳನ್ನು ಉಳಿಸಿದರು ಎಂದು ಸಂತೋಷದಿಂದ ವೈದ್ಯರಿಗೆ ಕೃತಜ್ಞತೆ ಅರ್ಪಿಸಿದ.

ಆದರೆ ಆತನ ಸಂತೋಷ ಹೆಚ್ಚು ಸಮಯ ಉಳಿಯಲಿಲ್ಲ. ಶಸ್ತ್ರಕ್ರಿಯೆ ನಡೆದ ಆರು ಗಂಟೆಗಳ ಒಳಗಾಗಿ ಬೆರಳುಗಳು ಕಪ್ಪು ಬಣ್ಣಕ್ಕೆ ತಿರುಗಲಾರಂಭಿಸಿದುವು. ರಕ್ತದ ಓಡಾಟಕ್ಕೆ ತೊಂದರೆ ಆಗಿ ರಕ್ತ ಕಲ್ಲುಕಟ್ಟತೊಡಗಿದೆ ಎಂದರು ಡಾ|| ಸುಮ್ಮರ್.

೧೯೮೫ರ ಆಗಸ್ಟ್ ತಿಂಗಳ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ ಲೇಖನದ ಅನುವಾದ.

ಆಧುನಿಕ ವೈದ್ಯಕೀಯ ಶಸ್ತ್ರಚಿಕಿತ್ಸಾ ವಿಭಾಗ ಈಗ ಏನುಮಾಡುವ ಸ್ಥಿತಿಯಲ್ಲೂ ಇರಲಿಲ್ಲ. ಆದರಿಂದ ಡಾ|| ಸುಮ್ಮರ್ತ್ ವೈದ್ಯಕೀಯದಲ್ಲಿ ಪುರಾತನ ಮಿತ್ರನಾದ ಜಿಗಣೆಯನ್ನು ಅವಲಂಬಿಸಬೇಕಾಯಿತು. ಮುಂದಿನ ಎರಡು ದಿನಗಳ ಕಾಲ ಫ್ರೆಡ್ರಿಕ್‌ನ ಕೈಬೆರಳುಗಳ ಮೇಲೆ ಎಡೆಬಿಡದೆ ಜಿಗಣೆ ಪ್ರಯೋಗ ಮಾಡಲಾಯಿತು. ಅವು ಹೆಚ್ಚುವರಿ ರಕ್ತವನ್ನು ಹೀರತೊಡಗಿದುವು. ಇವರ ಉದ್ದೇಶವೆಂದರೆ ಹೆಚ್ಚುವರಿ ಕಪ್ಪುರಕ್ತವನ್ನು ಹೀರಿದರೆ ಮತ್ತೆ ರಕ್ತನಾಳಗಳಲ್ಲಿ ಶುದ್ಧ ರಕ್ತಚಲನೆ ಉಂಟಾಗಬಹುದು ಎಂದು. ಹದಿನೈದು ದಿನಗಳನಂತರ ಎಂದರೆ ೧೯೮೩ನೇ ನವೆಂಬರ್‌ನಲ್ಲಿ ಫ್ರೆಡ್ರಿಕ್ ಸಂತೋಷದಿಂದ ಮನೆಗೆ ಹಿಂತಿರುಗಿದ.

ಜಿಗಣೆಗಳಲ್ಲಿ ಅಂದಾಜು ೬೫೦ ಜಾತಿಗಳಿವೆ. ೧.೫ ಸೆಂ ಮೀ. ಉದ್ದದ ಅತಿ ಚಿಕ್ಕ ಜಿಗಣೆಯಿಂದ, ವಿಸ್ತರಿಸಿದಾಗ ೪೫ ಸೆಂ.ಮೀ. ಉದ್ದ ಆಗುವ ಅತ್ಯಂತ ದೊಡ್ಡ ಜಿಗಣೆಗಳು ವಿಶ್ವಾದ್ಯಂತ ಹರಡಿವೆ. ಇಂತಹ 'ವಲಯದೇಹ'ಗಳೆಲ್ಲವೂ ರಕ್ತ ಹೀರುವ ಜಾತಿಗೆ ಸೇರಿದವುಗಳಾಗಿರುವುದಿಲ್ಲ. ಚರ್ಮದ ಮೂಲಕ ಉಸಿರಾಡುವ, ಎರಡು ಹೃದಯಗಳನ್ನು ಹೊಂದಿರುವ ಇವು ತಿಂಗಳಾನುಗಟ್ಟಲೆ ಆಹಾರವಿಲ್ಲದೆ ಜೀವಿಸಿರಬಲ್ಲವು. ಕೆಲವು ಬಗೆಗಳಿಗೆ ಉಭಯ ತುದಿಗಳಿಂದಲೂ ರಕ್ತ ಹೀರುವ ಸಾಮರ್ಥ್ಯ ಉಂಟು.

ಜಿಗಣೆಯನ್ನು ಇಷ್ಟಪಡುವವರ್‍ಯಾರೂ ಇಲ್ಲ. ಆಫ್ರಿಕಾದಲ್ಲಿ ಮಳೆಗಾಲದಲ್ಲಿ ಮಾತ್ರ ಹರಿಯುವ 'ಆಫ್ರಿಕಾ ರಾಣಿ' ಎಂದೆನಿಸಿಕೊಂಡ ತೊರೆಯಲ್ಲಿ ಕಂಡ ಜಿಗಣೆಯನ್ನು ನೋಡಿ ಹಂಫ್ರಿ ಬೊಗರ್ಟ್ ಎಂಬಾತ ಪ್ರಪಂಚದಲ್ಲಿ ಯಾವುದಾದರೂ ತುಚ್ಛೀಕಾರದಿಂದ ದೂರ ಇಡಬೇಕೆಂಬ ಜಂತು ಒಂದು ಇದ್ದರೆ ಅದು ಜಿಗಣೆ ಮಾತ್ರ ಎಂದಿದ್ದಾನೆ. ಆದರೆ, ಅತ್ಯಂತ ಆಶ್ಚರ್ಯಕರವಾಗಿ ಈ ಜಿಗಣೆಗಳು ವೈದ್ಯಕೀಯ ವಲಯದಲ್ಲಿ ಮರುಪ್ರವೇಶ ಪಡೆದಿದೆ. ಇತ್ತೀಚಿಗಿನ ವರ್ಷಗಳಲ್ಲಿ 'ಹಿರುಡೋ ಮೆಡಿಸಿನಲೀಸ್' ಪತ್ರಿಕೆಯಲ್ಲಿ ಶಸ್ತ್ರಕ್ರಿಯೆಗೊಳಗಾದ ರೋಗಿಗಳಿಗೆ ಅನಗಡಗಳಿಗೆ ತುತ್ತಾದವರಿಗೆ ಜಿಗಣೆ ಪ್ರಯೋಗ ಮಾಡಿ ಅನೇಕ ಕಡೆಗಳಲ್ಲಿ ಅತ್ಯಾಶ್ಚರ್ಯಕರವಾಗಿ ಅದ್ಭುತವನ್ನು ಸಾಧಿಸಿದೆ ಎಂದು ಹೇಳಲ್ಪಟ್ಟಿದೆ.

ಜಿಗಣೆ ರಕ್ತಹೀರುವ ಕ್ರಮ

ಜಿಗಣೆ ತನ್ನ ೨೦೦ ಹರಿತವಾದ ಹಲ್ಲುಗಳಿಂದ ಮಾಂಸಖಂಡದೊಳಗೆ ಕಚ್ಚುವಾಗ (Y) ಆಕಾರದ ಗುರುತು ಉಂಟುಮಾಡುತ್ತದೆ ಮತ್ತು ಸ್ಥಳೀಯವಾಗಿ ಅರಿವಳಿಸುವ ದ್ರವವನ್ನು ಒಳಹರಿಸುತ್ತದೆ. ಇದರಿಂದಾಗಿ ವ್ಯಕ್ತಿಗೆ ಕಚ್ಚಿಸಿಕೊಳ್ಳುವ ಅನುಭವ ಉಂಟಾಗುವುದಿಲ್ಲ. ಜಿಗಣೆ ರಕ್ತ ಹೀರತೊಡಗಿದೊಡನೆ ಒಂದು ರೀತಿಯ ಸಮ್ಮಿಶ್ರ ದ್ರವವನ್ನು ಸುರಿಸಿ ರಕ್ತ ಹೆಪ್ಪುಗಟ್ಟದಂತೆ ಮಾಡುವುದು ಮಾತ್ರವಲ್ಲ ರಕ್ತ ಶುದ್ಧವಾಗಿರುವಂತೆಯೂ ಮಾಡಿಕೊಳ್ಳುತ್ತದೆ ಹಾಗೂ ರಕ್ತ ನಿರಂತರ ಹರಿಯುವಂತೆ ಮಾಡಿಕೊಳ್ಳುತ್ತದೆ. ಜಿಗಣೆ ಕೇವಲ ೨೦ ರಿಂದ ೩೦ ನಿಮಿಷಗಳ ಕಾಲ ರಕ್ತ ಹೀರಬಲ್ಲುದಾದರೂ ಮುಂದೆ ಅದು ಕುತ್ತಿದ ಗಾಯದಿಂದ ರಕ್ತಸ್ರಾವ ಮಾತ್ರ ಹಲವು ಗಂಟೆಗಳ ಕಾಲ ಆಗುತ್ತಲೇ ಇರುತ್ತದೆ

ಎಂದೇ ರಕ್ತ ಹೆಪ್ಪುಗಟ್ಟಿದಲ್ಲಿಗೆ ಮತ್ತೆ ನೆತ್ತರುಹರಿಸಲು ಇವುಗಳ ಉಪಯೋಗ.

ಮನುಷ್ಯನ ಕಿವಿಯ ಭಾಗದ ಪುನರ್ ಜೋಡಣೆ ಸರ್ವಸಾಮಾನ್ಯವಾಗಿ ಅತ್ಯಂತ ಕಷ್ಟದಾಯಕವಾದದ್ದು. ಏಕೆಂದರೆ ಕಿವಿಯ ರಕ್ತನಾಳಗಳು ಅತ್ಯಂತ ಸೂಕ್ಷ್ಮವಾದವು ಮತ್ತು ಅವುಗಳ ಗಾತ್ರ ಅರ್ಧ ಮಿಲಿ ಮೀಟರ್‌ಗೂ ಕಿರಿದು. ಐದು ವರ್ಷ ಪ್ರಾಯದ ಗೇ ಕಂಡೆಲ್ಲಿ ಎಂಬ ಹುಡುಗನ ಬಲಕಿವಿಗೆ ನಾಯಿ ಕಚ್ಚಿದಾಗ ಶಸ್ತ್ರವೈದ್ಯರು ೧೨ ಗಂಟೆಗಳ ಕಾಲ ಶಸ್ತ್ರಕ್ರಿಯೆ ನಡೆಸಿ ಕಿವಿಯ ಮರುಸ್ಥಾಪನೆ ಮಾಡಿದರು. ಆದರೆ ಮೂರುದಿನಗಳನಂತರ ಕಿವಿ ಕಡು ನೀಲಿ ಬಣ್ಣಕ್ಕೆ ತಿರುಗಿತು. ಬಳಿಕ ಕಪ್ಪು ಬಣ್ಣವಾಗತೊಡಗಿತು.

ಶಸ್ತ್ರವೈದ್ಯರು ವೈದ್ಯರ ತಂಡವನ್ನೇ ಕರೆತಂದರು. ವೈದ್ಯ ಜೋಸೆಫ್ ಅಪ್ಟನ್‌ರವರು ವಿಯಟ್ನಾಂನಲ್ಲಿ ಯುದ್ಧಯೋಧರ ಗಾಯಗಳಿಗೆ ಚಿಕಿತ್ಸೆಮಾಡಿ ಅನುಭವ ಗಳಿಸಿದವರು, ಈ ಹುಡುಗನ ಮೇಲೆ 'ಜಿಗಣೆ ಪ್ರಯೋಗ' ಮಾಡಲು ನಿರ್ಧರಿಸಿದರು. ಆರು ದಿನಗಳವರೆಗೆ ಎಡೆಬಿಡದೆ ಒಂದರ ತರುವಾಯ ಇನ್ನೊಂದರಂತೆ ಒಟ್ಟು ೧೨ ಜಿಗಣೆಗಳನ್ನು ಗೇ ಕಿವಿಯ ಮೇಲೆ ಬಿಟ್ಟರು. ಜಿಗಣೆಗಳು ರಕ್ತಹೀರಿ ದಪ್ಪವಾಗಿ ತೃಪ್ತಿಯಿಂದ ಕೆಳಗೆ ಉದುರುತ್ತಿದ್ದವು. ಹೀಗೆ ಆರನೇ ದಿನದ ಅಂತ್ಯಭಾಗದಲ್ಲಿ ರಕ್ತಸಂಚಾರ ಆರಂಭವಾಗಿ ಮಾರನೆದಿವಸ ಕಿವಿ ತನ್ನ ಎಂದಿನ ಬಣ್ಣವನ್ನು ಹೊಂದಿತು.

ಇತ್ತೀಚಿನ ದಿನಗಳಲ್ಲಿ ಬ್ರಿಟನ್ ವೈದ್ಯಕೀಯ ವಲಯದಲ್ಲಿ ಜಿಗಣೆ ಉಪಯೋಗದ ಮೊದಲಿಗನಾಗಿ ಶಸ್ತ್ರವೈದ್ಯ ಪೀಟರ್ ಮಹಾಫೆಯವರನ್ನು ಗುರುತಿಸಬಹುದು. ಮುಂದುವರಿದ ಇಂದಿನ ದಿನಗಳಲ್ಲಿ ಹೆಜ್ಜೆ ಹಿಂದೆ ಇಡುವುದನ್ನು ಇವರ ಸಹಪಾಠಿಗಳು ತೀವ್ರವಾಗಿ ವಿರೋಧಿಸುತ್ತಿದ್ದರು. ಆದರೆ, ಇವರು ಇದನ್ನು ಗಣನೆಗೆ ತೆಗೆದುಕೊಳ್ಳದೆ, ೧೯೭೯ ರಲ್ಲಿ ಬೆರಳು ಬೇರ್ಪಡಿಸುವ ಶಸ್ತ್ರಕ್ರಿಯೆಯೊಂದರಲ್ಲಿ ರಕ್ತ ಕಲ್ಲುಗಟ್ಟಿದಾಗ 'ಜಿಗಣೆ ಪ್ರಯೋಗ' ಮಾಡಿ ಯಶಸ್ಸುಗಳಿಸಿದರು. ಇವರ ವಿದ್ಯಾರ್ಥಿಜೀವನದ ದಿನಗಳಲ್ಲಿ ರಗ್ಬಿ ಆಟದಲ್ಲಿ ತೊಂದರೆಗೆ ಒಳಗಾದ ಆಟಗಾರರ ಕಪ್ಪು ಬಣ್ಣಕ್ಕೆ ತಿರುಗಿದ ಕಣ್ಣುಗಳನ್ನು ಸಹಜಸ್ಥಿತಿಗೆ ತರಲು ಇವರು ಜಿಗಣೆಗಳನ್ನು ನಿಯೋಜಿಸಿದ್ದನ್ನು ನೆನಪಿಸಿಕೊಳ್ಳುತ್ತಾರೆ. ಅನಂತರ, ಇವರು ಪ್ರಯೋಗಾಲಯದಲ್ಲಿ ಇವರ ಶಸ್ತ್ರಕ್ರಿಯೆ ಪೆಟ್ಟಿಗೆ ಜೊತೆಗೆ ಭರಣಿ ತುಂಬಾ ಜಿಗಣೆಗಳನ್ನು ಇಟ್ಟುಕೊಳ್ಳಲು ಆರಂಭಿಸಿದರು.

'ಲೇತ್'ನಲ್ಲಿ ಕೆಲಸಮಾಡುವ ಅಥವಾ ಅಚ್ಚುಕೂಟದಲ್ಲಿ ದುಡಿಯುವ ಕೆಲಸಗಾರರ ಬೆರಳುಗಳು ಕತ್ತರಿಸಿಹೋದ ಸಂದರ್ಭದಲ್ಲಿ ಅವನ್ನು ಉಳಿಸಿಕೊಳ್ಳಲು ಶಸ್ತ್ರಕ್ರಿಯೆ ಮಾಡುತ್ತಿರುವಾಗ ಜಿಗಣೆಗಳನ್ನು ಬಳಸಿಕೊಳ್ಳುತ್ತಿರುವುದು ಕಂಡುಬಂದಿದೆ' ಎಂದು ೪೭ ವರ್ಷ ವಯಸ್ಸಿನ ವೈದ್ಯರೊಬ್ಬರು ತಿಳಿಸಿದ್ದಾರೆ. ಪ್ರತಿಯೊಂದು ಜಿಗಣೆಯ ಬೆಲೆ ತಲಾ ೮ ಪೆನ್ನಿ ಎಂದಾದರೆ, ೨೪ ಗಂಟೆಗಳ ಕಾಲ ಶಸ್ತ್ರವೈದ್ಯರ ತಂಡ ಪರಿಣತದಾದಿಯರ ಸಹಾಯದಿಂದ ಶಸ್ತ್ರಕ್ರಿಯೆ ನಡೆಸಿ ಕೊನೆಗೂ ದೃಢವಾಗಿ ಏನೂ ಹೇಳಲಾರದ ಸ್ಥಿತಿಯಲ್ಲಿರುವ ಸಂದರ್ಭವನ್ನು ಗಮನಿಸಿದರೆ ಇದು ಅತ್ಯಂತ ಕಡಿಮೆ ಖರ್ಚಿನ ಔಷಧಿ ಎಂದೆನ್ನಿಸದೇ?

ಬೆಳೆಯುತ್ತಿರುವ ಕುತೂಹಲ

ಫ್ರೆಡ್ರಿಕ್ ಪರ್ಸನ್‌ನ ಕೈಬೆರಳುಗಳಿಗೆ ಮತ್ತು ಗೇ ಕಂಡಿಲ್ಲರ್‌ನ ಕಿವಿಗೆ ಉಪಯೋಗಿಸಿದ ಜಿಗಣೆಗಳನ್ನು ವೈದ್ಯ ಮಹಾಫೆ ಉಪಯೋಗಿಸಿದ್ದು ಮೂಲತಃ ಡಾ|| ರಾಯ್ ಸಾಯರ್ ಸ್ಥಾಪಿಸಿ ಬೆಳೆಸಿದ ಬ್ರಿಟನ್‌ನ ಏಕೈಕ ಜಿಗಣೆ ಉತ್ಪಾದನಾ ಕೇಂದ್ರದ್ದಾಗಿತ್ತು. ಈ ಕೇಂದ್ರ ದಕ್ಷಿಣ ವೇಲ್ಸ್‌ನ ಹೇಂಡಿಗ್ರಾಮದಲ್ಲಿದೆ ಪ್ರತಿ ತಿಂಗಳು ಈ ಜೀವ ಕೇಂದ್ರ ೫,೦೦೦ಕ್ಕೂ ಅಧಿಕ ರೋಗ ವಾಸಿಮಾಡುವ ಜಿಗಣೆಗಳನ್ನು ಪ್ರಪಂಚದಾದ್ಯಂತ ಇರುವ ಆಸ್ಪತ್ರೆಗಳಿಗೆ, ವೈದ್ಯರಿಗೆ ಕಳಿಸಿಕೊಡುತ್ತಾರೆ.

ಡಾ|| ಸಾಯರ್ ಸಣ್ಣ ಹುಡುಗನಾಗಿದ್ದಾಗ ಅಮೆರಿಕಾದ ದಕ್ಷಿಣ ಕೆರೋಲಿನಾದ ತನ್ನ ಸ್ವಗ್ರಾಮದಲ್ಲಿನ ಜವುಗು ಪ್ರದೇಶದ ಕೆರೆಯಲ್ಲಿ ಈಜುತ್ತಿದ್ದಾಗ ಪ್ರಥಮವಾಗಿ ಜಿಗಣೆ ತನ್ನ ಮೇಲೆ ಆಕ್ರಮಿಸಿದ್ದನ್ನು ಸಂತೋಷದಿಂದ ಎದುರಿಸಿದ ಸೊಳ್ಳೆಗಳಂತೆ ಜಿಗಣೆಗಳೂ ಸಹ ಸ್ವಾಭಾವಿಕವಾಗಿ ಮನುಷ್ಯರಿಂದ ತಿರಸ್ಕರಿಸಲ್ಪಡುವ ಜಂತುಗಳು ಎಂದು ಕಂಡುಕೊಂಡ.

ಸಾಯರ್ ಶಾಲೆಯಲ್ಲಿ ಓದುತ್ತಿದ್ದಾಗ ಜಿಗಣೆ ವೈದ್ಯ ಶಾಸ್ತ್ರದಲ್ಲಿ ವಹಿಸುವ ಪಾತ್ರ ನೋಡಿ ಅವುಗಳಿಂದ ಆಕರ್ಷಿತನಾದ. ಉದ್ರೇಕಕಾರಿ ಕಾಯಿಲೆಗಳ ಪ್ರಾಥಮಿಕ ಹಂತದಲ್ಲಿ ಚಿಕಿತ್ಸೆಗಾಗಿ ಜಿಗಣೆಗಳನ್ನು ಉಪಯೋಗಿಸುತ್ತಿದ್ದುದು ಚಾರಿತ್ರಿಕ ದಾಖಲೆಯಾಗಿದೆ. ನೂರಾರು ವರ್ಷಗಳಲ್ಲಿ ಅಂಗಚ್ಛೇದನದ ಬದಲಾಗಿ ಶಸ್ತ್ರಕ್ರಿಯೆ ಚಿಕಿತ್ಸೆಗೆ ಮೊದಲು ರಕ್ತ ಹರಿದು ಹೋಗುವಂತೆ ಮಾಡುವುದೇ ಚಿಕಿತ್ಸೆಯಾಗಿತ್ತು.

ತಳಿ ಅಭಿವೃದ್ಧಿಯ ಅಮಿತೋತ್ಸಾಹ

ಡಾ|| ಸಾಯರ್, ವೇಲ್ಸ್ ವಿಶ್ವವಿದ್ಯಾನಿಲಯದಿಂದ ಜೀವಶಾಸ್ತ್ರದಲ್ಲಿ ಪಾಂಡಿತ್ಯ (ಪಿಹೆಚ್.ಡಿ) ಪದವಿ ಪಡೆದರು. ಇವರು ಸತತವಾಗಿ ಹತ್ತು ವರ್ಷಗಳಿಗೂ ಮೇಲ್ಪಟ್ಟು ಶ್ರಮಿಸಿ 'ಜಿಗಣೆಯ ಜೀವಶಾಸ್ತ್ರ ಮತ್ತು ವರ್ತನೆ ಎಂಬ ಮೂರು ಸಂಪುಟಗಳ ಬೃಹತ್‌ಗಾತ್ರದ ಗ್ರಂಥವನ್ನು ರಚಿಸಿದ್ದು ಇದು ಪ್ರಪಂಚದಲ್ಲಿ ಜಿಗಣೆ ವಿಚಾರದಲ್ಲಿ ಅಧಿಕಾರಯುಕ್ತವಾಗಿ ವಿವರಣೆ ನೀಡುವ ಆಧಾರ ಗ್ರಂಥವಾಗಿದೆ. 'ಹೆಂಡಿ' ಎಂಬಲ್ಲಿ ಉಷ್ಣತೆಯನ್ನು ಒಂದೇ ಪ್ರಮಾಣದಲ್ಲಿ ಹಿಡಿತದಲ್ಲಿಟ್ಟಿರುವ ಗಾಜಿನ ಕೊಳಗಳಲ್ಲಿ ೮೦೦೦೦ಕ್ಕೂ ಅಧಿಕ ಜಾತಿಗಳ ಜಿಗಣೆಗಳನ್ನು ಬಳಸಿಕೊಂಡು ಅವುಗಳನ್ನು ವೃದ್ಧಿ ಮಾಡುತ್ತಿದ್ದಾರೆ.

ಇಂದಿನ ದಿನಗಳಲ್ಲಿ ಶಸ್ತ್ರಚಿಕಿತ್ಸಾನಂತರದ ಚಿಕಿತ್ಸೆಯಲ್ಲಿ ಜಿಗಣೆಯನ್ನು ಬಳಸುವ ಕ್ರಮ ಬಹಳ ಮುಂದುವರಿದಿದೆ. ೧೯೭೬ರಲ್ಲಿ ಡಾ|| ಸಾಯರ್ ಫ್ರೆಂಚ್‌ಗಿಯಾನಾದ ಅರಣ್ಯಗಳಿಗೆ ವಿಜ್ಞಾನಿಗಳ ವಿಶೇಷ ಸಂಶೋಧನಾ ಯಾತ್ರೆಯ ಮುಖಂಡತ್ವ ವಹಿಸಿದರು. ಅವರ ಉದ್ದೇಶ ರಾಕ್ಷಸ ಗಾತ್ರದ ನುಣುಚಿಕೊಳ್ಳುವ 'ಹಮಿನ್‌ಟೇರಿಯಾ ಘಿಲಿಯಾನಿ' ಎಂಬ ಜಿಗಣೆಯನ್ನು ಹುಡುಕಿ ಹಿಡಿಯುವುದು (೧೯ನೇ ಶತಮಾನದ) ಇಟಲಿಯ ಸಸ್ಯವಿಜ್ಞಾನಿ ಓಟೋರ್ ಘಿಲಿಯಾನಿ ಅಮೆಜಾನ್ ನದಿಯ ಮುಖಜಭೂಮಿಯಲ್ಲಿ ಈ ಜಿಗಣೆಯನ್ನು ಕಂಡುಹಿಡಿದದ್ದರಿಂದ ಆ ಜಿಗಣೆಗೆ ಅವರ ಹೆಸರನ್ನು ಕೊಡಲಾಗಿದೆ). ೬ ವಾರಗಳ ಕಾಲ ಅತ್ಯಂತ ಶ್ರಮವಹಿಸಿ ಈ ಸಾಹಸ

ಯಾತ್ರೆಯಲ್ಲಿ ಮೂವತ್ತು ಜಿಗಣೆಗಳನ್ನು ಸಂಪಾದಿಸಿದರು.

ದಕ್ಷಿಣ ಅಮೇರಿಕಾದ ಜವುಗುಪ್ರದೇಶದ ವಾತಾವರಣವನ್ನು ಇವರ ಪ್ರಯೋಗಾಲಯದಲ್ಲಿ ಕೃತಕವಾಗಿ ಸೃಷ್ಟಿಸಿ ಈ ತಳಿಗಳ ಸಂಖ್ಯೆಯನ್ನು ೧೦,೦೦೦ಕ್ಕೆ ಏರಿಸಿದರು. ಅವುಗಳ ಜೊಲ್ಲುರಸ ಅತ್ಯಂತ ಪ್ರಬಲವಾದ ಮತ್ತು ಬರಸುವ ಔಷಧ ಗುಣ ಹೊಂದಿದ್ದು ಕಲ್ಲುಗಟ್ಟಿದ ರಕ್ತವನ್ನು ನೀರಾಗಿಸುತ್ತದೆ. ಈ ಕ್ರಿಯೆಯನ್ನು ಅವರು 'ಹೆಮಿಂಟನ್' ಎಂದು ಕರೆದರು. 'ಹೆಮಿಂಟನ್' ಎಂದರೆ ತಾಂತ್ರಿಕವಾಗಿ ಒಂದು ಜಾತಿಯ ಜಂತನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಸುವ ಕ್ರಮ ಎಂದರು ಡಾ॥ ಸಾಯರ್.

ಜಿಗಣೆಯ ಜೊಲ್ಲಿನಿಂದ ಜೀವರಾಸಾಯನಿಕ ವಸ್ತುಗಳನ್ನು ಬೇರ್ಪಡಿಸಿ ಶೇ. ೮೦ ಭಾಗ ಔಷಧವನ್ನಾಗಿಸಿ ವರ್ಷ ಒಂದರ ೫ ಲಕ್ಷ ಪೌಂಡ್ ಮೌಲ್ಯದ ಉತ್ಪತ್ತಿ ಮಾಡಲಾಗುತ್ತಿದೆ. ಒಟ್ಟಿನಲ್ಲಿ ಹೇಳುವುದಾದರೆ ಇದುವರೆಗೆ ಜಿಗಣೆಯಿಂದ ಹತ್ತು ತರದ ಔಷಧಿಯನ್ನು ಕಂಡು ಹಿಡಿಯಲಾಗಿದೆ. ಭವಿಷ್ಯದಲ್ಲಿ ಪಾರ್ಶ್ವವಾಯು, ವಾತರೋಗ, ಕಣ್ಣಿನ ರೋಗಗಳಿಗೆ ಮಾಡುವ ಚಿಕಿತ್ಸೆಯಲ್ಲಿ ಇದನ್ನು ಬಳಸುವ ಸಾಧ್ಯತೆ ಇದೆ.

ಭೂತಕಾಲವನ್ನು ಗಮನಿಸಿದಾಗ ನಮ್ಮ ಹಿರಿಯರು ವೈದ್ಯಕೀಯ ವಿಜ್ಞಾನದಲ್ಲಿ ಜಿಗಣೆಗೆ ಅದೆಷ್ಟು ಪ್ರಾಮುಖ್ಯ ಕೊಟ್ಟಿದ್ದರು ಎಂದು ಗೊತ್ತಾಗುತ್ತದೆ. ಡಾ॥ ಸಾಯರ್ ಹೇಳುತ್ತಾರೆ, "ಜಿಗಣೆ ಅದೊಂದು ಜಂಗಮ ಔಷಧಾಲಯ"



ಮಕ್ಕಳು, ಯುವಕರು ಮತ್ತು ಮಹಿಳೆಯರು—ಎಲ್ಲರೂ ಸರಿಸಮಾನವಾಗಿ ಬೆಳೆಸಿಕೊಳ್ಳಬಹುದಾದ ಶಕ್ತಿ ಅಂದರೆ ಅಹಿಂಸೆ.

—ಗಾಂಧೀಜಿ

ಬಿ.ಎಂ. ೦೩೨ ವಿಮಾನದಲ್ಲಿ ತುರ್ತು ಸಂದರ್ಭ

ಎಂ. ಜಯಂತಿಬಾಯಿ

(ಇನ್ನೇನು ! ಈ ಹೆಂಗಸು ಸಾಯುವ ಸ್ಥಿತಿಯಲ್ಲಿದ್ದಾಳೆ. ಜಂಬೋಜೆಟ್ ವಿಮಾನವಂತೂ ಸದ್ಯಕ್ಕೆ ಕೆಳಗಿಳಿಯುವುದಿಲ್ಲ. ಹೀಗಾಗಿ ನಾನು ಈ ವಿಮಾನದಲ್ಲಿಯೇ ಆಕೆಗೆ ಶಸ್ತ್ರಚಿಕಿತ್ಸೆ ನಡೆಸಲೇಬೇಕು ಎಂದು ಶಸ್ತ್ರ ವೈದ್ಯರು ನಿರ್ಣಯಿಸಿದರು.)

ಥಾಮಸ್ ಗಾಲ್‌ಸ್ಟರ್ ಎಂಬ ವ್ಯಕ್ತಿ ಹಾಂಗ್‌ಕಾಂಗಿನ ಹೊರವಲಯದ ಮೂಲಕ ತನ್ನ ಭವ್ಯ ಮೋಟಾರ್ ಸೈಕಲ್ಲನ್ನು ವೇಗವಾಗಿ ಕ್ರೈಟಾಕ್ ವಿಮಾನ ನಿಲ್ದಾಣದತ್ತ ಓಡಿಸುತ್ತಿದ್ದರು. ಹಿಂದೆ ಕುಳಿತಿದ್ದ ಪೌಲಾಡಿಕ್ಸನ್ ಅವರನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದಳು. ೩೮ ವರ್ಷ ವಯಸ್ಸಿನ ಡಿಕ್ಸನ್ ಎರಡು ವಾರಗಳ ಹಿಂದೆಯಷ್ಟೇ ಸ್ಕಾಟ್ಲೆಂಡಿನ ಅಬರ್ಡೀನ್ ಅನ್ನು ಬಿಟ್ಟು ಬಂದಿದ್ದಳು. ಪತಿಯಿಂದ ಬೇರ್ಪಟ್ಟು, ವಿವಾಹ ವಿಚ್ಛೇದನಕ್ಕಾಗಿ ಕಾಯುತ್ತಿದ್ದ ಆಕೆ ಒಬ್ಬಂಟಿಗಳಾಗಿದ್ದಳು ; ಆಕೆಗೆ ರಜೆ ತೀರ ಅಗತ್ಯವಿತ್ತು. ಆಕೆ ಹಾಂಗ್‌ಕಾಂಗ್‌ಗೆ ಬಂದಿಳಿದ ಮೊದಲ ಸಂಜೆಯಂದು ಜರ್ಮನಿಯ ಸ್ಟಟ್‌ಗರ್ಟ್ ನಿವಾಸಿ ಹಾಗೂ ೩೦ ವರ್ಷ ವಯಸ್ಸಿನ ಗಾಲ್‌ಸ್ಟರ್ ಎಂಬ ಓರ್ವ ಕಾರ್ಖಾನೆಯ ಮ್ಯಾನೇಜರ್‌ನನ್ನು ಭೇಟಿಯಾದಳು. ಈ ಭೇಟಿ ಆಕೆಯ ಜೀವನದಲ್ಲಿ ಹೊಸ ಅಧ್ಯಾಯ ತೆರೆಯಿತು. ಅದು ಸುಂಟರಗಾಳಿಯಂತಹ ಅದ್ಭುತ ಪ್ರಣಯವಾಗಿ ಪರಿಣಮಿಸಿತು.

ಆಕೆಯ ಪ್ರವಾಸ ಮುಕ್ತಾಯಗೊಳ್ಳಲು ಇನ್ನೇನು ಮೂರು ದಿನಗಳಿವೆ ಎನ್ನುವಾಗ ಗಾಲ್‌ಸ್ಟರ್ ಆಕೆಯೊಡನೆ ತನ್ನನ್ನು ಮದುವೆಯಾಗಬೇಕೆಂದು ಕೇಳಿದ.

"ತಮಾಷೆ ಮಾಡುತ್ತಿದ್ದೀರಾ ಗಾಲ್‌ಸ್ಟರ್ ?" ಎಂದು ಡಿಕ್ಸನ್ ಆಶ್ಚರ್ಯದಿಂದ ಕೇಳಿದಳು.

"ನನ್ನ ಜೀವಮಾನವೆಲ್ಲ ನಿನ್ನ ನಿರೀಕ್ಷೆಯಲ್ಲಿಯೇ ಇದ್ದೇನೆಂದು ನನಗೆ ತೋರುತ್ತಿದೆ ಡಿಕ್ಸನ್" ಎಂದು ಗಾಲ್‌ಸ್ಟರ್ ಹೇಳಿದಾಗ ಆನಂದತುಂದಿಲಳಾದ ಡಿಕ್ಸನ್ ಪರವಶಳಾಗಿ ಆತನನ್ನು ಅಪ್ಪಿಕೊಂಡು "ಹೌದೇನು ?" ಎಂದು ಕೇಳಿದಳು.

೧೯೭೭ರ ಏಪ್ರಿಲ್ ತಿಂಗಳ "ರೀಡರ್ಸ್ ಡೈಜೆಸ್ಟ್" ಸಂಚಿಕೆಯಲ್ಲಿ ಪ್ರಕಟವಾದ ಡಾ॥ ಜಾನ್ ಡೈಸನ್ ಅವರ "ಎಮರ್ಜೆನ್ಸಿ ಆನ್ ಫ್ಲೈಟ್ ಬಿ.ಎಂ. ೦೩೨" ಎಂಬ ಲೇಖನದ ಭಾವಾನುವಾದ.

ಮರು ದಿನ ಹಿತಕರವಾದ ನಸುಬೆಳಕಿನಲ್ಲಿ ಅವರಿಬ್ಬರೂ ವಾಹನದಲ್ಲಿ ಕುಳಿತು ನಿಧಾನವಾಗಿ ಮುಂದೆ ಸಾಗುತ್ತಿದ್ದರು. ಡಿಕ್ಸನ್ಳಂತೂ ಹೊಸ ಜೀವನವನ್ನು ಆರಂಭಿಸುವ ಕನಸು ಕಾಣತೊಡಗಿದಳು. ಅಷ್ಟರಲ್ಲಿ ಥಕ್ಕನೆ ನೀಲಿ ಬಣ್ಣದ ಕಾರೊಂದು ಪಕ್ಕದ ರಸ್ತೆಯಿಂದ ದಾರಿಬಿಟ್ಟು ಇತ್ತ ಬಂತು. ಗಾಲ್‌ಸ್ಟರ್ ತನ್ನ ಮೋಟಾರ್ ಸೈಕಲ್ಲಿಗೆ ಜೋರಾಗಿ ಬ್ರೇಕು ಹಾಕಿದರೂ ಕೂಡ ಮೋಟರ್ ಸೈಕಲ್ಲು ಕಾರಿನ ಬಾಗಿಲಿಗೆ ಡಿಕ್ಕಿ ಹೊಡೆದು ಮುಂದಕ್ಕೆ ಎಸೆಯಲ್ಪಟ್ಟರು. ಕಾರಿನ ಎಂಜಿನ್ ಮೇಲೆ ಆಕೆ ರಭಸದಿಂದ ನೂಕಲ್ಪಟ್ಟು, ಅಲ್ಲಿಂದ ರಸ್ತೆಯ ಮೇಲೆ ಜಾರಿ ಬಿದ್ದಳು.

ಏನಾಯಿತೆಂದು ತಿಳಿಯದೆ ದಿಗ್ಭ್ರಮೆಗೊಂಡ ಕಪ್ಪು ಕೂದಲಿನ ಆ ಹೆಂಗಸು ನಿಂತುಕೊಳ್ಳಲು ಹೆಣಗಾಡಿದಳು. ಗಾಲ್‌ಸ್ಟರ್ ಆಕೆ ಬಿದ್ದ ಕಡೆಗೆ ಓಡಿ ಹೋಗಿ, "ನಿನಗೇನಾದರೂ ಪೆಟ್ಟಾಯಿತೇ?" ಎಂದು ಡಿಕ್ಸನ್‌ಳನ್ನು ಕೇಳಿದನು.

ಬಳಿಯಲ್ಲಿಯೆ ವೈದ್ಯರು

"ಸ್ವಲ್ಪ ತರಚಿದಂತಾಗಿದೆಯಷ್ಟೇ" ಎಂದು ಆಕೆ ನಡುಗುತ್ತ ಹೇಳಿದಳು. ಆಕೆಯ ಎಡ ತೋಳಿನಲ್ಲಿ ಏಳು ಸೆಂಟಿಮೀಟರ್ ಉದ್ದದ ಉಜ್ಜುಗಾಯವಾಗಿ ಅದರಿಂದ ರಕ್ತ ಸುರಿಯತೊಡಗಿತ್ತು. ಆದರೆ ಆಕೆ "ನೀವು ಹೇಗಿದ್ದೀರಿ, ನಿಮಗೇನೂ ಆಗಿಲ್ಲತಾನೇ?" ಎಂದು ಗಾಲ್‌ಸ್ಟರ್ ಅವರಿಗೆ ಕೇಳಿದಳು. "ಇಲ್ಲ. ನನಗೇನೂ ಆಗಿಲ್ಲ. ಆದರೆ ನಾನು ಈಗ, ನಿನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತೇನೆ" ಎಂದು ಗಾಲ್‌ಸ್ಟರ್ ಉತ್ತರಿಸಿದನು.

ಅದಕ್ಕೆ "ಆಗಲಿ" ಎಂದು ಡಿಕ್ಸನ್ ತಲೆಯಾಡಿಸಿದಳು.

"ನನಗೆ ಅಂಥ ತೊಂದರೆ ಯೇನೂ ಆಗಿಲ್ಲ. ನಾನು ವಿಮಾನವನ್ನು ಹತ್ತಬೇಕಾಗಿದೆ ಡಾರ್ಲಿಂಗ್, ದಯವಿಟ್ಟು ನನ್ನನ್ನು ವಿಮಾನ ನಿಲ್ದಾಣದವರೆಗೆ ಬಿಡುತ್ತೀರಾ," ಎಂದು ಕೇಳಿದಳು.

ವಿಮಾನದ ಪ್ರಯಾಣಿಕರ ದಾಖಲೆಗಳನ್ನು ತಾಳೆನೋಡುವ ಕಚೇರಿಯಲ್ಲಿ ಬಾರ್ಬರಾ ಮುರ್ರೆ ಅವರು ಲಗೇಜು ಪೇರಿಸಿದ ಟ್ರಾಲಿಯ ಬಳಿಯಲ್ಲಿ ಅಸಹನೆಯಿಂದ ಕಾಯುತ್ತಿದ್ದರು. ದೀರ್ಘಕಾಲದ ಈ ಇಬ್ಬರು ಸ್ನೇಹಿತರು ರಜಾಕಾಲದ ಪ್ರವಾಸದ ಮೇಲೆ ಒಟ್ಟಿಗೆ ಬಂದಿದ್ದರು.

"ಪೌಲಾಳಿಗೆ ಏಕೆ ಇಷ್ಟು ತಡವಾಯಿತು!" ಅವರು ಹಿಂತಿರುಗುವಂತಹ ವಿಮಾನದ ಪ್ರಯಾಣಿಕರ ದಾಖಲಾತಿಯ ಪರಿಶೀಲನೆಯು ಬ್ರಿಟಿಷ್ ವಾಯುಯಾನ ೦೩೨ ಪರಿಶೀಲನೆ ಮುಗಿಸಿ ಇನ್ನು ೧೫ ನಿಮಿಷಗಳಲ್ಲಿಯೇ ಮುಚ್ಚಲ್ಪಡುತ್ತಿತ್ತು.

ಮುರ್ರೆ ಕಾಯುತ್ತಿದ್ದಂತೆ ಕೊನೆಗೂ ಪೌಲಾ ಡಿಕ್ಸನ್ ಬಂದು ತಲುಪಿದಳು. ಆಕೆಯ ಮುಖ ಪೇಲವವಾಗಿತ್ತು.

"ಮುರ್ರೆ, "ಬೈಕ್‌ನಿಂದ ನಾವು ಎಗರಿಬಿದ್ದೆವು" ಎನ್ನುತ್ತ ಆಕೆ ಮುರ್ರೆ ಅವರಿಗೆ, ತನ್ನ ತೋಳಿನ ತರಚಿದ ಗಾಯವನ್ನು ತೋರಿಸಿದಳು.

"ಪೌಲಾ, ಡಾಕ್ಟರರಿಗೆ ತೋರಿಸಬೇಕಿತ್ತಲ್ಲ!" ಎಂದರು ಗೆಳೆಯ ಮುರ್ರೆ.

"ಇಲ್ಲ ಮುರ್ರೆ, ನಾನು ಆದಷ್ಟು ಬೇಗ ಮನೆಗೆ ಹೋಗಬೇಕು" ಎಂದು ಹೇಳಿ ಹೊಸ ಮಿತ್ರ ಗಾಲ್‌ಸ್ಟರ್ ಅವರೊಡನೆ "ಊರಿಗೆ ಹೋಗಿ ಬೇಗ ಮತ್ತೆ ಬಂದು ಬಿಡುತ್ತೇನೆ ಎಂದು ಹೇಳುತ್ತ ಗಾಲ್‌ಸ್ಟರ್ ರನ್ನು ಆಲಂಗಿಸಿ, ಅಂತಿಮವಾಗಿ ಕೈ ಬೀಸುತ್ತ ವಿದಾಯ ಹೇಳಿದ ಡಿಕ್ಸನ್ ಅಲ್ಲಿಂದ ಒಳ ನಡೆದಳು.

೩೩೧ ಮಂದಿ ಪ್ರಯಾಣಿಕರನ್ನು ಹೊತ್ತ ಬೋಯಿಂಗ್ ೭೪೭ ವಿಮಾನಕ್ಕೆ ಲಂಡನ್ ತಲುಪಲು ೧೫ ಗಂಟೆಗಳ ಅವಧಿಬೇಕಾಗಿತ್ತು" ಡಿಕ್ಸನ್ ಮತ್ತು ಮುರ್ರೆ ಅವರಿಗೆ ವಿಮಾನದೊಳಗಿನ ೫೩ನೆಯ ಸಾಲಿನಲ್ಲಿ ನಡುವಿನ ನಾಲ್ಕು ಆಸನಗಳು ಸಿಕ್ಕಿದ್ದುವು. ಡಿಕ್ಸನ್ ಒಬ್ಬ ವಿಮಾನ ಅನುಚರನನ್ನು ನಿಲ್ಲಿಸಿ ತನಗೆ ನೋವು ನಿಲ್ಲಿಸುವ ಔಷಧಿ ಕೊಡಬೇಕೆಂದು ಕೇಳಿದಳು.

ಅಲ್ಲದೆ ತನ್ನ ತೋಳಿನಲ್ಲಿ ಆದ ಗಾಯವನ್ನು ಒರಸಿ ಸ್ವಚ್ಛಗೊಳಿಸಲು ಏನಾದರೂ ಸಿಗಬಹುದೇ ಎಂದು ಕೇಳಿದಳು. ಆಕೆಯ ತೋಳಿನ ಗಾಯ ನೋಡಿದ ಆ ವಿಮಾನ-ಅನುಚರನು, "ಅದಕ್ಕಿಂತ ಹೆಚ್ಚು ನೆರವು ಬೇಕಾಗಿದೆ" ಎಂದು ಹೇಳಿದನು. ಕೆಲವೇ ಕ್ಷಣಗಳಲ್ಲಿ ಪಿ.ಎ. ವ್ಯವಸ್ಥೆಯಿಂದ ಹೀಗೆ ಒಂದು ಪ್ರಕಟನೆಯನ್ನು ಹೊರಡಿಸಲಾಯಿತು,—

"ವಿಮಾನದೊಳಗೆ ಯಾರಾದರೂ ವೈದ್ಯರಿದ್ದರೆ, ದಯವಿಟ್ಟು ಕ್ಯಾಬಿನ್-ತಂಡದ ಯಾವುದೇ ಸದಸ್ಯನಿಗೆ ನಿಮ್ಮನ್ನು ಪರಿಚಯಿಸಿರಿ."

ಆಗ ಅದೇ ವಿಮಾನದಲ್ಲಿ ಪ್ರಯಾಣ ಮಾಡುತ್ತಿದ್ದ ಟಾಮ್ ವಾಂಗ್ ಎಂಬ ವೈದ್ಯರು ತಮ್ಮ ಆಸನಕ್ಕೆ ಕಟ್ಟಿಕೊಂಡಿದ್ದ ಬೆಲ್ಟ್‌ಅನ್ನು ಕಳಚಿದರು. ೨೯ ವರ್ಷ ವಯಸ್ಸಿನ ಆ ಯುವ ವೈದ್ಯರು ನೀಲಿ ಬಣ್ಣದ ಜೀನ್ಸ್ ಧರಿಸಿದ್ದರು. ತೆಳುವಾದ ಮೈಕಟ್ಟಿನ ನೋಡಲು ಒಬ್ಬ ವಿದ್ಯಾರ್ಥಿಯಂತೆ ಕಾಣಿಸುತ್ತಿದ್ದರು. ಆದರೆ, ವಾಂಗ್ ಅವರು ಅದೇ ತಾನೇ ವೈದ್ಯಕೀಯ ಶಿಕ್ಷಣ ಮುಗಿಸಿದ ಹೊಸ ವೈದ್ಯರಾಗಿದ್ದರು ಮತ್ತು ಸ್ಕಾಂಟ್ಲೆಂಡಿನಲ್ಲಿಯ ಒಂದು ಆಸ್ಪತ್ರೆಯಲ್ಲಿ ಕೆಲಸದ ಮೇಲೆ ಹಾಜರಾಗಲು ಹೊರಟಿದ್ದರು.

ವಿಮಾನದ ಮೆಲಂತಸ್ತಿನಲ್ಲಿ ಇನ್ನೊಬ್ಬರು ಕೈಯೆತ್ತಿದರು. "ನಾನೇನಾದರೂ ಸಹಾಯ ಮಾಡಲೇ" ಎಂದು ಆ್ಯಂಗಸ್ ವ್ಯಾಲೇಸ್ ಕೇಳಿದರು. ದೃಢಕಾಯದ ೪೮ ವರ್ಷ ವಯಸ್ಸಿನ ಆ ವ್ಯಕ್ತಿ ಇಂಗ್ಲೆಂಡಿನ ನಾಟಿಂಗ್ ಹ್ಯಾಮ್‌ನಲ್ಲಿ ಅಂಗ ವಿಕಾರಗಳನ್ನು ಸರಿಪಡಿಸುವ ಮತ್ತು ಅಪಘಾತ-ಶಸ್ತ್ರ ಚಿಕಿತ್ಸೆಯ ಪ್ರಾಧ್ಯಾಪಕರಾಗಿದ್ದು ವೈದ್ಯಕೀಯ ವಿದ್ಯಾರ್ಥಿಗಳ ರಸಪ್ರಶ್ನೆ-ಕಾರ್ಯಕ್ರಮಕ್ಕಾಗಿ ಹಾಂಗ್ ಕಾಂಗಿಗೆ ಹೋಗಿದ್ದರು. ವಿಮಾನದ ಪ್ರಯಾಣ ಕಾಲದಲ್ಲಿ ವೈದ್ಯಕೀಯ ಪತ್ರಿಕೆಗಳನ್ನು ಓದಿ ಮುಗಿಸಬೇಕೆಂದು ಯೋಚಿಸಿದ್ದರು.

ಆದರೆ ಈಗ ತುರ್ತುಪ್ರಸಂಗ ಬಂದೊದಗಿದೆ ಎಂದು ಮನಗಂಡ ಆ ಪ್ರಾಧ್ಯಾಪಕರು ಈಗಾಗಲೆ ಪೌಲಾ ಡಿಕ್ಸನ್ ಅವರನ್ನು ವಾಂಗ್ ಅವರು ಪರೀಕ್ಷಿಸುತ್ತಿದ್ದ ವಿಮಾನದ ಹಿಂಭಾಗದತ್ತ ತೆರಳಿದರು. ಯುವವೈದ್ಯ ವಾಂಗ್ ಅವರು ಪಕ್ಕಕ್ಕೆ ಸರಿದು ನಿಂತು ಪ್ರಾಧ್ಯಾಪಕರಿಗೆ ದಾರಿ ನೀಡಿದರು.

ಬಗ್ಗಿ ನಡೆಯುವ ವ್ಯಾಲೇಸ್ ಅವರು ಮೆತ್ತಗೆ ಡಿಕ್ಸನ್ ಅವರ ಗಾಯಗೊಂಡು ತರಚಿದ ತೋಳಿನ ಮುಂಭಾಗವನ್ನು ಒತ್ತಿದರು. ಆ ಮಹಿಳೆ ಆಗ ಚೀರಿದಳು. ಆದರೆ ಆಕೆಯ ಮುಖ ನಿರ್ಮಲವಾಗಿತ್ತು ಮತ್ತು ಆಕೆಗೆ ಬೇರಾವುದೇ ಬೇನೆ, ರೋಗ ಏನೂ ಇರಲಿಲ್ಲ. ಆಕೆಯ ತೋಳಿನ ಮೂಳೆ ಮುರಿದಿದ್ದರೂ ಕೂಡ ಆಕೆ ವಿಮಾನ ಪ್ರಯಾಣವನ್ನು ಮುಂದುವರಿಸಬಹುದೆಂದು ವೈದ್ಯರು ನಿರ್ಣಯಿಸಿದರು.

ಅತ್ಯಂತ ಯಾತನಾದಾಯಕ ನೋವು

ರಾತ್ರಿ ೧೦-೩೦ರ ವೇಳೆಗೆ ೭೪೭ ವಿಮಾನವು ರನ್‌ವೇ ಮೇಲೆ ಉದ್ದಕ್ಕೂ ಜೋರಾಗಿ ಓಡಿ ರಾತ್ರಿಯ ಕತ್ತಲೆಯಲ್ಲಿ ಮೇಲಕ್ಕೇರಿ ಮುಂದೆ ಸಾಗಿತು. "ಆಸನದ ಬೆಲ್ಟುಗಳನ್ನು ಬಿಗಿಯಾಗಿ ಕಟ್ಟಿಕೊಳ್ಳಿರಿ" ಎಂಬ ಸಂಕೇತಾಕ್ಷರವನ್ನು ತಿರುಗಿಸಿಬಿಟ್ಟರು ಆಗ ವ್ಯಾಲೇಸ್ ವಿಮಾನದ ಮೆಡಿಕಲ್ ಕಿಟ್ ಅನ್ನು ತೆರೆದು ನೋಡಿದರು. ಆಗ ಅವರಿಗೆ ಅದರೊಳಗೆ ಒಂದು ದಬ್ಬೆಮೊಳೆ ಹಾಗೂ ಬ್ಯಾಂಡೇಜು ಕಾಣಿಸಿತು. ಅವರು ಮತ್ತು ವಾಂಗ್ ೫೩ನೆಯ ಸಾಲಿನತ್ತ ತೆರಳಿದರು. ವ್ಯಾಲೇಸ್ ಡಿಕ್ಸನ್ನಳ ಮೊಣಕೈ ಸುತ್ತಲೂ ಕಾಪುಕೊಟ್ಟರು ಮತ್ತು ವಾಂಗ್ ಆಕೆಯ ತೋಳಿಗೆ ಬ್ಯಾಂಡೇಜು ಕಟ್ಟಿದರು. "ಇದು ನಿಮ್ಮ ಕೈಗೆ ಆಸರೆ ನೀಡುತ್ತದೆ" ಎಂದು ಅವರು ಆಕೆಗೆ ಹೇಳಿದರು.

"ನೀವು ನನ್ನನ್ನು ಊನ ಮಾಡುತ್ತೀರಾ" ಎಂದು ಅವರಿಗೆ ಕೃತಜ್ಞತೆಯಿಂದ ವಂದಿಸುತ್ತ ಡಿಕ್ಸನ್ ಹೇಳಿದಳು.

ಹಾಂಗ್‌ಕಾಂಗ್ ವೇಳೆಯಲ್ಲಿ ಮಧ್ಯರಾತ್ರಿ ಕಳೆದುಹೋಯಿತು. ಆದರೂ ಡಿಕ್ಸನ್ ಇನ್ನೂ ಎಚ್ಚರವಾಗಿಯೇ ಇದ್ದಳು. ಆಕೆಯ ಗಾಯದ ಕೈ ಸ್ವಲ್ಪ ನೋಯುತ್ತಿತ್ತು. ಆದರೆ ಅವರು ವಿಮಾನದಲ್ಲಿ ಸಮುದ್ರ ಮಟ್ಟದಿಂದ ಎಷ್ಟೋ ಮೇಲೆ ಪಯಣಿಸುತ್ತಿದ್ದುದರಿಂದ ಆಕೆಯ ಪಾದಗಳು ಊದಿಕೊಂಡಿದ್ದುವು. ಆಕೆ ತನ್ನ ಬೂಟುಗಳನ್ನು ಬಿಚ್ಚಲು ಮುಂದಕ್ಕೆ ಬಾಗಿದಳು. ಆಕೆ ದೇಹವನ್ನು ತಿರುಗಿಸಿ ಕೈಗಳ ಹತ್ತಿರ ಬಾಗುತ್ತಿದ್ದಂತೆ ಆಕೆಗೆ ತನ್ನ ಪಕ್ಕೆಲುಬುಗಳ ಕೆಳಗೆ ಏನೋ ಚುಚ್ಚಿದಂತೆ ಅನ್ನಿಸಿತು. 'ಅಯ್ಯೋ ದೇವರೆ! ಎಂತಹ ನೋವಪ್ಪ!' ಎಂದು ಆಕೆ ತನ್ನ ಪಕ್ಕೆಯನ್ನು ಹಿಡಿದು ನರಳತೊಡಗಿದಳು.

"ಒಂದೆರಡು ಗಂಟೆಗಳ ಹಿಂದೆ ತಾನು ಚಿಕಿತ್ಸೆ ನೀಡಿದಂಥ ಪ್ರಯಾಣಿಕರಿಗೆ ಏನೋ ಆಗಿದೆ ಅವರನ್ನು ಸ್ವಲ್ಪ ನೋಡಿಕೊಳ್ಳಿ" ಎಂದು ವಿಮಾನದ ಅನುಚರರು ಆ್ಯಂಗಸ್ ವ್ಯಾಲೇಸ್ ಅವರನ್ನು ಕೋರಿದರು. ಆಕೆಯ ಸಮಸ್ಯೆಯೇನಾಗಿರಬಹುದು ಎಂದು ಅವರಿಂದ ಕಲ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. "ನಿಮಗೆ ಏನಾಗುತ್ತಿದೆ"ಯೆಂದು ಅವರು ಡಿಕ್ಸನ್ ಅವರನ್ನು ಕೇಳಿದರು.

"ನನಗೆ ಎದೆ ನೋಯುತ್ತಿದೆ" ಎಂದಳು. ಡಿಕ್ಸನ್, ಕೂಡಲೇ ವ್ಯಾಲೇಸ್ ಅವರು ಆಕೆಯ ಪಕ್ಕೆಲುಬುಗಳನ್ನು ತಮ್ಮ ಬೆರಳಿನಿಂದ ಒತ್ತಿ ಹಿಡಿದರು ಮತ್ತು "ಹೀಗೆಂದು ನೀವು ಆಗಲೇ ಏಕೆ ಹೇಳಲಿಲ್ಲ" ಎಂದು ಕೇಳಿದರು.

"ಆಗ ಮುಟ್ಟಿದರೆ ನೋಯುತ್ತಿರಲಿಲ್ಲ" ಎಂದು ಆಕೆ ಹೇಳಿದಳು.

"ಹಾಗಿದ್ದರೆ, ನಿಮ್ಮ ಕೆಲವು ಪಕ್ಕೆಲುಬುಗಳು ಬಿದ್ದ ರಭಸಕ್ಕೆ ಮುರಿದಿರಬೇಕು ಎಂದು ನನಗನ್ನಿಸುತ್ತದೆ" ಎಂದು ಕ್ಯಾಬಿನ್-ಸೇವಾ ನಿರ್ದೇಶಕರಾಗಿದ್ದ ಬರ್ಲೆಟನ್ ಅವರೆಡೆಗೆ ತಿರುಗಿ ಹೇಳಿದರು.

"ನಾವು ಅವಳಿಗೆ ನೋವು ಶಮನಕಾರಕ ಔಷಧಿಯನ್ನು ಕೊಡುತ್ತೇವೆ. ದಯವಿಟ್ಟು ಮೆಡಿಕಲ್ ಕಿಟ್ ಅನ್ನು ತೆರೆಯುತ್ತೀರಾ?" ಎಂದು ಹೇಳಿದರು.

ಆದರೆ ವ್ಯಾಲೇಸ್ ಸಿರಿಂಜ್‌ನೊಂದಿಗೆ ಹಿಂತಿರುಗುವಷ್ಟರಲ್ಲಿ, ಡಿಕ್ಸನ್ ಅವರ ಪರಿಸ್ಥಿತಿ ತುಂಬ ಕೆಟ್ಟಿತ್ತು. ಆಕೆಯ ಬಣ್ಣ ನೀಲಿಯಾಗತೊಡಗಿತ್ತು ಮತ್ತು ಆಕೆಯ ಉಸಿರಾಟ ಮಂದವಾಗಲಾರಂಭಿಸಿತ್ತು. ಮತ್ತೊಮ್ಮೆ ಕ್ಷಣದಲ್ಲಿ ತ್ವರಿತಗೊಳ್ಳತೊಡಗಿತ್ತು. ಅವರು ಸ್ಟೆತೋಸ್ಕೋಪಿನ ಸಹಾಯದಿಂದ ಆಕೆಯ ಹೃದಯದ ಬಡಿತವನ್ನು ಕೇಳಲು ಪ್ರಯತ್ನಿಸಿದರು. ಆದರೆ ವಿಮಾನದ ಎಂಜಿನ್ನುಗಳ ಭಯಂಕರ ಶಬ್ದದಿಂದ ಅವರಿಗೆ ಏನೂ ಕೇಳಿಸಲಿಲ್ಲ. ಹೀಗಾಗಿ ಅವರು ಆಕೆಯ ಕತ್ತಿನಲ್ಲಿ ಬೆರಳನ್ನೊತ್ತಿದರು ಮತ್ತು ತತ್‌ಕ್ಷಣ ಗಾಬರಿಗೊಂಡರು.

ಡಿಕ್ಸನ್ನಳ ಶ್ವಾಸನಾಳ – ಉಸಿರುಗೊಳವೆಯು ಬಲಗಡೆಗೆ ಸರಿದಿತ್ತು.–ಅದು ಹಾಗೆ ಸರಿಯಬಾರದು; ವ್ಯಾಲೇಸ್ ಮತ್ತೆ ಅಲ್ಲಿ ಬೆರಳೊತ್ತಿ ನೋಡಿದರು. ಸಂದೇಹವೇ ಉಳಿಯಲಿಲ್ಲ. ಅವಳ ಶ್ವಾಸನಾಳ ಬಲಗಡೆ ಸರಿದದ್ದು ಖಚಿತವಾಯಿತು.

ತತ್‌ಕ್ಷಣದ ನಿರ್ಧಾರ

ವಾಂಗ್ ಅವರನ್ನು ಎಬ್ಬಿಸಿ ಗ್ಯಾಲೀ ಕಡೆಗೆ ಬರಬೇಕೆಂದು ತಿಳಿಸಲಾಯಿತು. 'ಟಾಮ್, ಈ ಬಗ್ಗೆ ನನಗೆ ನಿಮ್ಮ ಅಭಿಪ್ರಾಯ ಬೇಕು' ಎಂದರು ವ್ಯಾಲೇಸ್. ಡಿಕ್ಸನ್‌ಳಿಗೆ ಉಸಿರಾಡಲು ತೊಂದರೆಯಾಗುತ್ತಿರುವುದನ್ನು ವ್ಯಾಲೇಸ್ ಖಚಿತಪಡಿಸಿಕೊಂಡರು. ಆಕೆಯ ಎಡ ಶ್ವಾಸಕೋಶಕ್ಕೆ ಪೆಟ್ಟಾಗಿದೆ ಎಂದು ವ್ಯಾಲೇಸ್ ಅವರಿಗೆ ಅನುಮಾನ ಬಂತು.

"ನನಗೆ ಕ್ಯಾಪ್ಟನ್ ಅವರ ಜೊತೆಯಲ್ಲಿ ಮಾತನಾಡಬೇಕಾಗಿದೆ" ಎಂದು ವ್ಯಾಲೇಸ್ ಹೇಳಿದರು. ಬಳಿಕ ಅವರು ಕಾಕ್‌ಪಿಟ್‌ನಲ್ಲಿ ಕ್ಯಾಪ್ಟನ್ ಬೆರ್ರಿ ಹಟ್ಟನ್ ಅವರ ಹಿಂದಿನ ಆಸನದ ಮೇಲೆ ಬಂದು ಕುಳಿತುಕೊಂಡರು ಮತ್ತು ಸಮಸ್ಯೆಯೇನೆಂದು ವಿವರಿಸಿದರು. "ಆಕೆಯ ಮುರಿದ ಪಕ್ಕೆಲುಬು ಬಹುಶಃ ಎಡಶ್ವಾಸಕೋಶಕ್ಕೆ ತೂತುಮಾಡಿರಬೇಕು. ಆದ್ದರಿಂದ ಆಕೆಗೆ ಕೂಡಲೇ ಶಸ್ತ್ರಚಿಕಿತ್ಸೆ ಮಾಡಬೇಕಾಗಿದೆ. ನಾವು ಎಷ್ಟು ಬೇಗ ವಿಮಾನವನ್ನು ನೆಲಮುಟ್ಟಿಸಬಹುದು" ಎಂದು ಅವರು ಕ್ಯಾಪ್ಟನ್ ಅವರನ್ನು ಕೇಳಿದರು.

"ನವದೆಹಲಿಯೇ ನಾವು ಇಳಿಯಬಹುದಾದ ಉತ್ತಮತಾಣವಾಗಿದೆ." "ನಾವು ಒಂದೂವರೆ ಗಂಟೆಯ ಅವಧಿಯೊಳಗಾಗಿ ಕೆಳಗೆ ಇಳಿಯುತ್ತೇವೆ" ಎಂದು ಅಟ್ಟನ್ ಅವರು ತಿಳಿಸಿದರು.

"ಅದನ್ನು ಮರೆತುಬಿಡಿ", ಅವಳು ಹೀಗೆ ಬಿಟ್ಟರೆ ಒಂದು ಗಂಟೆಯೊಳಗೆ ಸಾಯುತ್ತಾಳೆ ಎಂದು ಭಾವಿಸಿದ ವ್ಯಾಲೇಸ್ "ಈಗ ನಾನೇ ಏನಾದರೂ ಕ್ರಮ ಕೈಗೊಳ್ಳಬೇಕಾಗಿದೆ" ಎಂದರು.

ಡಿಕ್ಸನ್ ತನ್ನ ಹೃದಯಕುಹರದಲ್ಲಿಯ ಎಡಶ್ವಾಸಕೋಶದಲ್ಲಿ ಒಂದು ರಂಧ್ರದ

ಮೂಲಕ ಸೇರಿಕೊಂಡ ಸ್ವಲ್ಪ ಹೆಚ್ಚಿನ ಗಾಳಿಯನ್ನು ಹೊರಬಿಡುತ್ತಿದ್ದಳು. ಉಸಿರಿನ ಮೂಲಕ–ಅಲ್ಲಿ ನಿರ್ಮಾಣಗೊಳ್ಳುತ್ತಿದ್ದ ಗಾಳಿಗುಳ್ಳೆಯು ಆಕೆಯ ಹಾನಿಗೊಂಡ ಶ್ವಾಸಕೋಶವನ್ನು ಒತ್ತಿಕ್ಕುತ್ತ, ಅದರಲ್ಲಿನ ಒಳಗಾಳಿಯನ್ನು ಹೊರಡಿಸುತ್ತಿತ್ತು. ಆಕೆ ಉಸಿರಾಡಲು ಹೆಚ್ಚು ಹೆಚ್ಚಾಗಿ ಹೆಣಗಾಡತೊಡಗಿದಂತೆ ಗಾಳಿಗುಳ್ಳೆಯು ದೊಡ್ಡದಾಗುತ್ತ ಹೋಯಿತು. ಎಡಶ್ವಾಸಕೋಶವು ತನ್ನಲ್ಲಿನ ಗಾಳಿಯನ್ನೆಲ್ಲ ಪೂರ್ತಿಯಾಗಿ ಹೊರಬಿಟ್ಟಾಗ, ಎರಡನೆಯ ಶ್ವಾಸಕೋಶದಿಂದ ಗಾಳಿ ಹೊರಹೊಮ್ಮಲು ಆರಂಭವಾಗಬಹುದಿತ್ತು. ನೋವಿನಿಂದ ಏದುಸಿರು ಬಿಡುತ್ತಿದ್ದ ಡಿಕ್ಸನ್ ಇನ್ನು ೪೫ ನಿಮಿಷ ಮಾತ್ರ ಬದುಕಿ ಉಳಿಯಬಹುದು ಎಂದು ವ್ಯಾಲೇಸ್ ಅಂದಾಜು ಮಾಡಿದರು.

ಆಸ್ಪತ್ರೆಯಲ್ಲಾಗಿದ್ದರೆ ಈ ಸಮಸ್ಯಾ ಪರಿಹಾರ ಒಂದು ನಿತ್ಯಗಟ್ಟಳೆಯ ವಿಧಾನವಾಗಿತ್ತು; ಹೃದಯಕುಹರದೊಳಗೆ ಒಂದು ಟೊಳ್ಳಾದ ಸೂಜಿಯನ್ನು ಒಳಸೇರಿಸಿದ್ದರೆ, ಅದು ಗಾಳಿಗೆ ಹೊರಗೆ ಪಾರಾಗಲು ಅವಕಾಶ ನೀಡಬಹುದಿತ್ತು. ಇಲ್ಲಿ ಈಗ ವ್ಯಾಲೇಸ್ ಅವರು ಇದ್ದುದರಲ್ಲಿಯೇ ಹೇಗಾದರೂ ಕಾರ್ಯನಡೆಸಬೇಕಾಗಿತ್ತು. "ನನಗೆ ಯಾವುದಾದರೊಂದು ಬಗೆಯ ನಳಿಕೆ ಅಥವಾ ನಾಳ ಬೇಕಾಗಿದೆ", ನಮ್ಮ ಬಳಿಯಲ್ಲಿ ಅಂಥದ್ದೇನಾದರೂ ಇದೆಯೇ ? "ಎಂದು ವ್ಯಾಲೇಸ್ ಕ್ಯಾಬಿನ್ ಸಿಬ್ಬಂದಿಯವರನ್ನು ಕೇಳಿದರು. "ಪಾನೀಯ ಹೀರಿ ಕುಡಿಯುವಂಥ ಹುಲ್ಲು ಕೊಳವೆಯಿದೆ" ಎಂದು ಅವರು ಹೇಳಿದಾಗ ಅದು ತೀರ ದುರ್ಬಲವಾಯಿತೆಂದು ವ್ಯಾಲೇಸ್ ಭಾವಿಸಿದರು. ಆಗ ವಿಮಾನದ ಅನುಚರರು ಸುರಕ್ಷತಾ ಪ್ರದರ್ಶನದಲ್ಲಿ ಉಪಯೋಗಿಸುವಂತಹ ಆಕ್ಸಿಜನ್-ಮೊಗಕಾಪನ್ನು ತಂದರು. ಅದನ್ನು ಕಂಡ ವ್ಯಾಲೇಸ್ ಅವರ ಕಣ್ಣುಗಳು ಮಿನುಗಿದುವು ಮತ್ತು ಅವರು ಆಕೂಡಲೇ ಅದರ ಪ್ಲಾಸ್ಟಿಂಗ್ ಕೊಳವೆಯನ್ನು ಕತ್ತರಿಸಿಕೊಂಡರು.

ಮೆಡಿಕಲ್ ಕಿಟ್‌ನ ತಳಭಾಗದಲ್ಲಿ ಅವರಿಗೆ ಮೂತ್ರಕೋಶದೊಳಗೆ ಹೊಗಿಸಲಾಗುವಂತೆ ವಿನ್ಯಾಸಗೊಳಿಸಿದಂತಹ ಒಂದು ತೆಳ್ಳಗಿನ ನಳಿಕೆ ಸಲಕರಣೆಯು ಕಾಣಿಸಿತು. ಅದರ ಒಂದು ತುದಿಯು ಸೀಸೆಯ ತಳದಂತೆ ಮುಚ್ಚಿಕೊಂಡಿತ್ತು, ಆದರೆ ಅದರ ತುದಿಯ ಕೆಲವು ಸೆಂಟಿಮೀಟರ್ ಭಾಗದಲ್ಲಿ ಚಿಕ್ಕ ಪುಟ್ಟ ರಂಧ್ರಗಳಿದ್ದುವು ಅವು ದ್ರವವಸ್ತುವಿಗೆ ನಳಿಕೆಯನ್ನು ಪ್ರವೇಶಿಸಿ, ಅಲ್ಲಿಂದ ಹೊರಗೆ ಹರಿಯುವಂತೆ ಮಾಡುತ್ತಿತ್ತು ಹಾಗಿದ್ದರೆ ಇದು ಗಾಳಿಯನ್ನು ಕೂಡ ಹೀಗೆ ಹೀರಿಕೊಂಡು ಹೊರಸಾಗಿಸುವುದೆಂದು ವ್ಯಾಲೇಸ್ ಭಾವಿಸಿದರು. "ಇಷ್ಟು ಸಾಕು, ಇದರಿಂದ ಏನು ಬೇಕಾದರೂ ಮಾಡಬಹುದು ಆದರೆ ಒಂದೇ ತೊಂದರೆಯೇನೆಂದರೆ ಇದು ಅತಿಯಾಗಿ ತುಯ್ದಾಡುತ್ತಿದೆ ಎಂದು ಅವರು ತಿಳಿದರು. ನಳಿಕೆಯ ಒಳಗೆ ಹೋಗಬಹುದಾದ ಒಂದು ಗಟ್ಟಿವಸ್ತು ಬೇಕಾಗಿದೆ. ಆಗ ಮಾತ್ರ ನಾನು ಅದನ್ನು ಆಕೆಯ ಹೃದಯದೊಳಗೆ ತಳ್ಳಬಹುದು" ಎಂದು ವ್ಯಾಲೇಸ್ ಭಾವಿಸಿದರು.

ವಿಮಾನ ಸಿಬ್ಬಂದಿವರ್ಗದವರು ಒಂದು ತಂತಿಕೋಟು ಹ್ಯಾಂಗರ್ ಅನ್ನು ಕಂಡರು ವ್ಯಾಲೇಸ್ ಕೂಡಲೇ ಅದರ ಕೊಕ್ಕೆ ತುದಿ

ಯನ್ನು ನೇರ್ಪಡಿಸಿದರು ಕ್ಯಾಲೇಟರ್‌ನ ಎದುರಿಗಿಟ್ಟು ಅದರ ಅಳತೆ ತೆಗೆದರು. ಬಳಿಕ ಆ ತಂತಿಯನ್ನು ಹಿಂದಕ್ಕೂ ಮುಂದಕ್ಕೂ ಬಾಗಿಸಿದರು ಮತ್ತು ಅದನ್ನು ಆ ನಳಿಕೆ ಗಿಂತ ಸ್ವಲ್ಪ ಮೇಲೆ ಸುಮಾರು ೪೫ ಸೆಂ. ಮೀಟರ್ ಉದ್ದಕ್ಕೆ ಮುರಿದರು.

ಆ ತಂತಿಯಲ್ಲಿ ಕ್ರಿಮಿಗಳಿಲ್ಲದಂತೆ ಶುದ್ಧ ಗೊಳಿಸಬೇಕಾಗಿತ್ತು. ಯಾರೋ ಒಬ್ಬರು ಅದಕ್ಕಾಗಿ ಶೇ. ೪೦ ರಷ್ಟು ಮದ್ಯಸಾರ ಯುಕ್ತ ಫ್ರೆಂಚ್ ಬ್ರಾಂದಿಯ ಒಂದು ಸೀಸೆ ಯನ್ನು ಕೊಟ್ಟರು. ವ್ಯಾಲೇಸ್ ಕೃತಜ್ಞತೆ ಯಿಂದ ಕೂಡಲೇ ಅದನ್ನು ತೆಗೆದುಕೊಂಡು ಅದರಿಂದ ತಂತಿಯಲ್ಲಿ ಕ್ರಿಮಿಗಳಿರದಂತೆ ಶುದ್ಧೀಕರಿಸಿದರು. ಅನಂತರ ಅದನ್ನು ಒಂದು ಟ್ರೇನಲ್ಲಿರಿಸಿದರು. ಬಲೇಟಿನ್ ಅವರು ಅದಕ್ಕೆ ಬಿಳಿಬಟ್ಟೆ ಮುಚ್ಚಿದರು. ಬಳಿಕ ಅವರು ಆಮ್ಲಜನಕದ ಮೊಗಕಾಪಿ ನಿಂದ ಕತ್ತರಿಸಿ ತೆಗೆದ ನಳಿಕೆಯನ್ನು ಕ್ರಿಮಿ ಗಳ ಸೋಂಕಿಲ್ಲದಂತೆ ಸ್ವಚ್ಛಗೊಳಿಸಿದರು. ಕತ್ತರಿಯ ಮೇಲೆ ಫ್ರೆಂಚ್ ಬ್ರಾಂದಿಯನ್ನು ಚಿಮುಕಿಸಿ ಅವನ್ನು ಸಂಸ್ಕರಿಸಿದರು.

ಡಿಕ್ಸನ್ನಳ ಶ್ವಾಸಕೋಶದಿಂದ ಬಿಡುಗಡೆ ಯಾದ ಗಾಳಿಯನ್ನು ತಡೆಯಲು ಮತ್ತು ಅದು ಮತ್ತೊಮ್ಮೆ ಡಿಕ್ಸನ್ನಳ ಎದೆಯೊಳಗೆ ಹಿಂತಿರುಗಿ ನುಗ್ಗದಂತೆ ತಡೆಯಲು ಒಂದೇ ದ್ವಾರವುಳ್ಳ ಕವಾಟವೊಂದು ಬೇಕಿತ್ತು ಎಂಬುದು ವ್ಯಾಲೇಸರಿಗೆ ಗೊತ್ತಿತ್ತು. ಅವರು ಇವಿಯನ್ ಜಲಭರಿತವಾದ ಸೀಸೆ ಯೊಂದನ್ನು ತೆರೆದು ಅದರ ನೀಲಬಣ್ಣದ ಪ್ಲಾಸ್ಟಿಕ್ ಮುಚ್ಚಳದಲ್ಲಿ ಎರಡು ರಂಧ್ರ ಗಳನ್ನು ಕೊರೆದರು ಬಳಿಕ ಆ ಸೀಸೆಯಲ್ಲಿನ ಇವಿಯನ್ ಜಲದ ಅರ್ಧಪಾಲನ್ನು ತಾವು ಕುಡಿದರು, ಬಳಿಕ ಮುಚ್ಚಳವನ್ನು ಮತ್ತೆ ಅದಕ್ಕೆ ಮುಚ್ಚಿದರು. ಮತ್ತು ಒಂದು ರಂಧ್ರದ ಮೂಲಕ ಆಮ್ಲಜನಕದ ನಳಿಕೆಯ ತುಂಡೊಂದನ್ನು ಪೋಣಿಸಿದರು ಮತ್ತೊಂದು ರಂಧ್ರವನ್ನು ಹಾಗೆಯೇ ಬಿಟ್ಟರು" ಅದನ್ನು ಟ್ರೇಯಲ್ಲಿರಿಸುತ್ತ "ಇದು ಈಗ ನಮಗೆಬೇಕಾದ ಕವಾಟ" ಎಂದು ವ್ಯಾಲೇಸ್ ಹೇಳಿದರು.

ರಬ್ಬರಿನ ಕೈಚೀಲಗಳು, ಸ್ಕ್ಯಾಲ್ಪಲ್ ಸಣ್ಣ ಚೂರಿ, ಚೀರೊತ್ತಿಗೆ ಮತ್ತು ಹೊಲಿಗೆ ದಾರಗಳು ಮೆಡಿಕಲ್ ಕಿಟ್‌ನಲ್ಲಿದ್ದುವು. ಬರ್ಲೆಟಿನ್ ಅವರು ತಮ್ಮ ಕ್ಯಾಬಿನ್ ಚೀಲದಿಂದ ಸ್ಕಾಟ್ ಟೇಪಿನ ಒಂದು ಸುರುಳಿ ಯನ್ನು ಸಹ ನೀಡಿದಳು.

ಕೊನೆಯ ಒಂದು ತೊಂದರೆಯೆಂದರೆ ಸ್ಪರ್ಶಜ್ಞಾನವಿಲ್ಲದಂತೆ ಮಾಡುವುದು ಹೇಗೆ ಎನ್ನುವುದೇ ಆಗಿತ್ತು. ಅದೃಷ್ಟವಶಾತ್, ಹೃದಯ ಸ್ತಂಭನದಂತಹ ಸಂದರ್ಭ ಒದಗಿ ದರೆ ಅದರ ಶಕ್ತಿಶಾಲೀ ಅಪೂರ್ವ ಔಷಧ ವಾಗಿದ್ದ ಲಿಗ್ನೋಕೇಯ್ನ್ ಎಂಬ ಔಷಧವೂ ಅಲ್ಲಿ ಅವರಿಗೆ ಕಂಡುಬಂತು. ಅದನ್ನು ಯಾವುದೇ ಅಂಗಭಾಗಕ್ಕೆ ಸ್ಪರ್ಶಜ್ಞಾನ ವಿಲ್ಲದಂತೆ ಮಾಡಲು ಬಳಸಬಹುದಾಗಿತ್ತು ಎಂಬುದು ವ್ಯಾಲೇಸ್ ಅವರಿಗೂ ಗೊತ್ತಿತ್ತು.

ವ್ಯಾಲೇಸ್ ತನ್ನ ಕೈಗಡಿಯಾರವನ್ನು ನೋಡಿಕೊಂಡರು. ಅಮೂಲ್ಯವಾದ ಹದಿನೈದು ಮಿನಿಟುಗಳ ಅವಧಿ ಕಳೆದಿತ್ತು, ಇನ್ನೇನೂ ಹೆಚ್ಚಿನ ವೇಳೆ ಉಳಿದಿರಲಿಲ್ಲ. ವಿಮಾನದ ಪರಿಚಾರಕ ವರ್ಗದವರು ೫೩ನೆಯ ಸಾಲಿನ ಆಸನಗಳ ಸುತ್ತಲೂ ಪರದೆ ಹಾಗೂ ಬ್ಲಾಂಕೆಟ್ಟುಗಳನ್ನು ಇಳಿ

ಬಿಟ್ಟು ಶಸ್ತ್ರಚಿಕಿತ್ಸೆಗೆ ಅನುಕೂಲವಾಗುವಂತೆ ಒಂದು ಸ್ಥಳವನ್ನು ಸಿದ್ಧಪಡಿಸಿದರು, ಅಲ್ಲಿ ವಿದ್ಯುತ್ ದೀಪಗಳನ್ನು ಬೆಳಗಿಸಿದರು. ಡಿಕ್ಸನ್ ತನ್ನ ಆಸನದಲ್ಲಿ ಕುಳಿತಿದ್ದಳು, ನೋವಿನಿಂದ ನರಳುತ್ತಿದ್ದಳು. ಮುಖವೆಲ್ಲ ನೋವಿನಯಾತನೆಯಿಂದ ಬಳಲಿ ಬೆವರಿನಿಂದ ತೊಯ್ದು ಹೋಗಿತ್ತು, ಉಸಿರಾಟ ನಿಧಾನವಾಗತೊಡಗಿತ್ತು. ತಾನು ಎಲ್ಲೋ ಮುಳುಗುತ್ತಿದ್ದೇನೆ ಎಂದು ಆಕೆಗೆ ಅನ್ನಿಸತೊಡಗಿತು.

ಅಷ್ಟರಲ್ಲಿ ಡಾ|| ವ್ಯಾಲೇಸ್ ಡಿಕ್ಸನ್ನಳಿಗೆ, "ನಿಮ್ಮ ಶ್ವಾಸಕೋಶ ಕುಸಿಯತೊಡಗಿದೆ, ಅದಕ್ಕಾಗಿ ಶಸ್ತ್ರಕ್ರಿಯೆ ಮಾಡಲೇಬೇಕಾಗಿದೆ" ಎಂದು ತಿಳಿಸಿದರು ಮತ್ತು ಆಕೆಯಿಂದ ಯಾವುದೇ ಎದುರುತ್ತರಕ್ಕೆ ಅಸ್ಪದವನ್ನೇ ನೀಡದೆ, "ನೀವೇನೂ ಈಗ ಒಪ್ಪಿಗೆ ಕೊಡುವಂತಹ ಸ್ಥಿತಿಯಲ್ಲಿ ಇಲ್ಲ ಎಂದು ಹೇಳುತ್ತ ತಾನು ಈಗ ಶಸ್ತ್ರಚಿಕಿತ್ಸೆ ನಡೆಸುವುದಾಗಿ ಆಕೆಗೆ ತಿಳಿಸಿದರು.

ಆಗ ಡಿಕ್ಸನ್ ಒಮ್ಮೆ ವ್ಯಾಲೇಸ್ ಅವರನ್ನು ದೀರ್ಘವಾಗಿ ನೋಡಿದಳು. ದುರ್ಬಲಳಾಗಿದ್ದ ಆಕೆ ನಿಧಾನವಾಗಿ ನರಳುತ್ತ "ನೀವು ಏತಕ್ಕಾಗಿ, ಯಾರಿಗಾಗಿ ಕಾಯುವಿರಿ, ಏನಾದರೂ ಮಾಡುವುದಿದ್ದರೆ ಬೇಗ ಮಾಡಿ ಡಾಕ್ಟ್ರೇ ಎಂದು ನೋವಿನ ಯಾತನೆಯಿಂದ ನರಳುತ್ತ ಡಿಕ್ಸನ್ ಹೇಳಿದಳು.

ಆಗ ವ್ಯಾಲೇಸ್ ಎರಡು ಆಸನಗಳ ನಡುವೆ ನುಗ್ಗಿ ಕುಳಿತು ತನ್ನ ರೋಗಿಯನ್ನು ದಿಟ್ಟಿಸಿನೋಡಿದರು ಮತ್ತು ಮನಸ್ಸಿನಲ್ಲಿನ ಆತಂಕವನ್ನು ಪಕ್ಕಕ್ಕೆ ಸರಿಸಿದರು. ಡಿಕ್ಸನ್ನಳಿಗೆ ಶಸ್ತ್ರಕ್ರಿಯೆ ನಡೆಸುವಾಗ ಆಕೆಯ ಪಕ್ಕೆಲುಬಿನ ಕೆಳಗೆ ಇದ್ದಂತಹ ಯಾವುದೇ ರಕ್ತನಾಳಕ್ಕೆ ಒಂದಿಷ್ಟು ತೂತು ಆದರೂ ರಕ್ತಸ್ರಾವಗೊಂಡು ಡಿಕ್ಸನ್ ಕೆಲವೇ ಕ್ಷಣಗಳಲ್ಲಿ ಸಾಯಬಹುದಿತ್ತು. ಹಾಗೇನಾದರೂ ಆದಲ್ಲಿ ತಾನು ನರಹತ್ಯೆ ಮಾಡಿದೆನೆಂಬ ಅಪಾದನೆಗೆ ಒಳಗಾಗಬೇಕಾದೀತು ಎಂದು ವ್ಯಾಲೇಸ್ ಭಾವಿಸಿದರು. ಆದರೆ ಶಸ್ತ್ರಚಿಕಿತ್ಸೆ ನಡೆಸದಿದ್ದರಂತೂ ಆಕೆ ಖಂಡಿತವಾಗಿ ಸಾಯುವ ಭೀತಿಯಿತ್ತು ಎಂಬುದು ಡಾ|| ವ್ಯಾಲೇಸರಿಗೆ ಮನವಟ್ಟಾಗಿತ್ತು.

ವಿಷಮಾವಸ್ಥೆಯ ಕೆಲವು ಕ್ಷಣಗಳು

ಕ್ರಿಮಿಶುದ್ಧಗೊಳಿಸಿದ್ದ ಒಂದು ಕರವಸ್ತ್ರವನ್ನು ವ್ಯಾಲೇಸ್ ಆಕೆಯ ಎದೆಯ ಮೇಲಿರಿಸಿದ. ಬಳಿಕ ಶಸ್ತ್ರಚಿಕಿತ್ಸೆಯಲ್ಲಿ ಒರಸಲು ಉಪಯೋಗಿಸುವಂಥ ಬಟ್ಟೆಯೊಂದನ್ನು ಹರಿದರು. ಅನಂತರ ಆಕೆಗೆ ಗಾಯವಾದ ಭಾಗದಲ್ಲಿ ಸ್ಪರ್ಶಜ್ಞಾನವಿಲ್ಲದಂತೆ ಮಾಡಲು ಅರಿವಳಿಕೆ ಇಂಜೆಕ್ಷನ್ ಅನ್ನು ಚುಚ್ಚಿದರು. ಅದು ಆಕೆಯ ಎದೆಯ ದಪ್ಪ ಭಿತ್ತಿಯ ಅರ್ಧಭಾಗವನ್ನು ಮಾತ್ರ ಸ್ತಂಭೀಕರಿಸಬಹುದಿತ್ತು. ಆದರೆ ಅವರು ಅಂಥವೇಳೆಯಲ್ಲಿ ಅಷ್ಟು ಮಾತ್ರ ಮಾಡಬಹುದಿತ್ತು.

ಇಂಜೆಕ್ಷನ್ ಚುಚ್ಚಿದ ಭಾಗ ಎರಡನೆಯ ಹಾಗೂ ಮೂರನೆಯ ಪಕ್ಕೆಲುಬಿನ ನಡುವಣದ್ದಾಗಿತ್ತು. ವ್ಯಾಲೇಸ್ ವಕ್ರಾಕಾರದ ಹೊಲಿಗೆ–ಸೂಜಿಗೆ ದಾರ ಪೋಣಿಸಿದರು ಮತ್ತು ಅದನ್ನು ಚರ್ಮದ ಒಳ ಹೊರಗೆ ಬರುವಂತೆ ಥಟ್ಟನೆ ಚಿಮ್ಮಿಸಿದರು. ಅವರು ಪರ್ಸ್‌ದಾರದಂತೆ ಒಂದು ತೆರೆದ

ಕುಣಿಕೆದಾರವನ್ನು ಕಟ್ಟಿದರು. ಅನಂತರ ನಳಿಕೆಯು ಸುತ್ತಲೂ ಗಟ್ಟಿಯಾಗಿ ಎಳೆಯುಲು ಸಿದ್ಧವಾಗಿರುವಂತೆ ಮಾಡಲಾಯಿತು. ಅವರು ಬಳಿಕ ಸ್ಕಾಲ್‌ಪೆಲ್ ಚೂರಿಯಿಂದ ಅರ್ಧ ಸೆಂಟಿಮೀಟರಿನಷ್ಟು ಚಿಕ್ಕದಾದ ಗಾಯವನ್ನು ಮಾಡಿದರು ಅಲ್ಲಿಂದ ದ್ರವ ಅಥವಾ ಗಾಳಿ ಹೊರಟು ಹೋಗಬೇಕಾಗಿತ್ತು.

ಈಗ ವಿಷಯಗಳಿಗೆ ಸನ್ನಿಹಿತವಾಯಿತು. ವ್ಯಾಲೇಸ್ ಸ್ಕ್ರೂ ಡ್ರೈವರ್ ಅನ್ನು ಹಿಡಿಯುವಂತೆ ಶಸ್ತ್ರಚಿಕಿತ್ಸೆಯ ಕತ್ತರಿಯನ್ನು ಕೈಯಲ್ಲಿ ಹಿಡಿದುಕೊಂಡು ತನ್ನ ಬಲ ಮೊಣಕಾಲನ್ನು ಡಿಕ್ಸನಳ ಆಸನದ ಅಂಚಿನಲ್ಲಿ ಊರಿದರು. ಕತ್ತರಿ ಪ್ರಯೋಗ ಮಾಡುವಾಗ ಅದು ರಕ್ತನಾಳಕ್ಕೆ ತಾಗಬಹುದಾದ ಅವಕಾಶ ಶೇಕಡ ೧೦ ರಷ್ಟು ಮಾತ್ರ ಎಂದು ವ್ಯಾಲೇಸ್ ಲೆಕ್ಕ ಹಾಕಿದರು ಅವರ ಅಪಧಮನಿ ಭಿತ್ತಿ ತೀರ ಗಡುಸಾಗಿ ರಕ್ತನಾಳವನ್ನು ಸುತ್ತುವರಿದಿರುತ್ತಿತ್ತು. ಅವರು ಬಳಸಿದ್ದ ಕತ್ತರಿ ಅಷ್ಟೊಂದು ಹರಿತವಾಗಿರಲಿಲ್ಲ ಹೀಗಾಗಿ ಅದರಿಂದ ರಕ್ತನಾಳಕ್ಕೆ ಹಾನಿಯಾಗದಂತೆ ಪಕ್ಕಕ್ಕೆ ಸರಿಸಬಹುದೆಂದು ವ್ಯಾಲೇಸ್ ಭಾವಿಸಿದರು. ಕತ್ತರಿಯ ತುದಿಯನ್ನು ಗಾಯದಲ್ಲಿರಿಸಿ, ವ್ಯಾಲೇಸ್ ಅದನ್ನು ಕೆಳಗೆ ತಳ್ಳಿದರು.

ಸ್ಟೀಲ್ ಕತ್ತರಿಯು ಆಕೆಯ ಮಾಂಸಖಂಡ ಹಾಗೂ ಅಂಗಾಂಶದ ಮೂಲಕ ಆಕೆಯ ಎದೆಯವರೆಗೆ ಹೋದಾಗ ಆಕೆಗೆ ಸಲಾಕಿಯಿಂದ ಚುಚ್ಚಿದಂತೆ ಅನ್ನಿಸಿತು. ಇದರಿಂದ ಆಕೆ ನಡುಗಿದಳು. ಬಳಿಕ ವ್ಯಾಲೇಸ್ ಕತ್ತರಿಯ ಅಲುಗನ್ನು ೯೦ ಡಿಗ್ರಿ ತಿರುಗಿಸಿ ರಂಧ್ರವನ್ನು ಅಗಲಗೊಳಿಸಿದರು. ಕತ್ತರಿಯು ಎದೆಯ-ಕುಹರದಲ್ಲಿ ೫ ಸೆಂ. ಮೀಟರ್ ಗಾಯಮಾಡಿದಾಗ ಅದನ್ನು ಹೊರಗೆಳೆದರು. ವಾಂಗ್ ತಕ್ಷಣ ತಂತಿ-ಹುದುಗಿಸಿ ಭದ್ರಪಡಿಸಿದ್ದ ಕೆಲೇಟರ್ ಅನ್ನು ವ್ಯಾಲೇಸ್ ಅವರ ಕೈಗೆ ನೀಡಿದರು. ವ್ಯಾಲೇಸ್ ಕೂಡಲೇ ಆ ಕೆಲೇಟರ್ ಅನ್ನು ಎದೆಯಕುಹರದಲ್ಲಿ ಮಾಡಿದ್ದ ರಂಧ್ರದಲ್ಲಿರಿಸಿ ಅದನ್ನು ಕೆಳಗೆ ತಳ್ಳಿದರು.

ಆಗ ಡಿಕ್ಸನ್ ಜೋರಾಗಿ ನರಳಿದಳು. ತಾನು ಬದುಕಬೇಕೆಂದು ಇದನ್ನೆಲ್ಲ ಮಾಡುತ್ತಿದ್ದಾರೆ ಎಂದು ಆಕೆಗೆ ತಿಳಿದು ಸ್ವಲ್ಪ ಧೈರ್ಯ ಬಂತು, ಆಕೆಗೆ ಬೆಳೆದುನಿಂತ ಮೂವರು ಮಕ್ಕಳ ನೆನಪಾಯಿತು, ಗಾಲ್‌ಸ್ಪರ್ ಇದ್ದರು, "ಗಾಲ್‌ಸ್ಪರ್ ನಾನು ಬರುತ್ತೇನೆ, ನಿನ್ನಲ್ಲಿಗೆ ಬರುತ್ತೇನೆ" ಎಂದು ಡಿಕ್ಸನ್ ತಡೆತಡೆದುಹೇಳಿದಳು.

ಡಾ|| ವ್ಯಾಲೇಸ್ ಅವರು ಕೆಲೇಟರಿನಿಂದ ಕೋಟ್ ಹ್ಯಾಂಗರನ್ನು ಎಳೆದರು ಮತ್ತು ನಳಿಕೆಯನ್ನು ಆಕೆಯ ಎದೆಯಕುಹರದಲ್ಲಿ ಬಿಟ್ಟರು ಸ್ವಲ್ಪ ಧೈರ್ಯ ತೆಗೆದುಕೊಳ್ಳಿ ಡಿಕ್ಸನ್" ಎಂದು ಆಕೆಯಲ್ಲಿ ಧೈರ್ಯ ತುಂಬಿದರು. ವ್ಯಾಲೇಸ್ ಆಕೂಡಲೇ ಬೇಗಬೇಗನೆ ಕೆಲೇಟರ್ ಅನ್ನು ದಾರದಮೂಲಕ ಇವಿಯನ್ ಸೀಸೆಯೊಳಗೆ ಇಳಿಸಿದ್ದ ಆಮ್ಲಜನಕದ ನಳಿಕೆಗೆ ಜೋಡಿಸಿದರು. ಬಳಿಕ ಅವರು ಪರ್ಸ್ ಸ್ಟ್ರಿಂಗ್ ಹೊಲಿಗೆಯನ್ನು ಬಲವಾಗಿ ಎಳೆದರು ಮತ್ತು ರಂಧ್ರದಿಂದ ಗಾಳಿ ಆಚೆ ಈಚೆ ಹೋಗದಂತೆ ಕೆಲೇಟರ್‌ಗೆ ಎದುರಾಗಿ ಚರ್ಮವನ್ನು ಮುಚ್ಚಿದರು.

ಕೆಲವೇ ಕ್ಷಣಗಳಲ್ಲಿ "ನಿಮಗೆ ಗಾಳಿ-ಗುಳ್ಳೆಗಳು ಸಿಕ್ಕಿದುವಲ್ಲ! ನಿಮಗೆ ಅದೇ ತಾನೇ ಬೇಕಾಗಿದ್ದದ್ದು! ಎಂದು ಬರ್ಲೆಟನ್ ಡಾ|| ವ್ಯಾಲೇಸ್ ಅವರನ್ನು ಕೂಗಿ ಕೇಳಿದರು. ನೀರಿನಲ್ಲಿಟ್ಟ ನಳಿಕೆಯ ತುದಿಯಿಂದ

ಪುಂಖಾನುಪುಂಖವಾಗಿ ಗಾಳಿಗುಳ್ಳೆಗಳು ಹೊರ ಹೊಮ್ಮ ತೊಡಗಿದುವು.

ನನಗೆ ಬೇಕಾಗಿದ್ದುದು ಅದೇನೇ ಎಂದು ವ್ಯಾಲೇಸ್ ಉತ್ತರಿಸಿದರು. ವಾಂಗ್ ಅವರತ್ತ ನೋಡುತ್ತ, ನೀರಿನಲ್ಲಿ ರಕ್ತವೇನಾದರೂ ಇದೆಯೇ? ಎಂದು ವ್ಯಾಲೇಸ್ ವಾಂಗ್ ಅವರನ್ನು ಕೇಳಿದರು.

“ಇಲ್ಲ, ಒಂದು ತೊಟ್ಟೂ ರಕ್ತವಿಲ್ಲ” ಎಂದು ವಾಂಗ್ ಉತ್ತರಿಸಿದರು.

“ಶಾಭಾಷ್ ಪ್ರೊಫೆಸರ್! ಚೆನ್ನಾಗಿ ಮಾಡಿದಿರಿ! ವಾಹ್ ನಿಮ್ಮ ಕೈಚಳಕವೇ!” ಎಂದು ವಾಂಗ್ ನಗುನಗುತ್ತ ಹೇಳಿದರು.

ಡಾ॥ ವ್ಯಾಲೇಸ್ ಅವರು ಅತ್ಯಂತ ಚಾಕಚಕ್ಯತೆಯೊಂದಿಗೆ ನಳಿಕೆಯ ಸುತ್ತಲೂ ಮತ್ತೊಂದು ಹೊಲಿಗೆ ಹಾಕಿದರು. ಅದು ಡಿಕ್ಸನ್ನಳ ಎದೆಯಲ್ಲಿ ಗಟ್ಟಿಯಾಗಿ ಊರುವಂತೆ ಮಾಡಿದರು. ಎರಡು ನಳಿಕೆಗಳು ಸೇರುವೆಡೆಯಲ್ಲಿ ಸ್ಕಾಚ್ ಟೇಪ್ ನಿಂದ ಮುಚ್ಚಿದರು. ಅಂತಿಮವಾಗಿ ಅವರು ತಮ್ಮ ರೋಗಿಯ ಮುಖವನ್ನು ವೀಕ್ಷಿಸಿದರು. ಮುಖದಲ್ಲಿ ಮತ್ತೆ ಕಳೆಮೂಡುತ್ತಿತ್ತು. ನಿಸ್ತೇಜಗೊಂಡ ಆ ಮುಖದಲ್ಲಿ ವೈದ್ಯರ ಮುಖಕಂಡಾಗ ಕಿರುನಗೆ ಮೂಡಿತು.

ಬರ್ಲೆಟಿನ್ ಅವರು ನುರಿತವಾದಿಯಂತೆ ಡಾ॥ ವ್ಯಾಲೇಸನ ಹಣೆಯನ್ನು ಒರಸಿದರು. ಆಕೆಯ ನಗುವಿನೊಂದಿಗೆ ವೈದ್ಯರು ತಾವೂ ನಗುತ್ತ ಡಿಕ್ಸನ್ನಳ ಸ್ಥಿತಿ ಇನ್ನು ಸುರಕ್ಷಿತವಾಗಿದೆ ಎಂಬುದನ್ನು ಖಚಿತಪಡಿಸಿಕೊಂಡ ಅನಂತರ ಅವರು ಪ್ರಯಾಣಿಕರನ್ನು ಹಾದು ಹೋದರು.

ಅಷ್ಟರಲ್ಲಿ ೭೪೭ ವಿಮಾನವು ಭಾರತದ ಮೇಲೆ ೮೫೦೦ ಮೀಟರ್ ಎತ್ತರದಲ್ಲಿ ನಭೋಚುಂಬಿಯಾಗಿ ಮುಂದುವರಿಯುತ್ತಿತ್ತು.

ಗ್ಯಾಲೀಯನ್ನು ತಲುಪಿದೊಡನೆ ವ್ಯಾಲೇಸ್ ಉಪಕರಣವನ್ನು ಕ್ರಿಮಿಶುದ್ಧಗೊಳಿಸಲು ಬಳಸಿದ್ದ ಕಾಗ್ನೇಕ್ ಅನ್ನು ಪತ್ತೆ ಮಾಡಿದರು. ತನ್ನ ಗುರುತರವಾದ ಹೊಣೆಗಾರಿಕೆಯನ್ನು ಸಫಲತೆಯಿಂದ ಪೂರೈಸಿ ಆ ಕೆಲಸದಲ್ಲಿ ನಿತ್ರಾಣಗೊಂಡಿದ್ದ ವ್ಯಾಲೇಸ್ ಕಾಗ್ನೇಕ್ ಸೀಸೆಯನ್ನು ಎತ್ತಿ ಒಂದೇ ಗುಟುಕಿನಲ್ಲಿ ಕುಡಿದುಬಿಟ್ಟರು.

ಲಂಡನ್ನಿನ ಹೀತ್ರೂ ವಿಮಾನ ನಿಲ್ದಾಣದಲ್ಲಿ ಇಳಿಯುವ ಮೊದಲು ಡಾ॥ ವ್ಯಾಲೇಸ್ ಅಂತಿಮಬಾರಿಗೆ ಡಿಕ್ಸನ್ನಳ ಪರೀಕ್ಷೆ ಮಾಡಿದರು. ಆಕೆ ಪ್ರಸನ್ನಚಿತ್ತಳಾಗಿರುವುದನ್ನು ಕಂಡು ಅವರಿಗೆ ಸಮಾಧಾನವಾಯಿತು.

“ಡಾಕ್ಟರ್, ನಿಮಗೆ ಕೃತಜ್ಞತಾಪೂರ್ವಕ ವಂದನೆಗಳು” ಎಂದು ಹೇಳುತ್ತ ಡಿಕ್ಸನ್ ಕೃತಜ್ಞತೆಯ ಕುರುಹಾಗಿ ಅವರ ಕೆನ್ನೆಗೆ ಮುತ್ತನ್ನು ಒತ್ತಿದಳು. ಬಳಿಕ ಅವರು ವಾಂಗ್ ಅವರ ಕೈಕುಲುಕಿದರು. ಅವರೆ ತಮ್ಮ ವೈದ್ಯ ಚರಿತ್ರೆಯ ಬಗ್ಗೆ ಮಾತನಾಡಲಿಲ್ಲ. “ಹಾರುವ ವಿಮಾನದಲ್ಲಿ ಶಿಥಿಲಗೊಂಡ ಶ್ವಾಸಕೋಶದ ಶಸ್ತ್ರಚಿಕಿತ್ಸೆ ನಡೆಸಿದುದು ವೈದ್ಯಕೀಯ ಇತಿಹಾಸದಲ್ಲಿಯೆ ಮೊದಲನೆಯದಾಗಿತ್ತು.”

ಎರಡು ವಾರಗಳು ಕಳೆದುವು. ಸಂಪೂರ್ಣ ಗುಣಮುಖಳಾದ ಪೌಲಾ ಡಿಕ್ಸನ್ ಹಾಂಗ್‌ಕಾಂಗ್‌ನಲ್ಲಿದ್ದ ಥಾಮಸ್ ಗಾಲ್‌ಸ್ಟರ್ ಅವರ ಬಳಿಗೆ ವಿಮಾನದಲ್ಲಿ ತೆರಳಿದಳು. ಆಕೆ ಹಾಂಗ್‌ಕಾಂಗ್‌ಗೆ ಬಂದಿಳಿದ ಕೂಡಲೇ ಗಾಲ್‌ಸ್ಟರ್ ಡಿಕ್ಸನ್ನಳ ಕೈಬೆರಳಿಗೆ ಮದುವೆ ನಿಶ್ಚಿತಾರ್ಥದ ಉಂಗುರವನ್ನು ತೊಡಿಸಿದನು.

ಪ್ರಾಣಿಗಳಲ್ಲಿ ವಾಸಸ್ಥಾನದ ಸಾರ್ವಭೌಮತ್ವ

ಸಾತನೂರು ದೇವರಾಜ್

ಪ್ರಾಣಿಗಳು ಬದುಕಿನ ಎರಡು ಮಜಲುಗಳಲ್ಲಿ ಯಶಸ್ಸನ್ನು ಪಡೆದಿವೆ. ಮೊದಲನೆಯದಾಗಿ ಮಾನವನಂತೆ ಪ್ರಾಣಿಗಳು ಸಮಾಜ ಜೀವನವನ್ನು ನಡೆಸಬಲ್ಲವಾದರೆ, ಎರಡನೆಯದಾಗಿ ಸಂತಾನೋತ್ಪತ್ತಿ, ಮರಿಗಳ ಲಾಲನೆ ಪಾಲನೆಗಾಗಿ ನಿರ್ದಿಷ್ಟ ಸ್ಥಳವನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡು, ಆ ಸ್ಥಳದೊಳಕ್ಕೆ ಬೇರೆ ಪ್ರಾಣಿಗಳು ಅತಿಕ್ರಮಿಸಿ ಪ್ರವೇಶಿಸದಂತೆ ಕಾಯ್ದುಕೊಳ್ಳುವ ವಿಶಿಷ್ಟ ಪ್ರವೃತ್ತಿಯನ್ನು ಪ್ರಾಣಿಗಳಲ್ಲಿ ಕಾಣಬಹುದಾಗಿದೆ.

ಒಂದು ಗುಂಪಿಗೆ ಸೇರಿದ ಪ್ರಾಣಿಗಳು ಬೇರೆ ಗುಂಪಿಗೆ ಸೇರಿದ ಪ್ರಾಣಿಗಳ ಸ್ಥಳದೊಳಕ್ಕೆ ಪ್ರವೇಶಿಸಿದಾಗ ಗೌರವದಿಂದ ವರ್ತಿಸುತ್ತವೆ. ಆದಷ್ಟು ಬೇಗ ಆ ಜಾಗವನ್ನು ಖಾಲಿ ಮಾಡುತ್ತವೆ. ಬೇರೆ ಪ್ರಾಣಿಗಳಿಗೆ ಸೇರಿದ ಸ್ಥಳದೊಳಕ್ಕೆ ಅತಿಕ್ರಮಿಸಿ ಪ್ರವೇಶಿಸಿದರೆ ಭೂಮಿಯ ಮಾಲೀಕರೊಡನೆ ಜಗಳವಾಡಲು ಆಹ್ವಾನವಿತ್ತಂತೆ. ಇಂಥ ಸಂದರ್ಭಗಳಲ್ಲಿ ಅತಿಕ್ರಮಿಸಿ ಪ್ರವೇಶ ಮಾಡಿದ ಪ್ರಾಣಿಯನ್ನು ಭೂಮಿಯ ಮಾಲೀಕ ತನ್ನ ಸ್ಥಳದಿಂದ ಹೊರ ಹಾಕುವುದರಲ್ಲಿ ಜಯಶೀಲವಾಗುತ್ತದೆ. ಅತಿಕ್ರಮಿಸಿ ಪ್ರವೇಶಿಸಿದ ಅಪರಿಚಿತ ಪ್ರಾಣಿಗೆ ಪ್ರಾರಂಭದಲ್ಲಿ ಅಲ್ಲಿಯ ಮಾಲೀಕ ಪ್ರಾಣಿ ಎಚ್ಚರಿಕೆ ಕೊಡುತ್ತದೆ. ಈ ಎಚ್ಚರಿಕೆಯನ್ನು ಧಿಕ್ಕರಿಸಿ ಭೂಮಿಯನ್ನು ಅಲಕ್ಷಿಸಿ ಪ್ರವೇಶಿಸಿದ್ದೇ ಆದರೆ ಹೋರಾಟ ಪ್ರಾರಂಭವಾಗುತ್ತದೆ. ಮಾಲೀಕ ಮತ್ತು ಅತಿಕ್ರಮ ಪ್ರವೇಶಿಗಳು ಎರಡೂ ಸಮಾನ ಬಲಶಾಲಿಗಳಾಗಿರುವುದು ಅಪರೂಪ.

ಪ್ರಾಣಿಗಳು ತಮಗೆ ಸೇರಿದ ನೆಲದ ಸುತ್ತ ಗೋಡೆ ಇಲ್ಲವೇ ಮುಳ್ಳು ತಂತಿಯ ಬೇಲಿಯನ್ನು ನಿರ್ಮಿಸಿಕೊಳ್ಳಲಾರವು. ಅವು ತಮಗೆ ಸೇರಿದ ಸ್ಥಳವನ್ನು ರಕ್ಷಿಸಿಕೊಳ್ಳುವುದಕ್ಕೆ ಉಪಯೋಗಿಸಿಕೊಳ್ಳುವ ತಂತ್ರಗಳು ಹಲವಾರು. ತಮ್ಮ ದೇಹದಿಂದ ಹೊರಸೂಸುವ ಬೆವರು, ಮೂತ್ರ ಮತ್ತು ವಿಶಿಷ್ಟ ಗ್ರಂಥಿಗಳು ಸ್ರವಿಸುವ ರಾಸಾಯನಿಕ ವಸ್ತುಗಳು, ವಿವಿಧ ರೀತಿಯ ಶಬ್ದವನ್ನು ಹೊರಡಿಸುವಿಕೆಯಿಂದ ತಮ್ಮ ಅಧೀನಕ್ಕೆ ಸೇರಿದ ಸ್ಥಳವನ್ನು ರಕ್ಷಿಸಿಕೊಳ್ಳುತ್ತವೆ. ರಾಸಾಯನಿಕ ವಸ್ತು ಇಲ್ಲವೇ ಶಬ್ದವು ವಿಶಿಷ್ಟ ಸ್ಥಳದೊಳಕ್ಕೆ ಅತಿಕ್ರಮಿಸಿ ಪ್ರವೇಶಿಸುವ ಪ್ರಾಣಿಗಳಿಗೆ ಎಚ್ಚರಿಕೆಯ ಕರೆಗಳಾಗಿ ಪರಿಣಮಿಸುತ್ತವೆ. ಈ ಕರೆಗಳು ಸ್ಥಳವನ್ನು ಈಗಾಗಲೇ ಬೇರೆ ಪ್ರಾಣಿಗಳ ಸಾರ್ವಭೌಮತ್ವಕ್ಕೆ ಒಳಪಟ್ಟಿರುವ ಸ್ಥಳವೆಂತಲೂ, ಇದರಿಂದಾಗಿ ಬೇರೆ ಯಾವ

ಪ್ರಾಣಿಗಳೂ ಪ್ರವೇಶಿಸಬಾರದೆಂತಲೂ; ಹಾಗೇನಾದರೂ ಅತಿಕ್ರಮಿಸಿ ಪ್ರವೇಶಿಸಿದರೆ ಈ ಸ್ಥಳದ ಮಾಲೀಕ ಕೊಡುವ ಶಿಕ್ಷೆಯನ್ನು ಅನುಭವಿಸುವುದಕ್ಕೆ ಸಿದ್ಧನಾಗಿರಬೇಕೆಂದೂ ಸೂಚಿಸುತ್ತವೆ. ಪ್ರಾಣಿ ಪ್ರಪಂಚದ ಎಲ್ಲ ಬಗೆಯ ಪ್ರಾಣಿಗಳೂ ಒಂದೇ ವಿಧದ ಎಚ್ಚರಿಕೆ ಕೊಡುವುದಿಲ್ಲ. ಇವುಗಳ ಜೀವನ ಕ್ರಮದ ಆಧಾರದ ಮೇಲೆ ತಮ್ಮದೇ ಆದ ವಿಶಿಷ್ಟತೆಯಿಂದ ಕೂಡಿರುವ ಎಚ್ಚರಿಕೆಯನ್ನು ಕೊಡುತ್ತವೆ.

ಪಕ್ಷಿಗಳಲ್ಲಿ ಬಹುತೇಕ ಗಂಡು ಪಕ್ಷಿಗಳು ಆಕರ್ಷಕವಾಗಿ ಹಾಡುತ್ತವೆ. ಈ ವಿಶಿಷ್ಟ ಹಾಡಿನ ಉದ್ದೇಶ ಸಂತಾನಾಭಿವೃದ್ಧಿಗೋಸ್ಕರ ಸಂಗಾತಿಯನ್ನು ಕರೆಯುವುದು ಮಾತ್ರವೇ ಅಲ್ಲ. ಇತರ ಅರ್ಥಗಳೂ ಇರುವುವು. ಸ್ವಂತ ನೆಲೆಯ ಹಕ್ಕು ಸ್ಥಾಪನೆ ಪ್ರಮುಖವಾದದ್ದು. ಈ ಸ್ಥಳ ನನ್ನದೆಂದು, ಮತ್ತೆ ಬೇರೆ ಯಾರೂ ಈ ಸ್ಥಳದೊಳಕ್ಕೆ ಪ್ರವೇಶ ಮಾಡಬಾರದೆಂದು ಕೊಡುವ ಎಚ್ಚರಿಕೆ ಇದಾಗಿದೆ. ಇದರಿಂದಾಗಿ ಪಕ್ಷಿಗಳು ಹಾಡುವ ಹಾಡುಗಳು ತಮ್ಮ ಸಾರ್ವಭೌಮತ್ವಕ್ಕೆ ಒಳಪಟ್ಟಿರುವ ಸ್ಥಳವನ್ನು ತಮ್ಮ ಗುಂಪಿಗೆ ಸೇರಿದ ಇತರ ಪಕ್ಷಿಗಳಿಂದ ರಕ್ಷಿಸಿಕೊಳ್ಳುವುದಕ್ಕೆ ಸಹಾಯ ಮಾಡುತ್ತವೆ. ಈ ಬಗೆಯ ಎಚ್ಚರಿಕೆಯ ಕರೆಯನ್ನು ಧಿಕ್ಕರಿಸಿಯೂ ಸ್ಥಳದೊಳಕ್ಕೆ ಪ್ರವೇಶಿಸಿದರೆ ಜಗಳ ಪ್ರಾರಂಭವಾಗುತ್ತದೆ. ಜಗಳದಲ್ಲಿ ಬಲಿಷ್ಠ ಪಕ್ಷಿ ಜಯ ಗಳಿಸಿದರೆ ಸೋತ ಪಕ್ಷಿ ಮರೆಯಾಗುತ್ತದೆ.

ಹಾಡುವುದರ ಜೊತೆಗೆ ವಿವಿಧ ರೀತಿಯ ಶಬ್ದ ಮಾಡುವಿಕೆಯ ಪ್ರಕ್ರಿಯೆ ಸಹ ಸ್ಥಳದ ಸಾರ್ವಭೌಮತ್ವವನ್ನು ರಕ್ಷಿಸಿಕೊಳ್ಳುವುದಕ್ಕೆ ನೆರವಾಗುತ್ತದೆ. ಮೈಮೇಲೆಲ್ಲ ಚುಕ್ಕೆಗಳಿರುವ ಮರಕುಟಿಕ ಪಕ್ಷಿ (ಡೆಂಡ್ರೋಕೋಪಸ್) ಮರದ ರೆಂಬೆಯ ಮೇಲೆ ಕೊಕ್ಕನ್ನು ಉಜ್ಜುವಿಕೆಯ ಮೂಲಕ ಸ್ಥಳದ ಸಾರ್ವಭೌಮತ್ವವನ್ನು ಕಾಯ್ದುಕೊಂಡು ಬರುತ್ತದೆ. ಗೆಲಿಂಗೋ ಗೆಲಿಂಗೋ ಪಕ್ಷಿ ನೀರಿನಲ್ಲಿ ಮುಳುಗಿ ಮತ್ತೆ ಏಳುವುದರ ಮುಖಾಂತರ ಸ್ಥಳದ ಮಾಲೀಕತ್ವವನ್ನು ಇತರ ಪ್ರಾಣಿಗಳಿಗೆ ಜಗಜ್ಜಾಹೀರುಗೊಳಿಸುತ್ತವೆ. ಬ್ರೀವರ್ ಸ್ತನಿಯಂತೂ ತನ್ನ ಬಾಲವನ್ನು ನೀರಿನ ಮೇಲ್ಮೈ ಆವರಣಕ್ಕೆ ಬಡಿದು ಶಬ್ದವನ್ನು ಉತ್ಪತ್ತಿ ಮಾಡುವುದರ ಮೂಲಕ ಸ್ಥಳದ ಮಾಲೀಕತ್ವವನ್ನು ಇತರ ಪ್ರಾಣಿಗಳಿಗೆ ಸೂಚಿಸುವ ಮುಖಾಂತರ ತನ್ನ ಸ್ಥಳವನ್ನು ರಕ್ಷಿಸಿಕೊಳ್ಳುತ್ತದೆ. ನೈಲಾ ಮೊಸಳೆಯು ತನ್ನ ತಲೆಯನ್ನು ನೀರಿನ ಆವರಣಕ್ಕೆ ಬಡಿದು ತನ್ನ ಇರುವಿಕೆಯನ್ನು ಪ್ರದರ್ಶಿಸುತ್ತದೆ.

ಕೆಲವು ಮಂಗಗಳು ಆಕರ್ಷಕವಾಗಿ ಹಾಗೂ ಮನೋಹರವಾಗಿ ಸದ್ದು ಮಾಡುತ್ತವೆ. ಇನ್ನೂ ಕೆಲವು ಮಂಗಗಳು ವಿಚಿತ್ರವಾಗಿ, ಕರ್ಕಶವಾಗಿ ಕಿರುಚಿಕೊಳ್ಳುತ್ತವೆ. ಹವಲ್ದಾರ್ ಮಂಗಗಳಲ್ಲಿ ನಾಲಿಗೆಯ ಹತ್ತಿರವಿರುವ ಮೂಳೆಗಳು ಶಬ್ದ ಉತ್ಪತ್ತಿ ಮಾಡುವ ಅಂಗವಾಗಿ ಮಾರ್ಪಾಡಾಗಿದೆ. ಈ ಅಂಗದ ಸಹಾಯದಿಂದ ಜೋರಾಗಿ ಕೂಗಬಲ್ಲವು. ಸಂಸಾರದ ಹಿರಿಯ ಮಂಗಗಳು ಮಧುರವಾಗಿ ಹಾಡುವುದರ ಮುಖಾಂತರ ತಮ್ಮ ಇರುವಿಕೆಯನ್ನು ಪ್ರದರ್ಶಿಸುತ್ತವೆ. ಗಿಬ್ಬನ್ ಮಂಗಗಳು ಉತ್ಪತ್ತಿ ಮಾಡುವ ಶಬ್ದ ಕೇಳುವುದಕ್ಕೆ ಇಂಪಾಗಿರುತ್ತದೆ.

ಬೇಸಿಗೆಯ ಸಂಜೆಯಲ್ಲಿ ಗಂಡು ಕಪ್ಪೆಗಳ ಟ್ರೊಂಯ್‌ನಾದ ಆಲಿಸುವದೊಂದು ವಿಶೇಷ ಅನುಭವ. ಅದರಲ್ಲಿಯೂ ಗುಂಪು ಗುಂಪಾಗಿ ಗಂಡು ಕಪ್ಪೆಗಳು ಉಂಟುಮಾಡುವ ಶಬ್ದವಂತೂ ಅತಿ ವಿಶಿಷ್ಟವಾದುದು. ಗಂಡು ಕಪ್ಪೆಗಳು ತಮ್ಮ ಗಂಟಲಿನಲ್ಲಿರುವ ಚೀಲದ ಸಹಾಯದಿಂದ ಶಬ್ದವನ್ನುಂಟು ಮಾಡುತ್ತವೆ. ಈ ಶಬ್ದವು ತಾವು ವಾಸಿಸುವ ಸ್ಥಳವನ್ನು ರಕ್ಷಣೆ ಮಾಡುತ್ತದೆ. ಅಲ್ಲದೆ ಹೆಣ್ಣು ಕಪ್ಪೆಗಳು ಸಂತಾನಾಭಿವೃದ್ಧಿಯ ಪ್ರಕ್ರಿಯೆಗೆ ಒಂದು ಕಡೆ ಸೇರುವುದಕ್ಕೆ ನೆರವಾಗುತ್ತದೆ.

ಡ್ರಾಗನ್ ಮತ್ತು ಡ್ಯಾಮಸೆಲ್ ಕೀಟಗಳು ಉದರದ ಕೆಳಭಾಗದಲ್ಲಿ ಬಣ್ಣವನ್ನು ಬದಲಾವಣೆ ಮಾಡುವಿಕೆಯಿಂದ ಸ್ಥಳದ ಸಾರ್ವಭೌಮತ್ವವನ್ನು ಕಾಪಾಡಿಕೊಳ್ಳುತ್ತವೆ. ವಾಸನೆಯ ಗ್ರಹಿಕೆ ಅಂತೂ ಕೀಟಗಳ ಜೀವನ ಕ್ರಮದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದೆ. ನಡವಳಿಕೆ, ಸಮಾಜ ಜೀವನ, ಸ್ಥಳದ ಸಾರ್ವಭೌಮತ್ವ ರಕ್ಷಣೆಗಳಲ್ಲಿ ವಾಸನೆಯ ಗ್ರಹಿಕೆಯನ್ನು ಅವಲಂಬಿಸಿದೆ. ಕೀಟಗಳ ದೇಹದಲ್ಲಿ ಉತ್ಪತ್ತಿಯಾಗುವ ರಾಸಾಯನಿಕ ವಸ್ತುಗಳಲ್ಲಿ ಫೆರಮೋನ್ ಒಂದು ಪ್ರಮುಖವಾದದ್ದು. ಈ ವಸ್ತು ಎಚ್ಚರಿಕೆ ಕೊಡುವುದಲ್ಲದೆ ಪ್ರಾಣಿಗಳು ಇರುವಿಕೆಯನ್ನು ಸೂಚಿಸುತ್ತದೆ. ಈ ರಾಸಾಯನಿಕ ವಸ್ತು ತಮ್ಮ ಗುಂಪಿಗೆ ಸೇರಿದ ಪ್ರಾಣಿಗಳ ಬಗ್ಗೆ ವಿವಿಧ ಅಂಶಗಳನ್ನು ಮನವರಿಕೆ ಮಾಡಿಕೊಡುವುದಕ್ಕೆ ನೆರವಾಗುತ್ತದೆ. ಹೀಗೆ ಪ್ರಾಣಿಯ ದೇಹದಿಂದ ಉತ್ಪತ್ತಿಯಾಗುವ ಫೆರಮೋನ್ ರಾಸಾಯನಿಕ ವಸ್ತು ಸ್ಥಳದ ಸಾರ್ವಭೌಮತ್ವವನ್ನು ರಕ್ಷಿಸಿಕೊಳ್ಳುವುದಕ್ಕೆ ನೆರವಾಗುತ್ತದೆ.

ಬಣ್ಣವಿಲ್ಲದಿರುವ ಪ್ರಾಣಿಗಳು ತಮ್ಮ ಇರುವಿಕೆಯನ್ನು ಪ್ರದರ್ಶಿಸಿಕೊಳ್ಳುವುದಕ್ಕೆ ಬೇರೆ ಕ್ರಮವನ್ನು ಅವಲಂಬಿಸಿಕೊಂಡಿವೆ. ಜಿಂಕೆ ಮತ್ತು ಕಾಡೆಮ್ಮೆಗಳು ಎತ್ತರದ ಸ್ಥಳದಲ್ಲಿ ನಿಂತುಕೊಂಡು ತಮ್ಮ ಇರುವಿಕೆಯನ್ನು ಪ್ರದರ್ಶಿಸುತ್ತವೆ. ಗಾಳಿಯಲ್ಲಿ ಹೆಚ್ಚು ಹೊತ್ತು ಒಂದೇ ಕಡೆಯಲ್ಲಿ ನಿಲ್ಲಲಾರದ ಪಕ್ಷಿಗಳು ಒಂದೇ ಬಾರಿಗೆ ಮೇಲಕ್ಕೂ ಮತ್ತು ಕೆಳಕ್ಕೂ ಹಾರುವುದರ ಮುಖಾಂತರ ತಮ್ಮ ಇರುವಿಕೆಯನ್ನು ಪ್ರದರ್ಶಿಸಿಕೊಳ್ಳುತ್ತವೆ. ಸ್ಕೈಲಾರ್ಕ್ ಪಕ್ಷಿ ಹಾಡುವುದರ ಮತ್ತು ಹಾರುವುದರ ಮುಖಾಂತರ ತಮ್ಮ ಇರುವಿಕೆಯನ್ನು ಪ್ರದರ್ಶಿಸುತ್ತವೆ. ಕರಡಿ ಮತ್ತು ಯೂರೋಪಿನ ಕಾಡೆಮ್ಮೆಗಳು ಕಾಲ್ಬೆರಳು ಮತ್ತು ಕೊಂಬಿನಿಂದ ಮರದ ಕಾಂಡದಲ್ಲಿ ಪಟ್ಟಿಯಂತೆ ರಚನೆಯನ್ನು ಕೆತ್ತುತ್ತವೆ. ಈ ರಚನೆಯಲ್ಲದೆ ಮೂತ್ರವನ್ನು ಸ್ರವಿಸುವುದರ ಮೂಲಕ ಸ್ಥಳವನ್ನು ಗುರುತು ಹಚ್ಚುತ್ತವೆ. ಇದೇ ರೀತಿಯ ವಿಚಿತ್ರ ಪ್ರವೃತ್ತಿಯನ್ನು ನಾಯಿಗಳಲ್ಲಿಯೂ ಕಾಣಬಹುದು. ನಾಯಿ ಇನ್ನಿತರ ಪ್ರಾಣಿಗಳಂತೆ ತಾನು ವಾಸಿಸುವ ಸ್ಥಳದ ಪರಿಧಿಯನ್ನು ಮೂತ್ರವನ್ನು ಸ್ರವಿಸುವಿಕೆಯ ಮುಖಾಂತರ ರಕ್ಷಿಸಿಕೊಳ್ಳುತ್ತದೆ. ಹೀಗೆ ಗುರುತು ಹಚ್ಚಿದ ನಂತರ ಬೇರೆ ಯಾವ ಪ್ರಾಣಿಗಳೇನಾದರೂ ಪ್ರವೇಶಿಸಿದ್ದೇ ಆದರೆ ಬೊಗಳುವಿಕೆ ಮುಖಾಂತರ ತನ್ನ ಸ್ಥಳವನ್ನು ರಕ್ಷಿಸಿಕೊಳ್ಳುತ್ತದೆ.

ಕೃಷಿಗೆ ಕೈಗಾರಿಕೆಯ ಸ್ಥಾನಮಾನ

ಬಿ. ಆರ್. ಪರಿಣೀತ

ಕೃಷಿಕೋ ನಾಸ್ತಿ ದುರ್ಭಿಕ್ಷಂ, ಬೇಸಾಯದವ ಸಾ ಬೇಗ ಸಾಯ, ಭಾರತದ ಜೀವನಕ ಕೃಷಿ ಮುಂತಾದ ಘೋಷಣೆಗಳು ಈಗ ಚರ್ವಿತಚರ್ವಣಗಳಾಗಿವೆ. ವಾಸ್ತವ ಪರಿಸ್ಥಿತಿ ಭೀಕರವಾಗಿದೆ: ವ್ಯವಸ್ಥೀಕೃತ ಉದ್ಯಮಗಳ ಬಕಾಸುರತ್ವವನ್ನು ತೃಪ್ತಿಪಡಿಸಲು ಅಸಂಘಟಿತ ಬೇಸಾಯ ಹಿಡುವಳಿಗಳು ನಿರಂತರ ಬೆವರು ಹರಿಸಬೇಕು. ಈ ಅಸಮತೋಲ ಸರಿಯೇ? ಆಗಬೇಕಾದ್ದೇನು?

ಕೃಷಿಗೆ ಕೈಗಾರಿಕೆಯ ಸ್ಥಾನಮಾನ ನೀಡಲಾಗುವುದೆಂಬ ನೀತಿಯನ್ನು ಸರ್ಕಾರ ಘೋಷಿಸಬೇಕು. ಈ ಬೇಡಿಕೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿದೆ. ಕೃಷಿ ಭಾರತೀಯ ಆರ್ಥಿಕ ವ್ಯವಸ್ಥೆಯ ಬೆನ್ನೆಲುಬು. ಇನ್ನು ಮುಂದೆ ಕೃಷಿಯನ್ನು ಲಾಭದಾಯಕ ಎಂಬುದಾಗಿ ಜನ ಪರಿಗಣಿಸಲಾರರು ಎಂಬುದನ್ನು ಸರ್ಕಾರ ಅರಿತುಕೊಳ್ಳಬೇಕು. ಕೈಗಾರಿಕೆಗಳ ಬೆಳವಣಿಗೆಯಿಂದಾಗಿ ಕೃಷಿಯಲ್ಲಿ ಜನರ ಆಸಕ್ತಿ ಕ್ಷೀಣಿಸುತ್ತಿದೆ. ಆಧುನಿಕ ಕಾಲದಲ್ಲಿ ಹೆಚ್ಚು ಜನ ನಗರವಾಸಿಗಳಾಗಲು ಬಯಸುತ್ತಿದ್ದಾರೆ. ಯಾವುದೇ ವೃತ್ತಿಯನ್ನು ಅನುಸರಿಸಬೇಕಾದರೂ ಆರ್ಥಿಕ ಲಾಭ ಮುಖ್ಯವಾದ ಅಂಶವಾಗುತ್ತದೆ. ಕೃಷಿ ಕ್ಷೇತ್ರದಲ್ಲಿ ರೈತರ ಶ್ರಮಕ್ಕೆ ಸರಿಸಮವಾದ ಲಾಭ ಒದಗುತ್ತಿಲ್ಲ ಎಂಬುದು ಸ್ಪಷ್ಟವಾಗಿ ಕಾಣುತ್ತಿದೆ. ಕೃಷಿ ಕ್ಷೇತ್ರದ ನಿರ್ಲಕ್ಷ್ಯದಿಂದಾಗಿ ದವಸಧಾನ್ಯಗಳ ಉತ್ಪಾದನೆ ಕಡಿಮೆಯಾಗುವುದರಲ್ಲಿ ಆಶ್ಚರ್ಯವೇನಿಲ್ಲ. ಯಾವ ಕ್ಷೇತ್ರ ಲಕ್ಷಾಂತರ ಜನರಿಗೆ ಅವಶ್ಯಕವಾದ ಆಹಾರ ಒದಗಿಸುತ್ತಿದೆಯೋ ಅಂಥ ಕ್ಷೇತ್ರವನ್ನೇ ಕಡೆಗಣಿಸಲಾಗಿದೆ. ಅದಲ್ಲದೆ ಇಂದಿನ ಜನಸಂಖ್ಯಾ ಸ್ಫೋಟದಲ್ಲಿ ಆಹಾರ ಕೊರತೆಯುಂಟಾಗುವುದರಿಂದ ಆರ್ಥಿಕ ವ್ಯವಸ್ಥೆಯ ಮೇಲೆ ಎಂಥ ಭೀಕರ ಪರಿಣಾಮ ಉಂಟಾಗಬಹುದೆಂದು ಆಲೋಚಿಸಬಹುದು. ಆದ್ದರಿಂದ ಕೃಷಿ ಚಟುವಟಿಕೆಯನ್ನು ಸುವ್ಯವಸ್ಥಿತವಾದ ಕೈಗಾರಿಕಾ ಚಟುವಟಿಕೆಯಾಗಿ ಪರಿವರ್ತಿಸಲು ಸರಿಯಾದ ವಾತಾವರಣವನ್ನು ಸೃಷ್ಟಿಸಬೇಕಾಗಿರುವ ಅವಶ್ಯಕತೆಯನ್ನು ಕುರಿತು ಜಾಗೃತಿ ಬೆಳೆಯುತ್ತಿದೆ.

ಕೈಗಾರಿಕೆಗಳಿಗೆ ಅವಶ್ಯವಾದ ಕಚ್ಚಾ ವಸ್ತುಗಳನ್ನು ಕೃಷಿ ಒದಗಿಸುತ್ತದೆ ಎಂಬುದನ್ನು ಸರ್ಕಾರ ಅರಿತುಕೊಳ್ಳಬೇಕು. ಇಂಥ

ಸೌಲಭ್ಯಗಳನ್ನು, ಉತ್ತೇಜಕಗಳನ್ನು ಹಾಗೂ ಆರ್ಥಿಕ ಬೆಂಬಲವನ್ನು ಒದಗಿಸುವುದರಿಂದ ಮಾತ್ರ ಆರ್ಥಿಕ ಚಟುವಟಿಕೆಗಳ ಬೆಳವಣಿಗೆ ಸಾಧ್ಯ. ಆಧುನೀಕರಣದೊಂದಿಗೆ ಕೃಷಿ ಚಟುವಟಿಕೆಯಲ್ಲಿಯೂ ಕ್ರಾಂತಿ ತರಬೇಕು. ಸರ್ಕಾರದ ನೀತಿಯಲ್ಲಿ ಕೃಷಿಯನ್ನು ಕುರಿತು ಮಲತಾಯಿ ಧೋರಣೆ ಎದ್ದು ಕಾಣುತ್ತಿದೆ. ಅನೇಕ ಅಂಶಗಳಲ್ಲಿ ಕೈಗಾರಿಕಾ ಹಾಗೂ ಕೃಷಿ ಕ್ಷೇತ್ರಗಳ ನಡುವಿನ ತಾರತಮ್ಯಗಳು ಅಸಂಖ್ಯಾತವಾಗಿವೆ. ಆಧುನೀಕರಣ ಮಾನವನ ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಅನೇಕ ಬದಲಾವಣೆಗಳಿಗೆ ಕಾರಣವಾಗಿದೆ. ಈ ವೈಜ್ಞಾನಿಕ ಯುಗದಲ್ಲಿ, ತಂತ್ರವಿದ್ಯೆಯನ್ನು ಕೃಷಿ ಕ್ಷೇತ್ರದಲ್ಲಿ ಅಳವಡಿಸಿಕೊಳ್ಳಬೇಕಾದುದು ಅನಿವಾರ್ಯವಾಗಿದೆ. ವೇಗವಾಗಿ ಬೆಳೆಯುತ್ತಿರುವ ಆರ್ಥಿಕ ವ್ಯವಸ್ಥೆಯಲ್ಲಿ ರೈತರಿಗೆ ವೈಜ್ಞಾನಿಕ ಕೃಷಿಯನ್ನು ಪರಿಚಯಿಸುವುದು ಅಗತ್ಯ. ಸರ್ಕಾರ ವಿಜ್ಞಾನದ ಫಲವನ್ನು ರೈತರಿಗೆ ತಲುಪುವಂತೆ ಮಾಡಬೇಕು. ಗ್ರಾಮಗಳು ತಂತ್ರವಿದ್ಯೆಯನ್ನು ಪಸರಿಸುವ ಕೇಂದ್ರಗಳಾಗಿ ಬೆಳೆಯಬೇಕು. ಸರ್ಕಾರ ಪ್ರತಿಯೊಂದು ಜಿಲ್ಲೆಯಲ್ಲೂ ಕೃಷಿ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲು ಪ್ರಯತ್ನಿಸಿದೆ. ಗ್ರಾಮೀಣರು ಹಾಗೂ ರೈತರು ಈ ಸದವಕಾಶವನ್ನು ಬಳಸಿಕೊಳ್ಳಬೇಕು. ಹಾನಿಕರ-ಕೀಟನಾಶಕ ಔಷಧಗಳ ಬೆಲೆ ಗಗನಕ್ಕೇರುತ್ತಿರುವಾಗ, ಅವನ್ನು ವಿವೇಚನೆಯಿಲ್ಲದೆ ಸತತವಾಗಿ ಬಳಸಲಾಗುತ್ತಿರುವುದರಿಂದ ಅನೇಕ ವಿನಾಶಕಾರಿ ಪರಿಣಾಮಗಳುಂಟಾಗಿವೆ. ಆದ್ದರಿಂದ ಸರ್ಕಾರ ವೈಜ್ಞಾನಿಕ ಕೃಷಿಯನ್ನು ಕುರಿತು ಜನರಿಗೆ ತಿಳುವಳಿಕೆ ಬೆಳೆಯುವಂತೆ ಶ್ರಮಿಸಬೇಕಾಗಿದೆ.

ಕೈಗಾರಿಕಾ ಉತ್ಪನ್ನಗಳ ಬೆಲೆಗಳನ್ನು ಉತ್ಪಾದಕರೇ ನಿಗದಿಪಡಿಸುತ್ತಾರೆ. ಆದರೆ ಕೃಷಿ ಉತ್ಪನ್ನಗಳಿಗೆ ಸರ್ಕಾರ ಬೆಲೆಗಳನ್ನು ನಿರ್ಧರಿಸುತ್ತದೆ ಮತ್ತು ಕೃಷಿ ಉತ್ಪನ್ನಗಳ ವ್ಯಾಪಾರ ಹಾಗೂ ಆಮದು-ರಫ್ತು ನಿರ್ಧಾರಗಳನ್ನು ಕುರಿತು ಅಡಚಣೆಗಳನ್ನು ಒಡ್ಡುವುದರ ಮೂಲಕ, ಸರ್ಕಾರ ತಾನು ಘೋಷಿಸಿದ ಬೆಲೆಗಳನ್ನು ಜಾರಿಗೆ ತರುತ್ತದೆ. ರೈತರು ತಮ್ಮ ದವಸಧಾನ್ಯಗಳಿಂದ ಅತ್ಯಧಿಕ ಲಾಭವನ್ನು ಗಳಿಸುವ ಮಾರ್ಗದಲ್ಲಿ ಅನೇಕ ಅಡಚಣೆಗಳನ್ನು ಎದುರಿಸಬೇಕಾಗಿದೆ. ಉತ್ತೇಜಕದ ಕೊರತೆಯಿಂದಾಗಿ, ಭಾರತೀಯ ರೈತನ ಸ್ಪರ್ಧಾತ್ಮಕ ಮನೋಭಾವ ನಶಿಸಿಹೋಗುತ್ತಿದೆ. ಇಂಥ ವಾತಾವರಣದಲ್ಲಿ ಮತ್ತು ಕತ್ತಲೆಯ ಭವಿಷ್ಯದಲ್ಲಿ ರೈತರು ಹೇಗೆ ತಾನೆ ಆಶಾ ಮನೋಭಾವವನ್ನು ಬೆಳೆಸಿಕೊಳ್ಳಬಹುದು?

ಕೈಗಾರಿಕೋದ್ಯಮಿಗಳಿಗೆ ತಮ್ಮದೇ ಆದ ಸಂಘಗಳ ಮೂಲಕ ಅಥವಾ ನೇರವಾಗಿ ಬಳಕೆದಾರರಿಗೆ ತಮ್ಮ ಉತ್ಪಾದನೆಗಳನ್ನು ಮಾರಾಟ ಮಾಡಲು ಅನುಮತಿ ನೀಡಲಾಗಿದೆ. ದಾಸ್ತಾನು ಶೇಖರಣೆ ಅಥವಾ ಮೌಲ್ಯ ಹೆಚ್ಚಳಕ್ಕೆ ಯಾವ ಅಡ್ಡಿಯನ್ನು ಮಾಡಲಾಗಿಲ್ಲ. ಆದರೆ ರೈತರಿಗೆ ಬಳಕೆದಾರರೊಂದಿಗೆ ನೇರ ಸಂಪರ್ಕವನ್ನು ಬೆಳೆಸಿಕೊಳ್ಳುವ ಅವಕಾಶವಿಲ್ಲ. ಮಧ್ಯವರ್ತಿಗಳು ಶುಕ್ರದೆಶೆಯನ್ನು ಅನುಭವಿಸುತ್ತಿದ್ದಾರೆ. ಏಕೆಂದರೆ ನ್ಯಾಯವಾಗಿ ರೈತರಿಗೆ ಸೇರಬೇಕಾದ ಲಾಭದ ಬಹುಭಾಗ ಮಧ್ಯವರ್ತಿಗಳೇ ಪಡೆದುಕೊಳ್ಳುತ್ತಾರೆ. ಕೈಗಾರಿಕೋ-

ದ್ಯವಿಗಳು ತಮ್ಮ ದಾಸ್ತಾನನ್ನು ಗಿರವಿಯಿಟ್ಟು ಯುಕ್ತವಾದ ಕರಾರುಗಳಿಗನುಗುಣವಾಗಿ ಸಾಲವನ್ನು ಪಡೆದುಕೊಳ್ಳಬಹುದು. ಆದರೆ ರೈತರ ದಾಸ್ತಾನುಗಳನ್ನು ಅಡವಿಟ್ಟುಕೊಂಡು ಸಾಲ ನೀಡುವುದು ತೀರಾ ವಿರಳ. ಆದಾಗ್ಯೂ ಆ ರೀತಿ ಸಾಲವನ್ನು ನೀಡುವ ಸೌಲಭ್ಯ ಇದ್ದರೂ, ಯುಕ್ತವಾದ ಕರಾರುಗಳಿಗನುಗುಣವಾಗಿ ಸಾಲವನ್ನು ನೀಡಲಾಗುವುದಿಲ್ಲ.

ಕೈಗಾರಿಕೆಗಳಿಗೆ ಸಹಾಯಧನ ನೀಡುವುದರ ಮೂಲಕ ಹಾಗೂ ರಿಯಾಯಿತಿ ಮೂಲಕ ಕೈಗಾರಿಕಾ ಉತ್ಪಾದನೆಗಳ ರಫ್ತನ್ನು ಪ್ರೋತ್ಸಾಹಿಸಲಾಗುತ್ತದೆ. ರಫ್ತಿನಿಂದ ಬರುವ ಲಾಭ ಉತ್ಪಾದಕರಿಗೆ ಸೇರುತ್ತದೆ. ಉತ್ಪಾದನೆಯನ್ನು ಉತ್ತಮಪಡಿಸಲು ಆಧುನಿಕ ಯಂತ್ರಗಳನ್ನು ಆಮದು ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಕೈಗಾರಿಕಾ ಉತ್ಪನ್ನಗಳಿಗೆ ಕೃಷಿ ಉತ್ಪನ್ನಗಳ ರಫ್ತನ್ನು ಹೆಚ್ಚಾಗಿ ರಾಜ್ಯ ಸಂಸ್ಥೆಗಳಿಂದ ನಿಯಂತ್ರಿಸಲಾಗಿದೆ. ಕೆಲವು ಕೃಷಿ ಉತ್ಪನ್ನಗಳಿಗೆ ಸಹಾಯಧನ ನೀಡುವ ರಫ್ತು ತೆರಿಗೆ ವಿಧಿಸಲಾಗಿದೆ. ಕೃಷಿ ಉತ್ಪನ್ನಗಳ ರಫ್ತಿನಿಂದ ಬರುವ ಲಾಭ ರಾಜ್ಯ ಸಂಸ್ಥೆಗಳಿಗೆ ಅಥವಾ ಮಧ್ಯವರ್ತಿಗಳಿಗೆ ಸೇರುತ್ತದೆ.

ಅನೇಕ ಬಾರಿ ಕೃಷಿ ಉತ್ಪನ್ನಗಳು ವಿದೇಶಿ ಪದಾರ್ಥಗಳಿಂದ ಸ್ಪರ್ಧೆಯನ್ನೂ ಎದುರಿಸಬೇಕಾಗುತ್ತದೆ. ಆಮದು ಮಾಡಿಕೊಂಡ ಕೃಷಿ ಉತ್ಪನ್ನಗಳಿಗೆ, ಮೂಲ ರಾಷ್ಟ್ರದ ಸರ್ಕಾರದಿಂದ ಹಾಗೂ ನಮ್ಮ ಸ್ಥಳೀಯ ಮಾರುಕಟ್ಟೆಯಿಂದ ಇಮ್ಮಡಿ ಸಹಾಯಧನ ಒದಗುತ್ತದೆ. ಕೃಷಿ ಯಂತ್ರಗಳನ್ನು ಆಮದು ಮಾಡಿಕೊಳ್ಳಲು ಅವಕಾಶವಿದ್ದರೂ ಹೆಚ್ಚಿನ ಆಮದು ಸುಂಕವನ್ನು ವಿಧಿಸಲಾಗುತ್ತದೆ. ಈ ಯಂತ್ರಗಳು ಭಾರತದಲ್ಲೇ ದೊರಕಿದ್ದರೆ, ಕಡಿಮೆ ಬಂಡವಾಳದಲ್ಲಿ ಅತಿ ಹೆಚ್ಚಿನ ಉತ್ಪಾದನೆಯುಂಟಾಗಲು ಸಾಧ್ಯವಾಗುತ್ತಿತ್ತು.

ಭಾರತದಲ್ಲಿ ಕೃಷಿಯು ಬೆಳವಣಿಗೆಗೆ ಒದಗುವ ಸಾಂಸ್ಥಿಕ ವ್ಯವಸ್ಥೆ ದುರ್ಬಲವಾಗಿದೆ. ಜೀವನಾಧಾರ ಕೃಷಿಯನ್ನು ಒದಗಿಸುವ ಸಲುವಾಗಿ ಮಾತ್ರ ವಾತಾವರಣವನ್ನು ರೂಪಿಸಲಾಗಿದೆ. ಕೈಗಾರಿಕೆಗಳಿಗೆ ಸಹಾಯ ನೀಡಲು ವೃತ್ತೀಯ ಹಾಗು ವಿಶೇಷ ಹಣಕಾಸಿನ ಸಂಘಗಳಿವೆ. ಅಂಥ ಹಣಕಾಸಿನ ಸಂಸ್ಥೆಗಳು ಕೃಷಿಗೆ ನೆರವನ್ನು ನೀಡಲು ರಾಜ್ಯ ಮಟ್ಟದಲ್ಲಿ ಯಾವ ಸಂಸ್ಥೆಯೂ ಇಲ್ಲ ಮತ್ತು ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿಯ ರಾಷ್ಟ್ರೀಯ ಬ್ಯಾಂಕ್ ಮಾತ್ರವೇ ಕೃಷಿ ಕ್ಷೇತ್ರದಲ್ಲಿ ಸಂಪೂರ್ಣ ಕ್ರಾಂತಿಯನ್ನು ತರಲು ಸಾಧ್ಯವಿಲ್ಲ.

ರೈತರಿಗೆ ಉಂಟಾಗಿರುವ ಧನ ಸಹಾಯ ಕೊರತೆಯೆ ಭಾರತದಲ್ಲಿ ಕೃಷಿಯು ಇಂಥ ಶೋಚನೀಯ ಪರಿಸ್ಥಿತಿಗೆ ಮುಖ್ಯ ಕಾರಣ. ರಾಷ್ಟ್ರೀಯ ಆದಾಯಕ್ಕೆ ಸುಮಾರು ಮೂರನೆಯ ಒಂದರಷ್ಟು ಕೊಡುಗೆ ನೀಡುವ ಕೃಷಿ ಕ್ಷೇತ್ರಕ್ಕೆ ಬ್ಯಾಂಕಿನ ಒಟ್ಟು ಜಮಾ ಹಣದಲ್ಲಿ ಶೇಕಡಾ ೧೭ರಷ್ಟನ್ನು ಮಾತ್ರ ನೀಡಲಾಗುತ್ತದೆ, ಆದರೆ ರಾಷ್ಟ್ರೀಯ ಆದಾಯಕ್ಕೆ ಶೇಕಡಾ ೨೦ರಷ್ಟು ಮಾತ್ರ ಕೊಡುಗೆ ನೀಡುತ್ತಿರುವ ತಯಾರಿಕೆ ಕ್ಷೇತ್ರಕ್ಕೆ ಬ್ಯಾಂಕಿನ ಒಟ್ಟು ಜಮಾಹಣದ ಶೇಕಡಾ ೩೭ರಷ್ಟನ್ನು ಮೀಸಲಾಗಿರಿಸ

ಲಾಗುತ್ತಿದೆ. ಕೈಗಾರಿಕೆಗೆ ಪ್ರೋತ್ಸಾಹ ನೀಡುವಂತೆ ಕೃಷಿಯನ್ನು ವಾಣಿಜಿಕ ಅಥವಾ ವ್ಯಾಪಾರ ಚಟುವಟಿಕೆಯಂತೆ ಪ್ರೋತ್ಸಾಹಿಸಲು ಯಾವ ಯೋಜನೆಗಳೂ ಇಲ್ಲ.

ಕೈಗಾರಿಕಾ ಯೋಜನೆಯಲ್ಲಿ ಭೂಮಿಯನ್ನು ಉದ್ದಿಮೆದಾರನ ಕೊಡುಗೆ ಎಂದು ಭಾವಿಸಲಾಗುತ್ತದೆ. ಆದರೆ ತನ್ನ ಭೂಮಿಯ ಅಭಿವೃದ್ಧಿಗೆ ಧನ ಸಹಾಯ ನಿರೀಕ್ಷಿಸುತ್ತಿರುವ ರೈತನ ಭೂಮಿಯನ್ನು ಕೊಡುಗೆ ಎಂದು ಭಾವಿಸಲಾಗುವುದಿಲ್ಲ. ರೈತ ಬಾವಿ ತೋಡಿಸಲು ಮತ್ತು ನೀರಾವರಿ ವ್ಯವಸ್ಥೆಯನ್ನು ರೂಪಿಸಿಕೊಳ್ಳಲು, ಬ್ಯಾಂಕ್ ಸಾಲವನ್ನು ಪಡೆಯಲು ತನ್ನ ಬಂಡವಾಳವನ್ನು ಮೊದಲು ಹೊಂದಿಸಿಕೊಳ್ಳಬೇಕು. ರೈತನೊಬ್ಬ ಭೂಮಿಯನ್ನು ಖರೀದಿಸಿ, ತನ್ನ ಭೂಮಿಯನ್ನು ಅಭಿವೃದ್ಧಿಪಡಿಸಿಕೊಳ್ಳಬೇಕೆಂದು ಬಯಸಿದರೆ, ಆ ಯೋಜನೆಯ ಒಟ್ಟು ವೆಚ್ಚದ ಶೇಕಡಾ ೭೦ರಿಂದ ೭೫ರಷ್ಟನ್ನು ಬಂಡವಾಳವಾಗಿ ಹೂಡಲು ಸಿದ್ಧನಾಗಿರಬೇಕು, ಆದರೆ ಕೈಗಾರಿಕಾ ಉದ್ಯಮಶೀಲನಿಗೆ ಕೈಗಾರಿಕೆಯನ್ನು ಪ್ರಾರಂಭಿಸಲು ಯೋಜನೆಯ ಒಟ್ಟು ವೆಚ್ಚದ ಶೇಕಡಾ ೧೫ರಿಂದ ೨೦ ಮಾತ್ರ ತನ್ನದೇ ಬಂಡವಾಳವನ್ನು ಹೊಂದಿಸಿಕೊಳ್ಳಬೇಕು.

ಹಣಕಾಸಿನ ಸಂಸ್ಥೆಗಳು ಸಿಂಪಡಿತಗಳನ್ನು ಅಥವಾ ಭೂ ಅಭಿವೃದ್ಧಿಗೆಂದು ನಿರ್ಮಿಸಿದ ಕಟ್ಟಡಗಳನ್ನು ಸಾಲಕ್ಕೆ ಜಾಮೀನೆಂದು ಸ್ವೀಕರಿಸುವುದಿಲ್ಲ. ರೈತರಿಗೆ ಸಾಲವನ್ನು ನೀಡಲು ಭೂಮಿಯ ಮೌಲ್ಯವನ್ನು ಮಾತ್ರ ಪರಿಗಣಿಸಲಾಗುತ್ತದೆ. ರೈತರು ತಮ್ಮ ವೈಯಕ್ತಿಕ ಆಸ್ತಿಯನ್ನು ಸಾಲಕ್ಕೆ ಜಾಮೀನಾಗಿ ನೀಡಬೇಕು. ಆದರೆ ಕೈಗಾರಿಕೆಯಲ್ಲಿ, ಭೂಮಿ, ಕಟ್ಟಡ ಹಾಗೂ ಯಂತ್ರಗಳ ವಾಸ್ತವ ಮೌಲ್ಯವನ್ನು ಜಾಮೀನಾಗಿ ಪರಿಗಣಿಸಲಾಗುತ್ತದೆ. ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಸಾಲವನ್ನು ನೀಡಲು 'ಅನುಚಿತ ಕರಾರುಗಳನ್ನು' ರೂಪಿಸಿದೆ. ಭೂಮಿಯ ಫಲವತ್ತತೆಗನುಗುಣವಾಗಿ ರೂ ಒಂದು ಲಕ್ಷವನ್ನು ಮಾತ್ರ ಸಾಲವಾಗಿ ನೀಡಲಾಗುವುದೆಂದು ಕೃಷಿ ಸಾಲವನ್ನು ಸೀಮಿತಗೊಳಿಸಲಾಗಿದೆ.

'ರೈತರೇ ದುಡಿಯುವ ಯೋಧರು', 'ಬಡತನ ನಿರ್ಮೂಲನ' ಮತ್ತು 'ಜೈ ಜವಾನ್ ಜೈ ಕಿಸಾನ್' ಎಂಬ ಘೋಷಣೆಗಳಿಂದ ರಾಜಕೀಯ ಪಕ್ಷಗಳು ಅಧಿಕಾರವನ್ನು ಪಡೆದುಕೊಳ್ಳಲು ಪ್ರಯತ್ನಿಸುತ್ತಿವೆ. ರೈತರ ಸಾಲ ಮನ್ನಾ ಮಾಡಿದ ಪಕ್ಷವನ್ನು ಪ್ರಶಂಸಾರ್ಹ ಎನ್ನುವುದಕ್ಕಿಂತ, ಸಾಂಸ್ಥಿಕ ಬದಲಾವಣೆಗಳಿಗಾಗಿ ಶ್ರಮಿಸಬೇಕೆಂಬ ಧ್ಯೇಯವನ್ನು ಹೊಂದಿರುವ ಪಕ್ಷಗಳು ಹೆಚ್ಚು ಉತ್ತಮ ಎಂಬುದನ್ನು ಗ್ರಾಮೀಣ ಜನರು ಅರಿತುಕೊಳ್ಳಬೇಕು. ತಾತ್ಕಾಲಿಕವಾಗಿ ಮೆಚ್ಚಿಸುವಂತಹ ಕಾರ್ಯಕ್ರಮಗಳಿಗೆ ರೈತರು ಮರುಳಾಗಬಾರದು. ರೈತರಿಗೆ ಸಾಲವನ್ನು ನೀಡಲು ಉತ್ತಮ ಸಂಘ ಸಂಸ್ಥೆಗಳ ಸ್ಥಾಪನೆ ಅವಶ್ಯ. ಕೃಷಿ ಉತ್ಪಾದನೆಯ ಲಾಭ ರೈತರಿಗೆ ಸೇರುವಂತೆ ವ್ಯವಸ್ಥೆ ರೂಪಿಸಬೇಕು. ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿಗೆ ಆದ್ಯತೆ ಮತ್ತು ಗ್ರಾಮೀಣ ರೈತರಿಗೆ ಸಾರಿಗೆ ಮತ್ತು ಸಂಪರ್ಕ ಸೌಲಭ್ಯಗಳನ್ನು ಒದಗಿಸುವಂತ ಪ್ರಗತಿಪರ ಬದಲಾವಣೆಗಳನ್ನು ತರುವುದು ಸಂಬಂಧಪಟ್ಟವರು ಗುರಿಯಾಗಬೇಕು.

ಹೀಗೊಬ್ಬ ಅನಕ್ಷರಸ್ಥ

ಎಚ್. ಆರ್. ಚಂದ್ರವದನರಾವ್

ಆ ಸಂಜೆ ನೆವಿಲೆ ಸ್ಕ್ವೇರ್‌ನಲ್ಲಿದ್ದ ಸೇಂಟ್ ಪೀಟರ್ಸ್ ಚರ್ಚಿನಲ್ಲಿ ಯಾವುದೋ ಒಂದು ನಾಮಕರಣವಿತ್ತು. ಅದರ ಸಲುವಾಗಿ ಹಾಕಿಕೊಂಡಿದ್ದ ತನ್ನ ಗೌನನ್ನು ದಂಡಧಾರಿ (ವರ್ಜರ್) ಆಲ್ಬರ್ಟ್ ಎಡ್ವರ್ಡ್ ಫೋರ್‌ಮನ್ ಇನ್ನೂ ಬಿಚ್ಚಿರಲಿಲ್ಲ. ತನ್ನ ವೃತ್ತಿಗೆ ಗೌರವ ತರುತ್ತಿದ್ದ ಆ ಗೌನನ್ನು ಹಾಕಿಕೊಳ್ಳುವುದೆಂದರೆ ಅವನಿಗೆ ಒಂದು ಬಗೆಯ ಹೆಮ್ಮೆ. ಅದನ್ನು ಬಿಚ್ಚಿ ಮನೆಗೆ ಹೋಗುವಾಗ ಪೂರ್ಣವಾಗಿ ಬಟ್ಟೆ ಧರಿಸದ ಅನುಭವ ಅವನಿಗೆ.

ಕಳೆದ ಹದಿನಾರು ವರ್ಷಗಳಿಂದಲೂ ದಂಡಧಾರಿ ಕೆಲಸದಲ್ಲಿದ್ದ ಅವನಿಗೆ ಗೌನಿನ ಬಗ್ಗೆ ವಿಶೇಷ ಅಭಿಮಾನ. ಹಳೆಯದಾದ, ಹರಿದ ಗೌನುಗಳನ್ನು ಕಾಗದದಲ್ಲಿ ಜೋಪಾನವಾಗಿ ಸುತ್ತಿ, ತನ್ನ ಮಲಗುವ ಕೋಣೆಯಲ್ಲಿದ್ದ ವಾರ್ಡ್‌ರೋಬಿನ ಕೆಳಗಿನ ಡ್ರಾಯರ್‌ನಲ್ಲಿ ಅವನಿಟ್ಟಿದ್ದ. ಹಾಲಿ ಹಾಕಿಕೊಳ್ಳುವ ಗೌನನ್ನು ತಾನೇ ಶ್ರಮವಹಿಸಿ ಇಸ್ತ್ರಿ ಮಾಡಿಕೊಳ್ಳುತ್ತಿದ್ದ.

ವಸ್ತ್ರದ ಕೋಣೆ(ವೆಸ್ಟ್ರಿ)ಗೆ ಹೋಗಿದ್ದ ವಿಕರ್ ಹೊರಗೆ ಬಂದೊಡನೆ ಆ ಕೊಠಡಿಯನ್ನು ಚೊಕ್ಕಟ ಮಾಡಿ ಮನೆಗೆ ಹೋಗುವ ತವಕದಿಂದ—'ಅವರೇಕೆ ಇನ್ನೂ ಇದ್ದಾರೆ? ನಾನು ಮನೆಗೆ ಹೋಗಿ ಟೀ ಕುಡಿಯಬೇಕೆನ್ನುವುದು ಅವರಿಗೆ ಗೊತ್ತಿಲ್ಲವೇ?' ಎಂದು ಫೋರ್‌ಮನ್ ಯೋಚಿಸಿದ.

ವಿಕರ್ ಹಾಕಿಕೊಂಡ ನಿಲುವಂಗಿಯಲ್ಲೇ ಹಜಾರದಲ್ಲಿದ್ದುದು ಕಂಡು ಬಂತು. ಕೆಂಪು ಮುಖದ, ತುಂಬ ಲವಲವಿಕೆಯಿಂದಿದ್ದ ನಲವತ್ತರ ಪ್ರಾಯದ ಹೊಸದಾಗಿ ಬಂದ ವಿಕರ್ ಹಿಂದಿನಂತಹವನಲ್ಲ. ಹಿಂದಿದ್ದವರು ತಮ್ಮ ಕಂಚಿನ ಕಂಠದಿಂದ ಸರ್ಮನ್‌ಗಳನ್ನು ಓದುತ್ತಿದ್ದರು; ಶ್ರೀಮಂತ ನಿವಾಸಿಗಳೊಡನೆ ನಿಧಾನವಾಗಿ ಭೋಜನ ಮಾಡುತ್ತಿದ್ದರು; ಎಷ್ಟೋ ಚಿಲ್ಲರೆ ವಿಷಯಗಳನ್ನು

ಮೂಲ : ಸಾಮರ್‌ಸೆಟ್ ಮಾಮ್ ಅವರ 'ದಿ ವರ್ಜರ್.'

ವಿಕರ್ : ಪ್ಯಾರಿಷಿನ ಸಂಬಳದ ಪಾದ್ರಿ.

ವರ್ಜರ್ : ಚರ್ಚಿನಲ್ಲಿ ಜನರಿಗೆ ಅವರವರ ಪೀಠಗಳನ್ನು ತೋರಿಸುವ ಅಧಿಕಾರಿ, ಚರ್ಚಿನ ಮುಖ್ಯಸ್ಥರ ಮುಂದೆ ದಂಡ ಹಿಡಿದುಕೊಂಡು ಹೋಗುವವನು, ದಂಡಧಾರಿ.

ವೆಸ್ಟ್ರಿ : ವಸ್ತ್ರಗಳನ್ನಿಡುವ ಕೋಣೆ.]

ಅವರು ತಲೆಗೆ ಹಚ್ಚಿಕೊಳ್ಳುತ್ತಿರಲಿಲ್ಲ. ಆದರೆ ಎಲ್ಲದರಲ್ಲೂ ಮೂಗು ಹಾಕುವ ಸ್ವಭಾವ ಹೊಸ ವಿಕರ್‌ಗೆ.

ಹಜಾರದಲ್ಲಿದ್ದ ವಿಕರ್, ಆಲ್ಬರ್ಟ್ ಫೋರ್‌ಮನ್ ಅನ್ನ ಕರೆದು–'ನಿನ್ನೊಡನೆ ಸ್ವಲ್ಪ ಮಾತನಾಡಬೇಕು. ವಸ್ತ್ರದ ಕೋಣೆಗೆ ಬರುತ್ತೀಯಾ?' ಎಂದು ಹೇಳುತ್ತಾ ಮುಂದೆ ಹೊರಟರು. ವಸ್ತ್ರದ ಕೋಣೆಯಲ್ಲಿ ಆಗಲೇ ಇಬ್ಬರು ವಾರ್ಡನ್‌ಗಳಿದ್ದರು. ಆಲ್ಬರ್ಟ್ ಫೋರ್‌ಮನ್‌ಗೆ ವಿಕರ್ ತನ್ನನ್ನು ಕರೆದದ್ದು ಆಶ್ಚರ್ಯವಾಗಿತ್ತು.

ವಿಷಯವೇನಿರಬಹುದು? ಅವನು ಯೋಚನಾಕ್ರಾಂತನಾದುದ್ದೇನೂ ಮುಖದಲ್ಲಿ ಕಾಣುತ್ತಿರಲಿಲ್ಲ. ಕೋಣೆಗೆ ಬಂದು ವಿಕರ್ ಎದುರು ಮರ್ಯಾದೆ ತೋರಿಸುವಂತೆ ನಿಂತಿದ್ದರೂ ಅವನೆಂದೂ ದಾಸಾನುದಾಸನಂತೆ ಅವರ ಬಳಿ ವರ್ತಿಸುತ್ತಿರಲಿಲ್ಲ. ಚರ್ಚಿನ ಕೆಲಸಕ್ಕೆ ಬರುವ ಮೊದಲು ಅವನು ಶ್ರೀಮಂತರೊಬ್ಬರ ಮನೆಯಲ್ಲಿ ಕೆಲಸ ಮಾಡಿದ್ದು ಅವನಿಗೆ ನೀತಿ, ರೀತಿ ಗೊತ್ತಿತ್ತು. ಅದರ ಬಗ್ಗೆ ಯಾರೂ ಒಂದು ಚಕಾರ ಎತ್ತುವ ಹಾಗಿರಲಿಲ್ಲ. ನಿಜ, ಸೇನಾಪತಿಯಂತಲ್ಲದಿದ್ದರೂ, ನಾಟಕದಲ್ಲಿ ವೇಷ ಧರಿಸಿದ ಸೇನಾಪತಿಯಂತೆ ಅವನ ಗತ್ತು. ಅವನ ಚಾಕಚಕ್ಯತೆ, ಆತ್ಮವಿಶ್ವಾಸ, ದೃಢ ಸ್ವಭಾವಕ್ಕೆ ಎಲ್ಲರೂ ಮೆಚ್ಚಿದ್ದರು.

ವಿಕರ್ ಹೇಳಿದರು–

"ಫೋರ್‌ಮನ್, ನೀನು ಬಹಳ ವರ್ಷಗಳಿಂದ ಇಲ್ಲಿದ್ದೀಯ. ಸಂಬಂಧಪಟ್ಟವರಿಗೆಲ್ಲಾ ನಿನ್ನ ಕೆಲಸದ ಬಗ್ಗೆ ತೃಪ್ತಿಯಿದೆ."

ವಿಕರನ ಮಾತಿಗೆ ಅಲ್ಲಿದ್ದ ವಾರ್ಡನ್ಸ್ ತಲೆದೂಗಿದರು.

"ನಾಲ್ಕಾರು ದಿನಗಳ ಹಿಂದೆ ನನಗೊಂದು ವಿಷಯ ತಿಳಿಯಿತು. ಆಶ್ಚರ್ಯ ತರುವ ವಿಷಯ. ನಿನಗೆ ಓದಲು, ಬರೆಯಲು ಬರುವುದಿಲ್ಲವಂತೆ!"

ಆಲ್ಬರ್ಟ್ ಫೋರ್‌ಮನ್‌ನ ಮುಖದಲ್ಲಿ ಯಾವ ವಿಧವಾದ ಅಳುಕೂ ಕಾಣಬರಲಿಲ್ಲ. ಅವನು ಹೇಳಿದ.

"ಹಿಂದಿದ್ದ ವಿಕರ್‌ಗೆ ಇದು ಗೊತ್ತಿತ್ತು. ಅವರು ಹೇಳುತ್ತಿದ್ದರು–'ನೀನು ನಿರಕ್ಷರನಾಗಿರುವುದರಿಂದ ಕೆಲಸಕ್ಕೆ ಯಾವ ಚ್ಯುತಿಯೂ ಬಂದಿಲ್ಲ' ಎಂದು. 'ಓದು, ಬರಹ ಬಂದರೂ ಪ್ರಪಂಚದಲ್ಲಿ ಕಲಿತುಕೊಳ್ಳಬೇಕಾದದ್ದು ತುಂಬ ಇದೆ.'"

"ಹಾಗೆ ಹೇಳುತ್ತಿದ್ದರೇ? ಇರಲಿ. ಹದಿನಾರು ವರ್ಷದಿಂದ ನೀನು ಚರ್ಚಿನಲ್ಲಿದ್ದರೂ ಓದು ಬರಹ ಬಾರದಿರುವುದು ಆಶ್ಚರ್ಯವೇ ಸರಿ."

"ನಾನು ಕೆಲಸಕ್ಕೆ ಸೇರಿದಾಗ ನನಗೆ ಹನ್ನೆರಡು ವರ್ಷ. ನಾನು ಕೆಲಸಕ್ಕೆ ಇದ್ದ ಕಡೆ ಅಡಿಗೆಯವನು ನನಗೆ ಪಾಠ ಹೇಳಿಕೊಡಲು ಪ್ರಯತ್ನಪಟ್ಟ. ನಾಲ್ಕು ದಿನವಾದ ಕೂಡಲೇ 'ನಿನಗೆ ಕಲಿಯಲು ಬೇಕಾದ ಜಾಣತನವಿಲ್ಲ' ಎಂದ. ಅನಂತರ ಬೇರೆ ಬೇರೆ ಕೆಲಸದಲ್ಲಿದ್ದೆ. ಕಲಿಯಲು ಟೈಂ ಆಗುತ್ತಿರಲಿಲ್ಲ... ನನ್ನ ಹೆಂಡತಿ ಜಾಣೆ. ಏನಾದರೂ ಬರೆಯುವ ಸಂದರ್ಭ ಬಂದರೆ ಅವಳೇ ನನ್ನ ಪರವಾಗಿ ಬರೆಯುತ್ತಾಳೆ. ಬಂದ ಕಾಗದ ಓದಿ ಹೇಳುತ್ತಾಳೆ."

"ಸೇಂಟ್ ಪೀಟರ್ಸ್ ಚರ್ಚ್‌ನಂತಹ ಚರ್ಚಿನಲ್ಲಿರುವ ದಂಡಧಾರಿ ನಿರಕ್ಷರ ಕುಕ್ಷಿ

ಆಗಿರಬಾರದು. ನಿನ್ನ ಮೇಲೆ ನಾನು ಯಾವ ದೋಷಾರೋಪಣೆಯನ್ನೂ ಹೊರಿಸುತ್ತಿಲ್ಲ. ನನಗೆ ನಿನ್ನ ಕೆಲಸದ ಬಗ್ಗೆ, ನಡತೆಯ ಬಗ್ಗೆ ಒಳ್ಳೆಯ ಅಭಿಪ್ರಾಯವಿದೆ. ಆದರೆ ನಿನ್ನ ಮೌಢ್ಯದಿಂದ ಏನಾದರೂ ಅಚಾತುರ್ಯ ನಡೆಯಬಹುದು. ಕಠಿಣ ಕ್ರಮ ನಮಗೆ ಇಷ್ಟವಿಲ್ಲ. ವಾರ್ಡನ್ಸ್ ಮತ್ತು ನಾನು ಹೇಳುವುದು ಇಷ್ಟೆ—'ನೀನು ಮೂರು ತಿಂಗಳಲ್ಲಿ ಓದು ಬರಹ ಕಲಿಯಬೇಕು. ಅಷ್ಟರಲ್ಲಿ ಕಲಿಯದಿದ್ದರೆ ನಿನ್ನನ್ನು ಕೆಲಸದಿಂದ ತೆಗೆಯಬೇಕಾಗುವುದು?

ಫೋರ್‌ಮನ್‌ಗೆ ಹೊಸ ವಿಕರ್‌ನ ಬಗ್ಗೆ ವಿಶ್ವಾಸವಿರಲಿಲ್ಲ. ಅವನು ಮೊದಲಿನಿಂದಲೂ ಹೇಳುತ್ತಿದ್ದ—ಸೇಂಟ್ ಪೀಟರ್ಸ್ ಚರ್ಚಿಗೆ ಅವನು ಸರಿಯಾದ ವ್ಯಕ್ತಿ ಅಲ್ಲ ಎಂದು. ಫೋರ್‌ಮನ್‌ಗೆ ಆತ್ಮ ವಿಶ್ವಾಸವಿತ್ತು; ತನ್ನ ಮೌಲ್ಯ ಏನೆಂದು ಅವನಿಗೆ ಗೊತ್ತಿತ್ತು.

"ನನಗೆ ಈ ವಯಸ್ಸಿನಲ್ಲಿ ಕಲಿಯುವುದು ಅಸಾಧ್ಯ ಅನಿಸುತ್ತದೆ. ವಯಸ್ಸಾದ ನಾಯಿಗೆ ಹೊಸ ತಂತ್ರಗಳನ್ನು ಹೇಳಿಕೊಡುವುದು ಸಾಧ್ಯವೇ? ನನ್ನ ಜಾಗಕ್ಕೆ ಸರಿಯಾದವನೊಬ್ಬನನ್ನು ತಾವು ನೇಮಿಸಿಕೊಂಡ ಕೂಡಲೇ ನಾನು ನನ್ನ ಕೆಲಸಕ್ಕೆ ರಾಜಿನಾಮೆ ಕೊಡುತ್ತೇನೆ."

ವಿಕರ್ ಮತ್ತು ವಾರ್ಡನ್ಸ್ ಹೊರಟು ಹೋದ ಕೂಡಲೇ ಚರ್ಚ್‌ನ ಬಾಗಿಲು ಮುಚ್ಚಿ ಬೀಗ ಹಾಕಿದ ಫೋರ್‌ಮನ್. ಅವನು 'ಅಹಂ'ಗಾದ ಪೆಟ್ಟಿನಿಂದ ಸ್ವಲ್ಪ ಅದರುತ್ತಿದ್ದ. ನಂತರ ವಸ್ತ್ರಾಲಯಕ್ಕೆ ಹಿಂತಿರುಗಿ ತನ್ನ ಗೌನನ್ನು ಗೂಟಕ್ಕೆ ನೇತು ಹಾಕಿ, ಕೋಟು ಹಾಕಿಕೊಂಡು, ಕೈಯಲ್ಲಿ ಹ್ಯಾಟ್ ಹಿಡಿದು ಚರ್ಚ್ ಬಿಟ್ಟ. ಅವನಿಗೆ ಏನು ಮಾಡಬೇಕೆಂದು ಹೊಳೆಯಲಿಲ್ಲ. ಸ್ವಲ್ಪ ಹಣವನ್ನೇನೋ ಅವನು ಉಳಿಸಿದ್ದ. ಉಳಿಸಿದ ಹಣದಿಂದ, ಜೀವನ ಪರ್ಯಂತ, ಏನೂ ಸಂಪಾದನೆ ಮಾಡದೆ ಸುಮ್ಮನೆ ಇರುವುದಕ್ಕೆ ಸಾಧ್ಯವಿರಲಿಲ್ಲ. ಇಂತಹ ಪರಿಸ್ಥಿತಿ ಬರಬಹುದೆಂದು ಅವನು ಕನಸು ಮನಸ್ಸಿನಲ್ಲಿ ಯೋಚಿಸಿದ್ದೇ ಇಲ್ಲ. ಸೇಂಟ್ ಪೀಟರ್ಸ್ ಚರ್ಚಿನ ದಂಡಧಾರಿ ಹುದ್ದೆ ಎಂದರೆ ರೋಮ್‌ನ ಪೋಪ್‌ನಂತೆ ಜೀವಾವಧಿ ಕೆಲಸ ಎಂದು ಅವನು ನಂಬಿದ್ದ.

ಫೋರ್‌ಮನ್ ಸೀದಾ ಮನೆಗೆ ಹೋಗಲಿಲ್ಲ. ಯೋಚನೆ ಮಾಡುತ್ತಾ ಆ ನೇರವಾದ ಉದ್ದನೆಯ ರಸ್ತೆಯಲ್ಲಿ, ಅಕ್ಕಪಕ್ಕದ ಅಂಗಡಿಗಳನ್ನು ನೋಡುತ್ತಾ ಹೋಗುತ್ತಿದ್ದ. ಅವನಿಗೆ ಒಂದು ಸಿಗರೇಟು ಸೇದುವ ಬಯಕೆಯಾಯಿತು. ಆದರೆ ಅವನೇನೂ ಸಿಗರೇಟಿನ ದಾಸನಾಗಿರಲಿಲ್ಲ. ಆಯಾಸವಾದಾಗ ಅಥವಾ ಬೇಸರವಾದಾಗ ಸಿಗರೇಟ್ ಅವನಿಗೆ ಸಾಂತ್ವನ ನೀಡುತ್ತಿತ್ತು. ಸಿಗರೇಟ್ ಕೊಳ್ಳಲು ಅಂಗಡಿ ನೋಡಿದ. ಆ ಉದ್ದನೆಯ ರಸ್ತೆಯ ಇಕ್ಕೆಲಗಳಲ್ಲೂ ವಿವಿಧ ರೀತಿಯ ಅಂಗಡಿಗಳಿದ್ದವು. ಆದರೆ ಒಂದಾದರೂ ಸಿಗರೇಟ್ ಮಾರುವ ಅಂಗಡಿ ಇರಲಿಲ್ಲ.

'ಇಲ್ಲೊಂದು ಸಿಗರೇಟ್, ಪೆಪ್ಪರ್‌ಮೆಂಟ್, ಚಾಕೋಲೇಟ್ ಮಾರುವ ಅಂಗಡಿ ಇದ್ದಿದ್ದರೆ, ಇಟ್ಟವನಿಗೆ ತುಂಬ ವ್ಯಾಪಾರ ಆಗುತ್ತಿತ್ತು' ಎಂದುಕೊಂಡ ಫೋರ್‌ಮನ್.

ಹೌದು, ಇದೊಂದು ಒಳ್ಳೆಯ ಆಲೋಚನೆ. ನಾವು ನಿರೀಕ್ಷಿಸದೆ ಇರುವಾಗ

ಕೆಲವು ಸಲ ಆಶ್ಚರ್ಯ ತರುವಂತಹ ವಿಷಯಗಳು ಮನಸ್ಸಿಗೆ ಹೊಳೆಯುತ್ತವೆ. ಆಲ್ಬರ್ಟ್ ಮನೆಗೆ ಹೋಗಿ ಹೆಂಡತಿ ಕೊಟ್ಟ ಟೀ ಕುಡಿದ. ಅವನು ಮಾತನಾಡದೆ ಇದ್ದುದನ್ನು ಕಂಡು, "ಏಕೆ, ಸುಮ್ಮನಿದ್ದೀರಿ?" ಎಂದಳು. "ನಾನು ಏನೋ ಯೋಚನೆ ಮಾಡುತ್ತಾ ಇದ್ದೇನೆ. ಸ್ವಲ್ಪ ಹೊತ್ತು ಮಾತನಾಡಿಸಬೇಡ."

ಮಾರನೇ ದಿನ ಫೋರ್‌ಮನ್ ಅದೇ ರಸ್ತೆಯಲ್ಲಿ ಅಡ್ಡಾಡುತ್ತಿದ್ದಾಗ ಅದೃಷ್ಟವಶಾತ್ ಅವನಿಗೆ ಖಾಲಿ ಇದ್ದ ಒಂದು ಮಳಿಗೆ ಕಾಣಿಸಿತು. ಇಪ್ಪತ್ತುನಾಲ್ಕು ಗಂಟೆಯೊಳಗೆ ಅವನು ಅದನ್ನು ಬಾಡಿಗೆಗೆ ತೆಗೆದುಕೊಂಡು ಒಂದು ತಿಂಗಳು ಕಳೆಯುವುದರೊಳಗೆ ಸೇಂಟ್ ಪೀಟರ್ಸ್ ಚರ್ಚಿನ ಹುದ್ದೆಗೆ ರಾಜಿನಾಮೆ ನೀಡಿದ. ಫೋರ್‌ಮನ್, ಅಂಗಡಿಯಲ್ಲಿ ಸಿಗರೇಟು, ಚುಟ್ಟಿ, ಹೊಗೆಸೊಪ್ಪು, ವೃತ್ತಪತ್ರಿಕೆಗಳ ವ್ಯಾಪಾರ ಆರಂಭಿಸಿದ. ಅವನ ಹೆಂಡತಿ ಚರ್ಚ್‌ನಲ್ಲಿ ದಂಡಧಾರಿಯ ಹುದ್ದೆ ಬಿಟ್ಟು ಸಣ್ಣ ಅಂಗಡಿ ತೆರೆದಿದ್ದು ಜೀವನದಲ್ಲಿ ಇಳಿಮುಖ ಎಂದು ಬಗೆದಳು.

ಫೋರ್‌ಮನ್‌ನ ಅಂಗಡಿಯಲ್ಲಿ ವ್ಯಾಪಾರ ಚೆನ್ನಾಗಿ ಕುದುರಿತು. ಒಂದು ವರ್ಷದಲ್ಲಿ ಅವನು ಇನ್ನೊಂದು ಅಂಗಡಿ ತೆರೆದು ಅದಕ್ಕೆ ಮ್ಯಾನೇಜರ್ ಒಬ್ಬನನ್ನು ನೇಮಿಸಿದ. ಎರಡು ಅಂಗಡಿ ನಿಭಾಯಿಸಲು ಸಾಧ್ಯವಾದರೆ ಒಂದು ಡಜನ್ ಅಂಗಡಿಗಳನ್ನು ನಿಭಾಯಿಸಬಹುದು ಎಂದು ಅವನಿಗೆ ಅನಿಸಿತು. ನಗರದ ಉದ್ದುದ್ದನೆಯ ರಸ್ತೆಯಲ್ಲಿ ಸಿಗರೇಟು ಮಾರುವ ಅಂಗಡಿ ಇಲ್ಲದೇ ಇರುವುದನ್ನು ಕಂಡಕೂಡಲೇ ಅಲ್ಲೊಂದು ಅಂಗಡಿ ಅವನು ತೆರೆಯುತ್ತಿದ್ದ. ಹತ್ತು ವರ್ಷದಲ್ಲಿ ಅವನು ಹತ್ತು ಅಂಗಡಿಗಳ ಯಜಮಾನನಾದ. ಪ್ರತಿ ಸೋಮವಾರ ಎಲ್ಲಾ ಅಂಗಡಿಗಳಿಗೂ ಹೋಗಿ, ಬರಬೇಕಾದ ಹಣ ವಸೂಲು ಮಾಡಿ, ಬ್ಯಾಂಕಿಗೆ ಕಟ್ಟುತ್ತಾ ಬಂದ.

ಒಂದು ದಿನ ಹಣ ಜಮಾ ಮಾಡಲು ಬ್ಯಾಂಕಿಗೆ ಹೋದಾಗ ಕ್ಯಾಷಿಯರ್ ಅವನಿಗೆ, 'ಮ್ಯಾನೇಜರ್ ನಿಮ್ಮನ್ನು ನೋಡಲು ಇಷ್ಟಪಡುತ್ತಾರೆ' ಎಂದು ತಿಳಿಸಿದರು.

ಫೋರ್‌ಮನ್ ಮ್ಯಾನೇಜರ್‌ರ ಕೊಠಡಿಗೆ ಹೋದಕೂಡಲೇ ಮ್ಯಾನೇಜರ್ ಕುರ್ಚಿಯಿಂದ ಎದ್ದು ಅವನ ಕೈ ಕುಲುಕಿ, "ಮಿಸ್ಟರ್ ಫೋರ್‌ಮನ್ ನಿಮ್ಮ ಉಳಿತಾಯ ಖಾತೆ ಅಕೌಂಟನಲ್ಲಿ ಎಷ್ಟು ಹಣ ಇದೆ ಗೊತ್ತಾ? ಮೂವತ್ತು ಸಾವಿರಕ್ಕೂ ಹೆಚ್ಚು. ಇಷ್ಟು ಭಾರಿ ಹಣವನ್ನು ಸುಮ್ಮನೆ ಬ್ಯಾಂಕಿನಲ್ಲಿಡುವುದಕ್ಕಿಂತ ಷೇರುಗಳನ್ನು ಕೊಂಡರೆ ಅನುಕೂಲ ಎನ್ನಿಸುತ್ತದೆ" ಎಂದರು.

"ಇಲ್ಲ, ಬ್ಯಾಂಕಿನಲ್ಲಿ ಹಣ ಕ್ಷೇಮ."

"ಹಣದ ಭದ್ರತೆ ಬಗ್ಗೆ ಯೋಚನೆ ಮಾಡಬೇಡಿ. ಒಳ್ಳೆಯ ಕಂಪನಿಗಳ ಷೇರನ್ನು ಖರೀದಿಸಿದರೆ ಆಯಿತು. ನಷ್ಟ ಆಗುವ ಸಂದರ್ಭಗಳೇ ಇರುವುದಿಲ್ಲ. ನಿಮಗೆ ಆತಂಕ ಬೇಡ. ಬ್ಯಾಂಕ್ ಕೊಡುವ ಬಡ್ಡಿಗಿಂತ ಜಾಸ್ತಿ ಬಂದರೆ ಸರಿತಾನೇ?"

ಫೋರ್‌ಮನ್‌ನ ಮುಖದಲ್ಲಿ ಅವನ ಮನಸ್ಸಿನಲ್ಲಾದ ಗೊಂದಲ ಕಾಣಿಸುತಿತ್ತು.

"ನನಗೆ ಸ್ಟಾಕ್ ಮತ್ತು ಷೇರ್ ಬಗ್ಗೆ ಏನೂ ಗೊತ್ತಿಲ್ಲ. ಎಲ್ಲಾ ನಿಮ್ಮ ಕೈಗೇ ಬಿಟ್ಟು ನಂಬಬೇಕಾಗುತ್ತದೆ."

"ನಾವು ನಿಮಗೆ ಎಲ್ಲಾ ಮಾಡಿಕೊಡುತ್ತೇವೆ. ಟ್ರಾನ್ಸ್‌ಫರ್ ಫಾರಂಗೆ ರುಜು ಮಾಡುವುದು ಮಾತ್ರ ನಿಮ್ಮ ಕೆಲಸ."

ಫೋರ್‌ಮನ್ ಅನುಮಾನಿಸುತ್ತಾ, "ಅದು ಸರಿ, ಆದರೆ ನಾನು ಯಾವುದಕ್ಕೆ ರುಜು ಮಾಡುತ್ತಿದ್ದೇನೆಂದು ಹೇಗೆ ತಿಳಿಯುವುದು?"

"ದಾಖಲೆ ಓದಿದರೆ ಆಯಿತು. ಕಣ್ಣು ಮುಚ್ಚಿ ರುಜು ಮಾಡುವುದುಬೇಡ."

ಫೋರ್‌ಮನ್ ನಿರಪಾಯ ನಗು ನಗುತ್ತಾ, "ನೀವು ಹೇಳುವುದು ಸರಿ. ಆದರೆ ನನಗೆ ಓದಲು ಬರುವುದಿಲ್ಲವಲ್ಲಾ. ರುಜು ಮಾತ್ರ ಮಾಡಬಲ್ಲೆ. ಅದನ್ನು ವ್ಯಾಪಾರ ಶುರುಮಾಡಿದ ಮೇಲೆ ಕಲಿತದ್ದು."

ಮ್ಯಾನೇಜರ್‌ಗೆ ಆದ ಆಶ್ಚರ್ಯ ಅಷ್ಟಿಷ್ಟಲ್ಲ. ಕುರ್ಚಿಯಿಂದ ಎದ್ದ ಮ್ಯಾನೇಜರ್, ಫೋರ್‌ಮನ್‌ನನ್ನೇ ನೋಡುತ್ತಾ "ಓದು ಬರಹ ಬಾರದೆ, ವ್ಯಾಪಾರ ಮಾಡಿ ಇಷ್ಟೊಂದು ಹಣ ಸಂಪಾದಿಸಿದ್ದೀರಾ? ಅಬ್ಬಾ, ನಿಮಗೆ ಓದು ಬರಹ ಬಂದಿದ್ದರೆ ಏನಾಗುತ್ತಿದ್ದಿರೋ!" ಎಂದರು.

"ಏನಾಗುತ್ತಿದ್ದೆ ಹೇಳುತ್ತೇನೆ ಕೇಳಿ," ಎಂದು ನಗುತ್ತಾ "ನಾನು ಸೇಂಟ್ ಪೀಟರ್ಸ್ ಚರ್ಚಿನಲ್ಲಿ ಶಾಶ್ವತವಾಗಿ ದಂಡಧಾರಿ ಕೆಲಸದಲ್ಲಿ ಉಳಿಯುತ್ತಿದ್ದೆ."



ನೀನೇನು ಕೊಡಬಲ್ಲೆ ಎನ್ನುವುದರ ಮೇಲೆ ನಿನ್ನ ಸುಖ ನಿಂತಿದೆಯೋ ಹೊರತು ನೀನೇನು ತೆಗೆದುಕೊಳ್ಳಬಲ್ಲೆ ಎನ್ನುವುದರ ಮೇಲಲ್ಲ.

ದುಃಖ ಎನ್ನುವುದು ತ್ಯಾಗ ಅಲ್ಲ. ಯಾವ ತ್ಯಾಗದಿಂದ ಮನುಷ್ಯನಗೆ ಆನಂದ ಲಭಿಸುತ್ತದೆಯೋ ಅದೇ ನಿಜವಾದ ತ್ಯಾಗ.

—ಗಾಂಧೀಜಿ

ಭಾಷೆ ಮತ್ತು ಸುಜ್ಞಾನ

ಸುಧಾಹರೀಶ್

ಅಕ್ಷರ ವಿಲ್ಲದೆ ಅಜ್ಞಾನ, ಅಕ್ಷರ ಕಲಿತರೆ ಸುಜ್ಞಾನ

ಈ ಮಾತು ನೂರಕ್ಕೆ ನೂರು ಅಂಶ ಸತ್ಯ. 'ತಮಸೋಮಾ ಜೋತಿರ್ಗಮಯಾ' ನಾವು ಅಜ್ಞಾನದ ಕತ್ತಲೆಯಿಂದ ಹೊರಬಂದು ಜ್ಞಾನದ ಬೆಳಗು ಪಥವನ್ನು ತುಳಿಯಬೇಕು.

'ವಿದ್ಯಾವಿಹೀನಂ ಪಶುಃ' ವಿದ್ಯೆ ಇಲ್ಲದಿರುವವನು ಪಶುವಿನ ಸಮಾನ. ಮೇಲಿನ ವಾಕ್ಯದಲ್ಲಿ, 'ವಿ' ಎಂಬ ಅಕ್ಷರ ವಿನಯ, ವಿಶ್ವಾಸದ ಪ್ರತೀಕ. ವಿದ್ಯೆಯಿಂದ ವಿನಯ. ವಿನಯದಿಂದ ಪ್ರೀತಿ, ಪ್ರೀತಿಯಿಂದ, ಸ್ನೇಹ. ಸ್ನೇಹದಿಂದ ಮನುಷ್ಯ ಸಮಾಜದಲ್ಲಿ ಒಟ್ಟುಗೂಡಿ ಕಲೆತು ಬಾಳಲು ಕಲಿಯುತ್ತಾನೆ.

ಆದುದರಿಂದ ಜ್ಞಾನದ ಹಾದಿಯತ್ತ ಸಾಗುವ ಎಂದರೆ, ವಿದ್ಯೆಯನ್ನು ಕಲಿಯುವ ಪಥದಲ್ಲಿ ಸಾಗುವ ಧ್ಯೇಯ ಎಲ್ಲರಲ್ಲೂ ಮೂಡಬೇಕು. ಕಲಿಯುವ ಆಸೆ ಧುಮ್ಮಿಕ್ಕಿದಂತೆ, ಕಲಿಸುವವರತ್ತ ದಾರಿ ತೋರುತ್ತದೆ.

ಇಂದು ಸಾಕ್ಷರತೆಯ ತೇರು. ಅಕ್ಷರ ಜ್ಞಾನದ ಸವಿಯನ್ನು 'ಹಳ್ಳಿಯಿಂದ ದಿಲ್ಲಿಯವರೆಗೆ' ಎಳೆಯುತ್ತಿರುವಲ್ಲಿ ಕಲಿಸುವವರಿಗೆ ಕೊರತೆ ಇಲ್ಲ. ಹಾಗಾಗಿ ಕಲಿಯುವವರು ತಾವು ಕಲಿಯುವ ಭಾಷೆಯನ್ನು ನಿರ್ಧರಿಸಿಕೊಳ್ಳಬೇಕಾಗುತ್ತದೆ. ನಮ್ಮ ಭಾರತ ಹಲವು ಭಾಷೆಗಳ ತವರು. ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ, ಒಂದೊಂದು ರಾಜ್ಯವೂ, ಗರಿಗೆದರಿ, ನಿಂತಿರುವ ಭಾಷೆಗಳ ಸಾಲು. ಅಸಂಖ್ಯಾತ ಭಾಷೆಗಳಿರುವ ನಮ್ಮ ದೇಶ ಪುಣ್ಯಭೂಮಿಯೇ ಸರಿ. ಒಂದೊಂದು ಭಾಷೆಯೂ, ಅದರ ಲಿಪಿಯೂ ಮಾನವನ ಜ್ಞಾನ ದೀವಿಗೆಯ ಕುರುಹು, ಸರಸ್ವತಿಯ ವರದಾನ. ಇಂಥ ದಿವ್ಯಜ್ಞಾನವಿಲ್ಲದಿದ್ದರೆ ಮಾನವ ಪ್ರಪಂಚದಲ್ಲಿ ಸಂಘಜೀವಿಯಾಗಿ ಬದುಕಲು ಸಾಧ್ಯವಿತ್ತೆ? ವ್ಯವಹರಿಸಲು ಸಾಧ್ಯವಿತ್ತೇ? ಭಾಷೆಯೆ ಮಾನವ ಸಂಸ್ಕೃತಿಯ ಮೊದಲ ಮೆಟ್ಟಿಲು.

ಭಾಷೆಗೆ, ಮತಭೇದವಿಲ್ಲ. "ನಿಷ್ಯೇಶ ಜಾಡ್ಯಾಪಹ" ಎಂದು, ಜಾತಿ ಮತವೆಂಬ, ಭೇದವನ್ನು ಕಳೆಯುವ, ಕೊಳೆಯನ್ನು ತೊಳೆಯುವ ಸಿರಿದೇವತೆ ಭಾಷೆ. "ಭಾಷೆ ಬಲ್ಲವನು ದೇಶ ಆಳಬಲ್ಲ." ಎಂಬ ಗಾದೆ ಪ್ರಚಲಿತವಾದುದು. ಭಾಷೆಗಳ ಬಗ್ಗೆ ನಾವು ಯಾವುದೇ ಸಂಕೀರ್ಣತೆಯನ್ನು ಬೆಳೆಸಿಕೊಳ್ಳಬಾರದು.

‘ಮಾತೃ ದೇವೋ ಭವ’ ಎಂಬ ವಾಕ್ಯದಂತೆ, ಮೊದಲು ಅಕ್ಷರಜ್ಞಾನ, ಭಾಷಾಜ್ಞಾನ ಮಾತೃಭಾಷೆಯಲ್ಲಿಯೇ ಆಗಬೇಕು. ಭಾಷೆ ಕಲಿಯುವಾಗ, ಅದರ ಸಂಪೂರ್ಣ ತಿರುಳನ್ನು ಅರಿಯಬೇಕು. ಉದಾಹರಣೆಗೆ ಕನ್ನಡ ಭಾಷೆಯಲ್ಲಿ ಅಕ್ಷರ ಮಾಲೆಯ ಸ್ವರ, ವ್ಯಂಜನಗಳನ್ನು, ಮನದಟ್ಟುಮಾಡಿಕೊಳ್ಳಬೇಕು ಹಾಗೂ ಅದರ ಸ್ಪಷ್ಟ ಉಚ್ಚಾರಣೆಗಳನ್ನು, ಅದರ ಆಕಾರಗಳನ್ನು ಮನದಟ್ಟು ಮಾಡಿಕೊಳ್ಳಬೇಕು.

ಭಾಷೆಯನ್ನು ಬರೆಯುವಾಗ ಅದರ ಪೂರ್ಣ ಸ್ವರೂಪ, ನುಡಿಯುವಾಗ ಅದರ ಸ್ವಚ್ಛ ಉಚ್ಚಾರಣೆಗಳು ಭಾಷೆಗೆ ಮೆರುಗು ನೀಡಿ, ಅದರ ಸೌಂದರ್ಯವನ್ನು ವರ್ಧಿಸುತ್ತವೆ.

ಉದಾಹರಣೆಗೆ: ಹತ್ತು ಎಂದರೆ ಅಂಕಿ. ಅತ್ತು ಎಂದರೆ ಕಣ್ಣೀರು ಹಾಕಿ ಎಂದರ್ಥ.

ಹೆಮ್ಮೆ ಎಂದರೆ ಅಭಿಮಾನ, ಎಮ್ಮೆ ಎಂದರೆ ಪ್ರಾಣಿ. ಹೀಗೆ, ಹಾಳಾದಳು ಎಂಬುದು ಆಳಾದಳು, ಏಳು ಎಂಬುದು ಹೇಳು, ಎಂದು. ಉಚ್ಚರಿಸಲ್ಪಟ್ಟಾಗ ಇಂಥ ಕಿಂಚಿತ್ ಉಚ್ಚಾರಣೆಯ ಹಾಗೂ ಬರವಣಿಗೆಯಲ್ಲಿಯ ದೋಷದಿಂದ ಆಯಾ ಪದಗಳ ಅರ್ಥ, ಬದಲಾಗುವ ಪ್ರಸಂಗ ಉದ್ಭವಿಸುತ್ತದೆ.

ಗೌರಿಯ ಹೆಮ್ಮೆ ಸತ್ತಾಗ, ಅವಳು ಹಾಕಿದ್ದ ಹಣವೆಲ್ಲಾ ಅಳಾಗಿ ಅವಳು ಅತ್ತು ಸಾವಿರ ಕಳೆದುಕೊಂಡು ಆಳಾದಳು.

ಮೇಲಿನ ಉದಾಹರಣೆಯಲ್ಲಿ ಎಮ್ಮೆ ಹೆಮ್ಮೆಯಾಗಿ, ಹಾಳಾಗಿ ಎಂಬುದು ಆಳಾಗಿ, ಹತ್ತು ಎಂಬುದು ಅತ್ತು ಆಗಿ, ಹಾಳಾದಳು ಎಂಬುದು ಆಳಾದಳು. ಎಂದು ಅರ್ಥ ಬದಲಾವಣೆಯ ವಿರೂಪವನ್ನೇ ಹೊಂದಿದೆ.

ಇಂಥಹ ಲೋಪಗಳು, ಪದದ, ಸುಂದರ ಆಕಾರ ಹಾಗೂ ಅರ್ಥವನ್ನು, ಕೆಡಿಸಿ, ವಿರೂಪವಾಡುತ್ತದೆ.

ಬೆಳೆಯುವ ಸಸಿ ಮೊಳಕೆಯಲ್ಲಿ ಎಂಬಂತೆ ಭಾಷೆಯನ್ನು ಕಲಿಕೆಯ ಪ್ರಾರಂಭದಲ್ಲೇ. ಕಲಿಯುವವರೂ ಕಲಿಸುವವರೂ ಎಚ್ಚರ ವಹಿಸಬೇಕು.

ಭಾಷೆ ಕಲಿಸುವವರು, ಕಲಿಯುವವರು ಈ ಮುಂದಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಭಾಷೆಯ ಸಂಪೂರ್ಣ ಸಾಕ್ಷಾತ್ಕಾರವನ್ನು ಪಡೆಯಬಹುದು:

೧. ವರ್ಣಮಾಲೆಯ ಅಕ್ಷರಗಳನ್ನು ಕಲಿಸುವಾಗ ಅದರ ರೂಪರೇಶೆಗಳನ್ನು ಕಲಿಯುವವರು ಬರೆಯುವಾಗ ಸಂಭವಿಸಬಹುದಾದ ತಪ್ಪುಗಳನ್ನು ಸರಿಪಡಿಸುವುದು.

೨. ವರ್ಣಮಾಲೆಯ ಅಕ್ಷರಗಳನ್ನು ಉಚ್ಚರಿಸುವಾಗ, ಉದ್ಭವಿಸುವ ತಪ್ಪುಗಳ ಬಗ್ಗೆ ಗಮನ ನೀಡುವುದು.

೩. ಪದಗಳಲ್ಲಿ ಹಾಗೂ ವಾಕ್ಯಗಳಲ್ಲಿ ಸಂಭವಿಸಬಹುದಾದಂಥಹ ಅರ್ಥಗಳ ತಪ್ಪನ್ನು ನಿಘಂಟುಗಳ ಮೂಲಕ ಸರಿಯಾದ ಅರ್ಥ ಮತ್ತು ಉಚ್ಚಾರಣೆಯ ಬಗ್ಗೆ ತಿಳಿಯ ಹೇಳಿ ಸರಿಪಡಿಸುವುದು.

೪. ವಿವಿಧ ಪ್ರಯೋಗಗಳ ಮೂಲಕ ಭಾಷೆಯಲ್ಲಿ ಸಂಭವಿಸಬಹುದಾದಂತಹ ವಾಕ್ ಹಾಗೂ ಲಿಖಿತ ಮೂಲದ ತಪ್ಪನ್ನು ತಿದ್ದುವುದು. ಉದಾಹರಣೆಗೆ: ತುಟಿಗಳ ಚಲನೆ.

೫. ಭಾಷೆ ಕಲಿಯುವಾಗ ಈ ಮೇಲಿನ ಅಂಶಗಳ, ತಿಳುವಳಿಕೆಯ ಮೂಲಕ, ವ್ಯವಹಾರಗಳ ಮೂಲಕ, ವ್ಯವಹರಿಸುವವರ ಮುಖದ ಭಾವ ಹಾಗೂ ಉಚ್ಚಾರಣೆಯನ್ನು ಅನುಸರಿಸಿ ಕಲಿಯುವ ಭಾಷೆಯ ಮೇಲೆ ಸಂಪೂರ್ಣ ಹಿಡಿತವನ್ನು ಸಂಪಾದಿಸಬಹುದು.

ಭಾಷೆಯ ಚೆನ್ನುಡಿಯ ಸ್ವಾದವನ್ನು ಆಸ್ವಾದಿಸಿ, ಅದರ ಅಂತರ ಹಾಗೂ ಬಾಹ್ಯ ಸೌಂದರ್ಯದ ಮೆರುಗನ್ನು ಲಿಖಿತ ಕಲೆಯ ಮೂಲಕ ರೂಪಿಸುವುದರ ಶಿಲ್ಪಿಯಾದಾಗ ಭಾಷೆಯ ಸುಂದರ ಸ್ವರೂಪ ನೂರ್ಮಡಿಯಾಗಿ, ಪ್ರಕಟವಾಗಿ ಪ್ರಕಾಶಿಸಲು ಸಾಧ್ಯ.



ವ್ಯಕ್ತಿಯಲ್ಲಿರುವ ಉತ್ತಮ ಅಂಶವನ್ನು ಬೆಳಕಿಗೆ ತರುವುದೇ ನಿಜವಾದ ಶಿಕ್ಷಣ. ಮಾನವತ್ವದ ಪುಸ್ತಕಕ್ಕಿಂತ ಉತ್ತಮ ಪುಸ್ತಕ ಯಾವುದಿದೆ?

ಸತ್ಯ ಒಂದು ದೊಡ್ಡ ಮರ ಇದ್ದಂತೆ. ಅದರ ಸ್ನೇಹ ಮಾಡಿದಷ್ಟು ಫಲಗಳು ಹೆಚ್ಚುತ್ತವೆ.

ಇಡೀ ಜೀವನ ಶುದಿಗಾಣದ ಒಂದು ಪ್ರಯೋಗಶಾಲೆ.

—ಗಾಂಧೀಜಿ

ಮಾದಕ ವಸ್ತುಗಳ ಮಾಯಾಜಾಲ

ಡಾ|| ಕರವೀರಪ್ರಭು ಕ್ಯಾಲಕೊಂಡ

ಮಾನವ ಆನಂದದ ಆರಾಧಕ ಮತ್ತು ಅನ್ವೇಷಕ. ಆನಂದದ ಪರಮಾವಧಿ ತಲುಪುವ ತವಕ. ತಾನು ಸಾಧಿಸುವ ಪ್ರತಿಯೊಂದು ಕಾರ್ಯವೂ ಆನಂದ ಪಡೆಯುವುದಕ್ಕಾಗಿಯೇ ಎಂಬ ಭಾವುಕ. ಎಷ್ಟೋ ಆನಂದ ದಾಯಿಗಳನ್ನು ಶೋಧಿಸಿಯೂ ತೃಪ್ತನಾಗದ ಆತ ಕೊನೆಗೊಂದು ವಸ್ತುವನ್ನು ಸಂಪಾದಿಸಿಯೇ ಬಿಟ್ಟ; ಮಾದಕ ವಸ್ತು. ಅಂದು ಅದು ಆತನಿಗೆ ಹೊಸ ಸ್ವರ್ಗೀಯ ಅನುಭವವನ್ನೇ ತೆರೆದಿಟ್ಟಿತು. ಸುಖ, ಶಾಂತಿ, ಆನಂದ ಮಾನವ ಜೀವನದ ಪ್ರಬಲ ಪ್ರೇರಕಗಳು. ಸುಖಪಡುವುದು ಮನುಷ್ಯನ ಹುಟ್ಟಾಸೆ ಎಂದಿದ್ದಾನೆ ಪ್ರಸಿದ್ಧ ಮನೋವಿಜ್ಞಾನಿ ಸಿಗ್ಮಂಡ್ ಫ್ರಾಯ್ಡ್.

ದೈನಂದಿನ ಜೀವನದ ಕಷ್ಟ ನಷ್ಟಗಳ, ನೋವು ನಿರಾಶೆಗಳ, ಏಕಾಕಿತನ, ಅನಾಥ ಪ್ರಜ್ಞೆ, ಕೈಗೆಟುಕದ ಪ್ರೀತಿಯ ಮರೀಚಿಕೆ, ಹುಸಿಯಾಗುತ್ತಿರುವ ಮಾನವೀಯ ಮೌಲ್ಯಗಳ ಸಂಬಂಧಗಳ ಬಂಧನಗಳಿಂದ ಬಿಡುಗಡೆಯಾಗಿ ದೂರ ಬಹುದೂರ ಸಾಗಲು, ಅರೆಗಳಿಗೆ ಮರೆಯಲು, ಮರೆತು ಮೆರೆದಾಡಲು, 'ಮುಕ್ತತೆ'ಯ ಅನುಭವ ಪಡೆಯಲು, ಜಗತ್ತಿನ ಸಂಬಂಧ ಸಡಿಲಿಸಿಕೊಂಡು ಸೀಮೋಲ್ಲಂಘನ ಮಾಡಿ, ಶೂನ್ಯ ಸ್ಥಿತಿಯಲ್ಲಿ ಸಂತೋಷದಿಂದ ಸಮಯ ಕಳೆಯಲು ಮಾದಕ ವಸ್ತುಗಳ ಸೇವೆಯಲ್ಲಿ ಸಿಕ್ಕು ಶರಣಾಗತರಾಗುವರು. ವಂಚನೆಯಿಲ್ಲದ, ಜಾತಿ ಭೇದಗಳಿಲ್ಲದ, ಮೇಲುಕೀಳುಗಳಿಲ್ಲದ ಯಾವುದೋ ಸ್ವಯಂಕೃತ ಸೆರೆಮನೆಯಲ್ಲಿ ಸಿಧಾನ ಸಾವಿನ ಸುಳಿಯಲ್ಲಿ ಗಿರಕಿ ಹೊಡೆಯುವರು. ಹೊರಬರಲು ಹಾದಿಕಾಣದೆ ಹೊರಳಾಡುವರು. ವಿಲಿವಿಲಿ ಒದ್ದಾಡುವರು ಅಮಲಿನ ಅಲ್ಪ ಸುಖಕ್ಕೆ ಮರುಳಾಗಿ ಜೀವನ ಪರ್ಯಂತ ಗೋಳಾಕಾರದ ಗೋಳವಲ್ಲಿ ಗೋಳಾಡುವರು.

ಮುತ್ತಿನ ಹಿರಿಯುಂಡವಗೆ ಉರಿಯು
ಮೇಲಾಡುಕುವಗೆ
ಹರಿಯುವ ಹಾವ ಪರನಾರಿ ಪಡಿದಂಗೆ
ಮರಣದ ನೆರಳು ಸರ್ವಜ್ಞ

ಇತಿಹಾಸ

ಪ್ರಾಚೀನ ಶೋಧ ಶಾಸ್ತ್ರದ ಪ್ರಕಾರ ಮತ್ತಿನ ಔಷಧಿಗಳಿಗೆ ಕ್ರಿ.ಪೂ. ೪೦೦೦ ವರ್ಷಗಳಷ್ಟು ದೀರ್ಘ ಇತಿಹಾಸವಿದೆ. ಸ್ವಿಸ್ ಸರೋವರದ ಬಳಿ ವಾಸಿಸುತ್ತಿದ್ದ ಶಿಲಾಯುಗದ ಜನರು ಪೋಪ್ಪಿ ಸಸ್ಯಗಳನ್ನು ಬೆಳೆಯುತ್ತಿದ್ದರು. ಈ ಸಸ್ಯ ಸುರಿಸುವ ಹಾಲಿಗೆ ಮತ್ತುಬರಿಸುವ ಗುಣವುಂಟು

ಎಂದು ಅವರು ಕಂಡುಕೊಂಡಿದ್ದರು. ಹೀಗೆ ಅವರು ಬೇಸರ ಕಳೆಯಲು ಮತ್ತು ಖುಷಿಯ ಕನಸು ಕಾಣಲು ಪೋಪ್ಪಿ ಸಸ್ಯದ ಹಾಲ್ರಸ ಕುಡಿಯುತ್ತಿದ್ದರು.

ಹಿಂದೆ ಪಾಶ್ಚಾತ್ಯ ದೇಶಗಳ ವೈದ್ಯರು ಅಫೀಮು ರಸವನ್ನು ನೋವು ನಿವಾರಕವಾಗಿ ಉಪಯೋಗಿಸುತ್ತಿದ್ದರು. ಈ ರಸಕ್ಕೆ 'ನೆಟ್ಲ' ಗಿಡದ ಬೀಜಗಳನ್ನು ಸೇರಿಸಿ ಅದರ ಅಮಲಿನ ಗುಣವನ್ನು ಹೆಚ್ಚಿಸುತ್ತಿದ್ದರು. "೧೬ನೇ ಶತಮಾನದಲ್ಲಿ ಅಫೀಮುಕೊಳ್ಳದ ವ್ಯಕ್ತಿಯೇ ಇರಲಿಲ್ಲ. ಪ್ರತಿಯೊಬ್ಬನೂ ತನ್ನಲ್ಲಿಯ ಕೊನೆಯ ಪೆನ್ನಿ ಇರುವವರೆಗೂ ಇದಕ್ಕಾಗಿ ಹಾತೊರೆಯುತ್ತಿದ್ದ. ಯುದ್ಧವೇ ಇರಲಿ, ಶಾಂತಿಯೇ ಇರಲಿ ಈ ಮತ್ತಿನ ಪದಾರ್ಥ ಪ್ರತಿಯೊಬ್ಬನಲ್ಲಿಯೂ ಕೊನೆಯ ಉಸುರಿನವರೆಗೆ ಜೊತೆಯಲ್ಲಿರುತ್ತಿದ್ದವು" ಎಂದಿದ್ದಾನೆ ಫ್ರೆಂಚ್ ನ್ಯಾಚುರಾಲಿಸ್ಟ್ ಬೆಲೋನ್.

೧೯ನೇ ಶತಮಾನದಲ್ಲಿ ಇವುಗಳ ಪ್ರಭಾವ ಎಷ್ಟಿತ್ತು? ಲಭ್ಯವಿರುವ ಸಾಹಿತ್ಯ ಇದಕ್ಕೆ ಪುರಾವೆಗಳನ್ನು ಒದಗಿಸುತ್ತದೆ. ಅಂದು ಬುದ್ಧಿಜೀವಿಗಳು ಎನಿಸಿಕೊಂಡವರೆಲ್ಲರೂ ಅಫೀಮು ದಾಸರಾಗಿದ್ದರು. ತಮ್ಮ ಬುದ್ಧಿಶಕ್ತಿಯನ್ನು ಜಾಗೃತವಾಗಿಡಲು ಅವರಿಗದು ಬೇಕೆಬೇಕಿತ್ತು. ಅವರು ತಾವಷ್ಟೇ ಅದನ್ನು ಸೇವಿಸುತ್ತಿರಲಿಲ್ಲ. ಸಹೋದ್ಯೋಗಿಗಳಿಗೂ, ಸ್ನೇಹಿತರಿಗೂ ಇದರ ರುಚಿಯುಣಿಸಿದರು. ಯೂರೋಪ್ ಮತ್ತು ಅಮೇರಿಕಾದ ಬುದ್ಧಿಜೀವಿಗಳಾದ ಥೋಮಸ್ ಡಿ.ವಿನ್ಸಿ, ಬಾಡಲೇರಿ, ವಿಲಿಯಂ ಬ್ಲೇರ್, ಫ್ರಾಯ್ಡ್ ಮತ್ತು ಟೇಲರ್ ಇವರೆಲ್ಲ ಮಾದಕ ವಸ್ತುಗಳನ್ನು ಸೇವಿಸಿ ಅನಂತರದ ಅನುಭವಗಳನ್ನು ಬರೆದಿದ್ದಾರೆ.

ಅರಬರು ಇದರ ರುಚಿಯನ್ನು ಭಾರತೀಯರಿಗೆ ಮತ್ತು ಪರ್ಶಿಯನ್ನರಿಗೆ ಹಂಚಿದರು ಎನ್ನಲಾಗಿದೆ. ಮತ್ತಿನ ವಸ್ತುಗಳನ್ನು ಅವರು ಯುದ್ಧದ ಸಮಯದಲ್ಲಿ ಬಳಸುವಂತೆ ಪ್ರೇರಿಸಿದರು. ಸೈನಿಕರಿಗೆ ಸ್ಫೂರ್ತಿಯ ಸೆಲೆಯಾಗಿ, ಧೈರ್ಯ ತುಂಬುವ ವಸ್ತುವಾಗಿ ಇವು ಬಳಸಲ್ಪಟ್ಟವು. ಈ ಅಭ್ಯಾಸ ಮುಂದೆ ಬಲವಾಯಿತು. ಯುದ್ಧಕಾಲದಲ್ಲಿ ಇವುಗಳ ಬಳಕೆ ಅನಿವಾರ್ಯವೆನ್ನಿಸಿತು. ಮಾದಕ ವಸ್ತು ಸೇವಿಸಿದ ಬಳಿಕ ಯಾವುದೇ ಗಾಯವಾದರೂ ಆ ವ್ಯಕ್ತಿಗೆ ನೋವಾಗುತ್ತಿರಲಿಲ್ಲ. ಆದರೆ ಕೆಲಸ ಕಾರ್ಯಗಳಲ್ಲಿ ಉತ್ಸಾಹವೇನೂ ಕಮ್ಮಿಯಾಗಲಿಲ್ಲ. ಬರುಬರುತ್ತ ತಮ್ಮ ವಿಶಾಲ ಬಾಹುಬಂಧನದಲ್ಲಿ ಉಳಿದವರನ್ನು ಬಂಧಿಸದೇ ಬಿಡಲಿಲ್ಲ.

ಮಾದಕ ವಸ್ತುಗಳ ಸೇವನೆ ಭಾರತಕ್ಕೆ ಹೊಸದೇನೂ ಅಲ್ಲ. ಸಾಧು ಸಂತರು ಗಾಂಜಾ ಹೊಡೆದು, ಕಳ್ಳುಕುಡಿದು ಆತ್ಮ-ಪರಮಾತ್ಮನ ನಡುವಿನ ಸಂಬಂಧಗಳ ಬಗ್ಗೆ ಮಾತಾಡುತ್ತಿದ್ದ ದೇಶ ಇದು. ಇಂದಿಗೂ ಕೂಡ ಮನಸ್ಸಿನ ಏಕಾಗ್ರತೆಗಾಗಿ ಕೆಲವು ಆಧ್ಯಾತ್ಮವಾದಿಗಳು ಗಾಂಜಾದಂಥ ಮತ್ತಿನ ವಸ್ತುಗಳ ಸೇವನೆ ಮಾಡುತ್ತಾರೆ; ಆಧ್ಯಾತ್ಮವಾದಿಗಳ ಸೇವನೆಗೆ ಮಾತ್ರ ಸೀಮಿತವಾಗಿದ್ದ ಮಾದಕ ವಸ್ತುಗಳು, ಶಾಲಾ ಕಾಲೇಜುಗಳಂಥ ಶೈಕ್ಷಣಿಕ ಕೇಂದ್ರಗಳಿಗೆ ಲಗ್ಗೆ ಹಾಕಿ ಇಡೀ ಸಮಾಜದ ಆರೋಗ್ಯಕ್ಕೆ ಭಾರೀ ದೊಡ್ಡ ಸವಾಲಾಗಿರುವುದು ಬಲು ಅಪಾಯಕಾರಿ ಬೆಳವಣಿಗೆ.

ಮಾದಕ ವಸ್ತುಗಳ ಸೇವನೆ ಈಗ ವಿರಾಟರೂಪ ತಾಳಿ ವಿಶ್ವವ್ಯಾಪ್ತಿಯಾಗಿದೆ. ವಿದ್ಯಾರ್ಥಿ ಸಮುದಾಯದಲ್ಲಂತೂ ಮಾದಕ

ವಸ್ತುಗಳ ಸೇವನೆ ದಿನದಿಂದ ದಿನಕ್ಕೆ ಅಪಾಯಕಾರಿಯಾದ ರೀತಿಯಲ್ಲಿ ಅಪರಿಮಿತವಾಗಿ ಹೆಚ್ಚುತ್ತಲಿದೆ. ಕಳೆದವರ್ಷ ಮುಂಬೈ ಕಾಲೇಜು ವಿದ್ಯಾರ್ಥಿಗಳನ್ನು ವೈದ್ಯಕೀಯ ಪರೀಕ್ಷೆಗೊಳಪಡಿಸಿದಾಗ ಪ್ರತಿಶತ ೩೫ ರಿಂದ ೪೦ ರಷ್ಟು ವಿದ್ಯಾರ್ಥಿಗಳು ಪ್ರತಿನಿತ್ಯ ಒಂದಲ್ಲ ಒಂದು ಮಾದಕ ವಸ್ತುಗಳ ಅಡಿಯಾಳಾಗಿರುವುದು ಬೆಳಕಿಗೆ ಬಂತು. ಭಯ ಹುಟ್ಟಿಸಿತು. ಕೆಲವು ತಿಂಗಳ ಹಿಂದೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನಡೆಸಿದ ಸಮೀಕ್ಷೆಯೊಂದರ ಪ್ರಕಾರ ಪ್ರತಿಶತ ೨೩ ರಷ್ಟು ವಿದ್ಯಾರ್ಥಿಗಳು ಮಾದಕ ವಸ್ತುಗಳನ್ನು ಸೇವಿಸುತ್ತಾರೆಂಬುದು ದೃಢವಾಯಿತು. ಬಹುತೇಕ ವಿದ್ಯಾರ್ಥಿಗಳು ಮಾದಕ ವಸ್ತುಗಳ ಸೇವನೆಯನ್ನು ತಮ್ಮ ದಿನನಿತ್ಯದ ಬದುಕಿನ ಅವಿಭಾಜ್ಯ ಅಂಗವಾಗಿ ಮಾಡಿಕೊಂಡಿದ್ದಾರೆ. ಕುತೂಹಲಕ್ಕೆ, ಸುಖದ ಅಮಲಿನ ಆವಿಷಕ್ಕೆ ಒಳಗಾಗಿ ಅಪಾಯದ ಅರಿವು ಆಗುವ ವೇಳೆಗೆ ಆಕ್ಟೋಪಸ್ ಹಿಡಿತಕ್ಕೆ ಸಿಕ್ಕಿ ಜರ್ಜರಿತರಾಗಿರುತ್ತಾರೆ. ಮೋಜಿಗಾಗಿ ಕಲಿತದ್ದು ಜೀವನದ ಕೊನೆಯ ಮಜಲನ್ನು ಮುಟ್ಟುವವರೆಗೂ ಅಂಟಿಕೊಂಡು ಬಿಡುತ್ತದೆ. ವಿದ್ಯಾರ್ಥಿಸಮುದಾಯದಲ್ಲಿ ಅಪಾಯಕರ ರೀತಿಯಲ್ಲಿ ಹೆಚ್ಚುತ್ತಿರುವ ಈ ಅಮಲು ಪದಾರ್ಥಗಳ ಸೇವನೆಯ ಸಮಸ್ಯೆ ಕೇವಲ ಸಾಮಾಜಿಕ ಮತ್ತು ಆರೋಗ್ಯದ ಸಮಸ್ಯೆ ಮಾತ್ರವಲ್ಲ. ಒಂದು ದೇಶದ ಯುವ ಜನಾಂಗ ಎದುರಿಸುತ್ತಿರುವ ಭೀಕರ ಸಮಸ್ಯೆ ಕೂಡ. ಆ ದೇಶದ ಯುವಕರ ಮಾನಸಿಕ ಗೊಂದಲದ, ಅಸ್ಥಿರ ಮನಸ್ಸಿನ ಪ್ರತೀಕ ಕೂಡ.

ಚಟಾಧೀನರಾಗುವವರು ಯಾರು?

"ಕಲಿತ ಚಟಕ್ಕೆ ಕಲ್ಲು ಹಾಕಿದ್ರೂ ಬಿಡುವುದಿಲ್ಲ" ಎಂಬುದು ಮತ್ತುಕಾರಕಗಳ ವಿಷಯದಲ್ಲಂತೂ ಸತ್ಯ. ಬಹಳ ಮಂದಿ ಆಗೊಮ್ಮೆ ಈಗೊಮ್ಮೆ ಮೋಜಿಗಾಗಿ, ಕುತೂಹಲಕ್ಕಾಗಿ, ಖುಷಿಗಾಗಿ ಮಾದಕ ವಸ್ತುಗಳನ್ನು ಸೇವಿಸುತ್ತಾರೆ. ಕೆಲವರು ಅದರ ದಾಸಾನುದಾಸರಾಗುತ್ತಾರೆ. ಮಾದಕ ವಸ್ತುಗಳ ಮನಮೋಹಕ ಮಾಯಾಜಾಲದಲ್ಲಿ ವ್ಯಾಮೋಹಕ್ಕೆ ಬಲಿಯಾಗಿ ಚಟಾಧೀನರಾಗುವವರು ಯಾರು? ಅವರ ಸಾಮಾನ್ಯ ಲಕ್ಷಣಗಳೇನು? ಅವರಲ್ಲಿ ಏನು ಕೊರತೆ ಇರುತ್ತದೆ. ಅವನ್ನು ಮೊದಲೇ ಗಮನಿಸಿ, ಎಚ್ಚರವಹಿಸಿ ಅವರು ಚಟಕ್ಕೆ ಬೀಳದಂತೆ ಮಾಡಲು ಸಾಧ್ಯವೇ ಎಂಬ ಪ್ರಶ್ನೆಗಳು ಸಹಜವಾಗಿ ಉದ್ಭವಿಸುತ್ತವೆ. ಚಟಕ್ಕೆ ತುತ್ತಾಗುವವರನ್ನು ಮುಖ್ಯವಾಗಿ ಮೂರು ಗುಂಪಾಗಿ ವಿಂಗಡಿಸಬಹುದು:

೧. ಅಸಹಾಯಕರು ಮತ್ತು ದುಃಖಿತರು
೨. ಮಾನಸಿಕ ಅಸ್ವಸ್ಥರು
೩. ನ್ಯೂನವ್ಯಕ್ತಿತ್ವದವರು

ಅಸಹಾಯಕರು ಮತ್ತು ದುಃಖಿತರು

ಕೌಟುಂಬಿಕ ಕಾರಣಗಳು, ವ್ಯಕ್ತಿಗಳ ನಡುವಿನ ಮನಸ್ತಾಪಗಳು, ಹಲವು ಬಗೆಯ ನೋವು, ನಿರಾಶೆಗಳು, ಹಣಕಾಸಿನ ಮುಗ್ಗಟ್ಟು, ಉದ್ಯೋಗದಲ್ಲಿನ ಸಮಸ್ಯೆಗಳು, ಅತೃಪ್ತಿ, ಲೈಂಗಿಕ ಸಮಸ್ಯೆಗಳು ಇತ್ಯಾದಿ ನಾನಾ ಬಗೆಯ ಕಾರಣಗಳಿಂದ ದುಃಖಿತರಾಗುವ, ಅಸಹಾಯಕರಾಗುವ ಜನ ಮಾದಕ ವಸ್ತುಗಳ ಮರುಳು

ಮಾಡುವ ಮೋಡಿಗೆ, ಮಾಯಾಜಾಲಕ್ಕೆ ಸುಲಭವಾಗಿ ಸೋತು ತಮ್ಮನ್ನು ತಾವೇ ಅವುಗಳಿಗೆ ಅರ್ಪಿಸಿಕೊಳ್ಳುತ್ತಾರೆ. ಈ ಮಾದಕ ವಸ್ತುಗಳು ಉಂಟುಮಾಡುವ ಸುಖದ ಭ್ರಮೆಯಲ್ಲಿ ತಮ್ಮ ನೋವು, ದುಃಖವನ್ನು ಮರೆಯಲು ವಿಫಲಪ್ರಯತ್ನ ಮಾಡುತ್ತಾರೆ. ದುಃಖವಾದಾಗ ಮತ್ತು ದುಃಖವಾದೀತು ಎಂಬ ನಿರೀಕ್ಷೆ ಇರುವಾಗಲೆಲ್ಲ ಮಾದಕವಸ್ತುಗಳನ್ನು ಸೇವಿಸುತ್ತಾರೆ. ಚಟವನ್ನು ಬೆಳೆಸಿಕೊಳ್ಳುತ್ತಾರೆ. ದಾಸಾನುದಾಸರಾಗುತ್ತಾರೆ. ಅವು ನಿರ್ವಿಸನ ವೃತ್ತದಲ್ಲಿ ಗಿರಕಿ ಹೊಡೆಯುತ್ತಾರೆ.

ಮಾನಸಿಕ ಅಸ್ವಸ್ಥರು

ವಿವಿಧ ಮಾನಸಿಕ ಕಾಯಿಲೆಗಳಾದ ಮೇನಿಯಾ, ಒಳಜನ್ಯ ಖಿನ್ನತೆ ಸಿಜೋಫ್ರೆನಿಯಾ, ಅಂಗದೋಷದ ಚಿತ್ತವಿಕಲತೆ, ಮತಿಹೀನಸ್ಥಿತಿಯಲ್ಲಿ ರೋಗಿ ತನ್ನ ವಿವೇಚನೆ ಕಳೆದುಕೊಂಡು, ಕಾಯಿಲೆಯು ಉಂಟುಮಾಡುವ ಭಯಾನಕ ಭ್ರಮೆಗಳಿಂದ ದೂರವಾಗಲು ಮತ್ತಿನ ವಸ್ತುಗಳ ಮೊರೆ ಹೋಗಬಹುದು. ತನ್ನ ನಡವಳಿಕೆ, ನಿರ್ಧಾರ ಕೈಕೊಳ್ಳುವ ಶಕ್ತಿಯ ಮೇಲೆ ಹತೋಟಿ ಕಳೆದುಕೊಂಡು ಅನಿಯಂತ್ರಿತವಾಗಿ ಸೇವಿಸ ತೊಡಗುತ್ತಾರೆ.

ನ್ಯೂನವ್ಯಕ್ತಿತ್ವದವರು

ಜೈವಿಕ ಕಾರಣಗಳಿಂದ ಅಥವಾ ಬೆಳೆದ ವಾತಾವರಣದಲ್ಲಿಯ ಕೆಟ್ಟ ಮಾದರಿ ನ್ಯೂನತೆಗಳಿಂದ ಅಥವಾ ತಂದೆ ತಾಯಿಗಳ, ಪೋಷಕರ, ಹಿರಿಯರ ಅಸಾರೋಗ್ಯಕರ ದ್ವಂದ್ವ ಧೋರಣೆಯ ಮತ್ತು ತಪ್ಪು ಪ್ರೋತ್ಸಾಹ, ಮಾರ್ಗದರ್ಶನಗಳಿಂದ ವ್ಯಕ್ತಿಯ ವ್ಯಕ್ತಿತ್ವ ಪರಿಪೂರ್ಣವಾಗಿ, ಆರೋಗ್ಯಕರವಾಗಿ, ವಿಕಾಸವಾಗುವುದಿಲ್ಲ. ಅವನ ವ್ಯಕ್ತಿತ್ವ ದೋಷಪೂರ್ಣವಾಗಿ ದುರ್ಬಲವಾಗುತ್ತದೆ. ಆತ ವಿಪರೀತ ಸ್ವಾರ್ಥಿ, ಸುಖಲೋಲನಾಗಬಹುದು. ಹಿಂದಿನ ಅನುಭಗಳಿಂದ ಪಡೆದ ಶಿಕ್ಷೆಯಿಂದ ಪಾಠ ಕಲಿಯುವುದಿಲ್ಲ. ಸಾಮಾಜಿಕ, ನೈತಿಕ ಹಾಗೂ ಧಾರ್ಮಿಕ ಮೌಲ್ಯಗಳನ್ನು ಆತ ಕಲಿಯುವುದಿಲ್ಲ ಅವುಗಳಿಗೆ ಗೌರವವನ್ನೂ ಕೊಡುವುದಿಲ್ಲ. ತನಗೆ, ತನ್ನವರಿಗೆ ಏನು ಯಾವುದು ಅಭ್ಯುದಯಕಾರಿ, ಕ್ಷೇಮಕಾರಿ ಎಂಬ ವಿವೇಚನೆಯನ್ನು ಬೆಳೆಸಿಕೊಳ್ಳುವುದಿಲ್ಲ. ತತ್‌ಕ್ಷಣದ ತಾತ್ಕಾಲಿಕ ಲಾಭ-ಸುಖಕ್ಕಾಗಿ ಹಾತೊರೆಯುತ್ತಾನೆ. ಇಂತಹ ವ್ಯಕ್ತಿ ಮಾದಕ ವಸ್ತುವನ್ನು ಸೇವಿಸಲಾರಂಭಿಸಿದರೆ ಸೀಮೆಎಣ್ಣೆ ಬೆಂಕಿ ಜೊತೆ ಸೇರಿದಂತಾಗುತ್ತದೆ. ಇಬ್ಬರೂ ಜೊತೆಯಾಗೇ ಉರಿದು ಬೂದಿಯಾಗುತ್ತಾರೆ.

ಮಾದಕ ವಸ್ತುಗಳು

ಸರ್ವಸಾಮಾನ್ಯವಾಗಿ ಎಲ್ಲಡೆ ಉಪಯೋಗದಲ್ಲಿರುವ ಮಾದಕ ವಸ್ತುಗಳೆಂದರೆ:

೧. ಕೇವಲ ಮಾನಸಿಕ ದಾಸ್ಯ ಉಂಟುಮಾಡುವ ಔಷಧಿಗಳು: ಕೊಕೇನ್, ಎಲ್.ಎಸ್.ಡಿ, ಸೈಲೋಸೈಬಿನ್, ಮಸ್ಕಾಲಿನ್, ಕೆನಾಬಿಸ್, ನಿಕೋಟಿನ್, ಕೆಫೀನ್.

೨. ಸಂಪೂರ್ಣ ಮಾನಸಿಕ ಹಾಗೂ ಸಂದೇಹಾಸ್ಪದ ದೈಹಿಕ ದಾಸ್ಯ ಉಂಟುಮಾಡುವ ಔಷಧಿಗಳು.

೩. ಅಫೀಮ್ ಪ್ರತಿರೋಧಕಗಳು ಸಲಾರ್‌ಫಿನ್, ಲೆವಲಾರಫೆನ್, ಸೈಕ್ಲಜೋಸಿನ್.

೪. ಆಂಫಿಟಮಿನ್‌ಗಳು, ಆಂಫಿಟಮಿನ್, ಮೆಂಥಾಪಿಟಮಿನ್, ಫೆನ್ ಮೆಟ್ರಾಜೈನ್, ಮಿಥೈಲ್ ಫ್ಲೆನಿಡೇಟ್, ಪಿಪ್ರಡಾಲ್.

೫. ಸಂಪೂರ್ಣ ಮಾನಸಿಕ ಹಾಗೂ ದೈಹಿಕ ದಾಸ್ಯ ಉಂಟುಮಾಡುವ ಔಷಧಿಗಳು.

೬. ಅಫೀಮು ತರಹದವು: ಮಾರ್ಫಿನ್, ಕೋಡೀನ್, ಡೈಹೈಡ್ರೋಮಾರ್ಫಿನಾನ್, ಹೆರಾಯಿನ್, ಫೆಥಡಿನ್, ಮೆಥಾಡೋನ್, ಫೆನಾಜೋಸಿನ್, ಲೋಮೊಟಿಲ್.

೭. ಮದ್ಯಸಾರ ಬಾರ್ಬಿಚುರೇಟ ತರಹದವು: ಈಥೈಲ್ ಅಲ್ಕೋಹಾಲ್, ಬಾರ್ಬಿಚುರೇಟ್, ಪೆರಾಲ್ಡಿಹೈಡ್, ಕ್ಲೋರಾಲ್ ಹೈಡ್ರೇಟ್, ಮೆಪ್ರೋಬಮೇಟ್, ಗ್ಲುಟಥೆಮಿಡ್ ಇತ್ಯಾದಿ.

ಕಾರ್ಯನಿರ್ವಹಣೆ

ಚುಚ್ಚುಮದ್ದು, ಗುಳಿಗೆಗಳನುಂಗಣೆ ಅಥವಾ ಪಾನೀಯ ಸೇವನೆಯಿಂದ ದೇಹ ಸೇರುವ ಮಾದಕ ವಸ್ತುಗಳು ಅಂತಿಮ ಹಂತದಲ್ಲಿ ರಕ್ತದಲ್ಲಿ ಪರಿಚಲಿಸಿ ಕಾರ್ಯನಿರ್ವಹಣೆಯ ಕ್ಷೇತ್ರದ ಕೇಂದ್ರಗಳಿಗೆ ಲಗ್ಗೆ ಹಾಕುವವು.

ನಿದ್ರಾಜನಕಗಳು ನಡುಮಿದುಳಿನಲ್ಲಿರುವ ನಿದ್ರಾಕೇಂದ್ರದ ಮೇಲೆ ನೇರವಾಗಿ ಪ್ರಭಾವ ಬೀರುತ್ತವೆ. ಮಿದುಳಿನ ಹೊರಾವರಣದಲ್ಲಿಯೇ ಜೀವಕೋಶಗಳನ್ನು ನಿರುತ್ಸಾಹಗೊಳಿಸುತ್ತವೆ. ಇವೆರಡರ ಪೂರಕ, ಪೋಷಕ, ಪರಿಪೂರಕ ಪ್ರೇರಣೆಯಿಂದ ಸೇವಿಸಿದ ವ್ಯಕ್ತಿ ನಿದ್ರಾದೇವಿಯ ಮಡಿಲಲ್ಲಿ ಮಲಗುತ್ತಾನೆ. ಇವು ಮಿದುಳಿನ ಜೀವಕೋಶಗಳಲ್ಲಿಯ ಗ್ಲೂಕೋಜ ಉತ್ಕರ್ಷಣೆಗೆ ಅಡ್ಡಿ ಆತಂಕಗಳನ್ನೊಡ್ಡಿ ಪೈರುವೇಟುಗಳ ದೊಡ್ಡಿಗಳನ್ನಾಗಿ ಮಾಡುತ್ತವೆ. ಈ ಪರಿಣಾಮ ನರಕೋಶಗಳಿಗೆ ಮಾತ್ರ ಸೀಮಿತವಾಗಿರದೆ, ದೇಹದ ಉಳಿದ ಕೋಶಗಳಲ್ಲೂ ಕಂಡುಬರುತ್ತವೆ. ಆದರೆ, ಉಳಿದ ಕೋಶಗಳಿಗೆ ಆಮ್ಲಜನಕ ಪೂರೈಸಿಕೊಳ್ಳಲು ಲಭ್ಯವಿದ್ದ ಸೌಲಭ್ಯಗಳಿಂದ ನರಕೋಶಗಳು ವಂಚಿತವಾಗಿರುವುದರ ಪ್ರಯುಕ್ತ, ಪರಿಸ್ಥಿತಿಗೆ ಚುರುಕಿನ ಪ್ರತಿಕ್ರಿಯೆಯನ್ನು ನರಮಂಡಲ ತೋರಿಸುತ್ತದೆ. ಉಸಿರಾಟ ಕೇಂದ್ರ, ರಕ್ತಪರಿಚಲನಾ ಕೇಂದ್ರಗಳ ಚಟುವಟಿಕೆಗಳು ಆಯ್ಕೆ ಆಧಾರಿತವಾಗಿ ಕುಗ್ಗುತ್ತವೆ.

ಸ್ವಾಸ್ಥ್ಯಕಾರಿಗಳು (ಟ್ರ್ಯಾಂಗ್ವಿಲೈಜ್ಸರ್) ನರಮಂಡಲದ ಮೇಲೆ ಪ್ರಭಾವ ಬೀರುವ ನಿಶ್ಚಿತ ಕೇಂದ್ರ ನಿಖರವಾಗಿ ತಿಳಿದುಬಂದಿಲ್ಲ. ಭ್ರಾಂತಿ ಜನಕವಾದ ಲೈಸರ್ಜಕ್ ಆಸಿಡ್ ಡೈ ಇಥೈಲ್ ಅಮೈಡ್‌ಗೆ ಅಡ್ಡಿಯನ್ನೊಡ್ಡಿ ಅಳಿಯದೇ ಉಳಿಯುವಂತೆ ಮಾಡುವ ಮೂಲಕ ಭ್ರಮಾಲೋಕದ ಬ್ರಹ್ಮಾಂಡದಲ್ಲಿ ವಿಹರಿಸುವಂತೆ ಮಾಡುತ್ತವೆ. ಬುದ್ಧಿಮತ್ತೆಯ ಕಾರ್ಯಕಲಾಪಗಳ ಕೇಂದ್ರಗಳಿಗೆ ಕೀಲಿ ಹಾಕಿ, ಭಾವಾವೇಶದ ಬಾನಿನಲ್ಲಿ ಗೊತ್ತುಗುರಿಯಿಲ್ಲದೇ ಗರಿಬಿಚ್ಚಿ ಹಾರಾಡುವ

ವಾತಾವರಣ ನಿರ್ಮಿಸುವುದರಿಂದಾಗಿ ಇದಕ್ಕೆ "ವೈದ್ಯಕೀಯ ನಿರ್ವಾಣ" ಎನ್ನುವರು. ನಿದ್ರಾಜನಕಗಳ ಪರಿಣಾಮಗಳು ಪ್ರಭಾವಶಾಲಿಯಾಗುವಲ್ಲಿ ಸ್ವಾಸ್ಥ್ಯಕಾರಿಗಳು ಸಹಾಯಕವಾಗುತ್ತವೆ.

ಮಂಪರಿಕ್‌ಗಳು (ನಾರ್ಕೋಟಿಕ್ಸ್) ಬೇಸಲ್ ಗ್ಯಾಂಗ್ಲಿಯಾದಿಂದ ಹೊರಟು ಮಿದುಳಿನ ಹೊರವಲಯದತ್ತ ಹರಡುವ ನರಗಳ ಹಾದಿಯಲ್ಲಿ ಅಡ್ಡಿಯನ್ನೊಡ್ಡುವುದರಿಂದ ಸರ್ವೋಚ್ಚ ಕೇಂದ್ರಗಳಿಗೆ ನೋವಿನ ಅರಿವು ಆಗುವುದಿಲ್ಲ. ನೋವು ನಿವಾರಕವಾಗಿ ಕಾರ್ಯನಿರ್ವಹಿಸುತ್ತವೆ. ಪ್ರಶ್ನಾವಳಿಗಳ ಪ್ರವಾಹ ಬತ್ತುವಂತೆ ಮಾಡಿ, ವಿಚಾರ ವಿನಿಮಯಗಳ ಚಾಕಚಕ್ಯತೆಯ ಚಕಮಕಿಗಳಿಗೆ ತೆರೆ ಎಳೆಯುವುದರಿಂದಾಗಿ, ನಿದ್ರಾದೇವಿ ಮಡಿಲಲ್ಲಿ ಖುಷಿ ನೀಡುವ ಕನಸು ಕಾಣುವಂತೆ ಮಾಡುತ್ತವೆ. ಶ್ವಾಸೋಚ್ಛ್ವಾಸ ಕೇಂದ್ರ ನಿರುತ್ಸಾಹಗೊಳ್ಳುವುದು ಪರಿಣಾಮವಾಗಿ ಉಸಿರಾಟದ ತಾಳ ತಪ್ಪುವುದು. ವೇಗಲ್ ಕೇಂದ್ರ ಪ್ರಚೋದನೆಗೊಳಪಡುವುದರಿಂದ ಸ್ನಾಯು ನರಗಳ ಕೂಟದಲ್ಲಿ ಅ್ಯಸಿಟೈಲ್‌ಕೋಲಿನ್ ಬಿಡುಗಡೆಯಾಗುವುದು. ಹೃದಯ ಬಡಿತ ಕುಗ್ಗುವುದು. ಮಾರ್ಫಿನ್ ಮತ್ತು ಹೈಯೋಸಿನ್ ಒಟ್ಟಿಗೆ ತೆಗೆದುಕೊಂಡಾಗ "ಅಪೂರ್ಣ ಪ್ರಜ್ಞಾ .... ಸ್ಥಿತಿಯನ್ನು ಬಳುವಳಿಯಾಗಿ ನೀಡುತ್ತಪೆ.

ಮಾದಕ ಪಾನೀಯಗಳು ಯಕೃತ್‌ನಲ್ಲಿ ಉತ್ಕರ್ಷಣೆಗೊಳಗಾಗಿ ಅಸಿಟಾಲ್ಡಿಹೈಡ್ ಆಗಿ ರೂಪಾಂತರಗೊಳ್ಳುವುವು. ರಕ್ತದಲ್ಲಿ ಸಂಚರಿಸಿ, ಕೇಂದ್ರ ನರಮಂಡಲದ ಜೀವಕೋಶಗಳಿಗೆ ಮುತ್ತಿಗೆ ಹಾಕಿ, ದೈಹಿಕ, ಮಾನಸಿಕ ಚಟುವಟಿಕಾ ಕೇಂದ್ರ, ವಿಚಾರಿಸುವ ಕೇಂದ್ರ, ಮಾತನಾಡುವ ಕೇಂದ್ರ, ಉಷ್ಣ ನಿಯಂತ್ರಣ ಕೇಂದ್ರಗಳ ಮೇಲೆ ಪ್ರಭಾವ ಬೀರಿ, ಕಾರ್ಯನಿರ್ವಹಣೆಯ ನಿಯಂತ್ರಣ ತಪ್ಪಿಸುತ್ತವೆ.

ಪರಿಣಾಮಗಳು

ಜಗದ ಜಂಜಾಟಗಳನ್ನು ಮರೆಸಿ, ರಂಗುರಂಗಿನ ರಮ್ಯರಮಣೀಯ ಲೋಕಕ್ಕೆ ಕೊಂಡೊಯ್ದು, ಊಹಾತೀತವಾದ ಚಿತ್ರವಿಚಿತ್ರ ಅನುಭವಗಳನ್ನಿತ್ತು, ಆನಂದಾನುಭೂತಿಯನ್ನು ನೀಡಿ, ಮನಸ್ಸನ್ನು ಅಯಸ್ಕಾಂತದಂತೆ ಆಕರ್ಷಿಸಿ, ವ್ಯಕ್ತಿಗಳ ದೌರ್ಬಲ್ಯ-ದಮನ ಮಾಡುವಂತೆ ನಟಿಸಿ, ಆ ದೌರ್ಬಲ್ಯದ ಸುತ್ತ ನೂಲು ನೇಯ್ದು, ಮರಳು ಮಾಡಿ, ಹೆಡಮುರಿಗೆ ಕಟ್ಟಿ ಅತ್ತಿತ್ತ ಮಿಸುಕದಂತೆ ಮಾಡುತ್ತವೆ.

ಆಲಸ್ಯ, ಆಯಾಸಗಳನ್ನು ಅಳಿಸಿ, ಹಸಿವನ್ನು ಹೆಚ್ಚಿಸಿ, ಲವಲವಿಕೆ ಲಾಸ್ಯವಾಡುವಂತೆ ಮಧ್ಯ ಮಾಡಬಲ್ಲುದಾದರೆ, ಪೆಡಂಭೂತಗಳಂತೆ ಪೀಡಿಸುವ ನೋವನ್ನು ನಿವಾರಿಸಿ ಕಣ್ತುಂಬ ನಿದ್ರೆ ತರಬಲ್ಲವು- ಬಾರ್ಬಿಚುರೇಟ್, ಮಾರ್ಫಿನ್ ಗುಂಪಿನ ಮದ್ದುಗಳು. ಮನಸ್ಸಿನ ವ್ಯಾಕುಲತೆ, ಉದ್ರೇಕ ಉದ್ವೇಗವನ್ನು ನೆಮ್ಮದಿಕಾರಿ ಔಷಧಿಗಳು ಬಗ್ಗು ಬಡಿದರೆ, ಗಾಂಜಾ, ಎಲ್.ಎಸ್.ಡಿ.ಗಳು ಭ್ರಮೆಯ ಕಿನ್ನರ ಲೋಕವನ್ನೇ ಸೃಷ್ಟಿಸುತ್ತವೆ. ಸೇವಿಸುವವರಿಗೆ ಮೊದಮೊದಲು ಹಿತವನ್ನು ನೀಡಿ ಬುಟ್ಟಿಗೆ ಹಾಕಿಕೊಳ್ಳುತ್ತವೆ. ಕ್ರಮೇಣ ತಮ್ಮ ಶರಪಂಜರದಲ್ಲಿ ಬಂಧಿಸಿ ಅವರ ಮೇಲೆ ಸವಾರಿ ಮಾಡಿ, ಅವರನ್ನೇ ನುಂಗಿ

ನೀರನ್ನು ಕುಡಿಯುತ್ತವೆ. ಕಾಲುಬಿದ್ದು ಕಾಲುಂಗರ ಬಿಚ್ಚಿಕೊಳ್ಳುವ ಹಾಗೆ.

ಪ್ರಾರಂಭದಲ್ಲಿ ಅಲ್ಪ ಸ್ವಲ್ಪ ಪ್ರಮಾಣಕ್ಕೆ ಖುಷಿ ಕೊಡುವ ಮಾದಕ ಔಷಧಿಗಳು ಖುಷಿಯನ್ನು ದಿನಗಳೆದಂತೆ ಕೊಡುವಲ್ಲಿ ವಿಫಲವಾಗುವುವು. ಮೊದಲಿನ ಖುಷಿಯನ್ನು ಪಡೆಯುವ ಮನೋಭಾವಕ್ಕೆ ಮಣಿದು ಹೆಚ್ಚು ಹೆಚ್ಚು ಪ್ರಮಾಣ ಸೇವಿಸುತ್ತ ಹೋಗುವುದು ಅನಿವಾರ್ಯವಾಗುತ್ತದೆ. ತಾಳಿಕೆ, ಮಾನಸಿಕ ಅವಲಂಬನೆಯ ಅನಂತರ, ವ್ಯಸನಿಗಳಾಗುವ ಪೂರ್ವದಲ್ಲಿ ಅವರು ತಾಳಿಕೆ (ಟಾಲರೆನ್ಸ್) ಅಥವಾ ಸಹಿಷ್ಣುತೆಯನ್ನು ಬೆಳೆಸಿಕೊಳ್ಳುವರು. ಇಲ್ಲಿ 'ತಾಳಿಕೆ' ಅಂದರೆ, ಮೊದಲು ತೆಗೆದುಕೊಂಡಷ್ಟೇ ಶಕ್ತಿ ಸಾಮರ್ಥ್ಯದ, ಅಷ್ಟೇ ಪ್ರಮಾಣದ ಔಷಧಿ ಸೇವಿಸಿದಾಗ, ಸಕಾರಾತ್ಮಕ ಪರಿಣಾಮಗಳು ಪ್ರಕಟಗೊಳ್ಳದೇ ಇರುವುದು ಅಥವಾ ಮೊದಲಿನಂತೆ ಔಷಧಿಗೆ ಪ್ರತಿಕ್ರಿಯೆ ತೋರಿಸಲು ಹೆಚ್ಚು ಪ್ರಮಾಣದ ಔಷಧಿ ಸೇವಿಸುವುದು, ಮಾದಕ ವಸ್ತುಗಳಲ್ಲಿ ಈ ತಾಳಿಕೆಯು ಇನ್ನಷ್ಟು ತ್ವರಿತವಾಗಿ ಬೆಳೆಯುವುದು. ಮೊದಲಿನ ಸಂತೋಷ ಆನಂದಾನುಭೂತಿ ಒತ್ತಟ್ಟಿಗಿರಲಿ, ಸಾಮಾನ್ಯ (ನಾರ್ಮಲ್) ನಂತೆ ಇರಲು ಸಹ ಹೆಚ್ಚು ಹೆಚ್ಚು ಔಷಧಿ ಸೇವಿಸುವುದು ಅನಿವಾರ್ಯ. ಮೊದಲಿನ ಜೀವಕೋಶಗಳು ಮಾದಕ ಔಷಧಿಗಾಗಿ ಹಪಹಪಿಸುವುವು. ಹೀಗಾಗಿ ಅವಲಂಬನೆ (ಡಿಪೆಂಡೆನ್ಸಿ) ಅನಿವಾರ್ಯವಾಗಿ ಅಪ್ಪಿಕೊಳ್ಳುವುದು.

ಆಹಾರವಿಲ್ಲದಾಗ ಹಸುವಿನಿಂದ ಹಪಹಪಿಸಿ ಕಂಗೆಡುವಂತೆ ಮಾದಕ ಔಷಧಿ ಮರೀಚಿಕೆಯಾದಾಗ ವ್ಯಸನಿ ಪರಿತಪಿಸಿ ಕಂಗೆಡುವರು. ಮಾದಕ ವಸ್ತುಗಳ ಮೋಹ ಊಹೆಗೆ ನಿಲುಕದ್ದು. ಅದನ್ನು ಪಡೆಯಲು ತಮ್ಮಲ್ಲಿಯೇ ಯುಕ್ತಿ, ಶಕ್ತಿ ಸಾಮರ್ಥ್ಯಗಳನ್ನೆಲ್ಲ ಬಳಸುವರು. ಈ ಆಸೆಯ ಮುಂದೆ ವೈಯಕ್ತಿಕ, ಸಾಮಾಜಿಕ. ನೈತಿಕ ಕಟ್ಟುನಿಟ್ಟುಗಳು ಕರಗಿಹೋಗುವವು–ಬಿಸಿಲಿಗಿಟ್ಟ ಬರ್ಫದಂತೆ. ಯಾವ ಮಾರ್ಗವಾದರೂ ಸರಿ, ಅದನ್ನು ಪಡೆಯುವುದೇ ವ್ಯಕ್ತಿಯ ಪರಮ ಗುರಿಯಾಗುತ್ತದೆ. ಇದಕ್ಕಾಗಿ ಎಂಥ ಹೇಯ ಕೃತ್ಯಕ್ಕೂ ಹೇಸುವುದಿಲ್ಲ,........

ಮತ್ತಿನ ಔಷಧಿ ಸೇವಿಸುವವರಿಗೆ ಸುಖವೆಲ್ಲಿ ಎಂಬ ಮಾತು ಅಕ್ಷರ ಸಹ ಸತ್ಯ. ಮಾದಕ ಔಷಧಿಗಳ ಪ್ರಭಾವಕ್ಕೆ ಸಿಕ್ಕ ದೇಹ ಗೆದ್ದಲು ಹತ್ತಿದ ಮರದಂತಾಗುತ್ತದೆ. ಶರೀರದ ವಿವಿಧ ಜೈವಿಕ ಹಾಗೂ ರಸಾಯನಿಕ ಕ್ರಿಯೆಗಳ ತಾಳ ತಪ್ಪಿ, ಆಹಾರದ ಚಯೋಪಚಯ, ಸಂಸ್ಕರಣ, ಶೇಖರಣೆಗಳಲ್ಲಿ, ಮಲಿನ ವಸ್ತುಗಳ ಹೊರಹಾಕುವಿಕೆ ಮುಂತಾದ ದೈನಂದಿನ ಚಟುವಟಿಕೆಗಳಲ್ಲಿ ವೈಪರೀತ್ಯಗಳು ತಲೆದೋರುತ್ತವೆ. ಅಮಲಿನ ಆನಂದದ ಗುಂಗಿನಲ್ಲಿ ಆಹಾರ ಸೇವಿಸುವುದಿಲ್ಲ. ಪೋಷಕಗಳ ನಿಶ್ಶಕ್ತಿ ಮತ್ತು ಒತ್ತುಗಳ, ಜೀವಸತ್ವಗಳ ಕೊರತೆಯ ಕೊರಗಿನ ಕಳೆ ಬಿಗಿಯುತ್ತದೆ ರಕ್ತಹೀನತೆ ಮುತ್ತುತ್ತದೆ. ನಿಶ್ಶಕ್ತಿ, ನಿರಾಸಕ್ತಿ, ನರ್ತನಗೈಯುವವು. ರೋಗ ಪ್ರತಿರೋಧಕ ಶಕ್ತಿ ಕುಗ್ಗುವುದು. ಇದರ ದುರುಪಯೋಗ ಪಡೆಯಲು ಸೂಕ್ಷ್ಮಾಣುಗಳ ದಂಡು ಹಿರಿಹಿರಿ ಹಿಗ್ಗುವುದು. ವ್ಯಸನಿ ರೋಗಾಣುಗಳನ್ನು ರೋಗಗಳನ್ನು ಆದರದಿಂದ ಬರಮಾಡಿಕೊಳ್ಳುವ 'ಸ್ವಾಗತಕಾರ' ಆಗುವನು.

ಮನಸ್ಸಿದ್ದರೆ ಮಾರ್ಗ

ಸ್ವಭಾವತಃ ಯಾರೂ ವ್ಯಸನಿಗಳಲ್ಲ. ಅವರು ಪರಿಸ್ಥಿತಿಯ ಕೈಗೊಂಬೆಯಾಗಿರುವುದು ಸಹಜ. ಕಾರಣ ದುರ್ವ್ಯಸನದ ನರಕಕ್ಕೆ ಇರುವ ಬಾಗಿಲುಗಳಿಗೆ ಬಲವಾದ ಬೀಗಗಳು ಇಲ್ಲದಿರುವುದು. ಈ ಬೀಗಗಳು ಮತ್ತಾರೂ ಅಲ್ಲ. ಪೋಷಕರು ಮತ್ತು ಬೋರ್ಡಿಂಗ್ ಶಾಲೆಯ ಅಧ್ಯಾಪಕರು. ಆದರೆ ಮಹಾಬೀಗವಾಗಬೇಕಾದದ್ದು ಸ್ವಯಂ ವಿದ್ಯಾರ್ಥಿಯೇ ಎನ್ನುವದರಲ್ಲಿ ಸಂಶಯವಿಲ್ಲ.

ಮಾದಕವಸ್ತುಗಳು ಸೃಷ್ಟಿಸಿರುವ ಸಮಸ್ಯೆಗಳಿಗೆ ಏಕೈಕ ಉತ್ತರ ತಡೆಗಟ್ಟುವಿಕೆ. ಜಗದ ಜಂಜಾಟದ ಬದುಕಿನಲ್ಲಿ ಜರ್ಜರಿತರಾಗಿ ಮಾದಕ ವಸ್ತುಗಳ ದಾಳಿಯ ಗಾಳಕ್ಕೆ ಸಿಕ್ಕಿಕೊಳ್ಳಬಾರದು. "ಕೆಲಸದಲ್ಲಿಯ ಬದಲಾವಣೆಯಿಂದ ಬೇಸರ ಕಳೆಯಲು ಸಾಧ್ಯ" ಎಂಬ ಹಿರಿಯರ ಹೇಳಿಕೆ ನಮಗೆ ಆಸ್ತಿಯಾಗಬೇಕು. ಕ್ಷಣಿಕ ಸುಖಕ್ಕೆ ಬಾಳು ಹಾಳು ಮಾಡಿಕೊಳ್ಳಬಾರದು. ಮಾನವನಾಗಿ ಹುಟ್ಟಿದ ಮೇಲೆ ಏನನ್ನಾದರೂ ಸಾಧಿಸಲೇಬೇಕು. ಸಾಧನೆ ಸರಳವಲ್ಲ; ನಿಜ. ಆ ದಿಶೆಯಲ್ಲಿಯ ಪ್ರಯತ್ನದಿಂದ ಅಸಾಧ್ಯವೇನಲ್ಲ ಎಂಬುದು ಸತ್ಯ. ಕಾರಣ ಮಾದಕ ವಸ್ತುಗಳ ಸೇವನೆ ಕೊಡೆದು ಬೇಸರವಾದಾಗ ಅದರಿಂದ ಮುಕ್ತರಾಗಲು ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಬೇಕು. ಇದರಿಂದ ಅಸ್ತಿತ್ವ ಗಟ್ಟಿಗೊಳ್ಳುವುದು. ವ್ಯಕ್ತಿತ್ವ ವಿಕಾಸಗೊಳ್ಳುವುದು.

ಒಮ್ಮೆ ಮತ್ತಿನ ಔಷಧಿಗಳ ರುಚಿ ರಚಿಸಿದ ಚಕ್ರವ್ಯೂಹದಲ್ಲಿ ಸಿಕ್ಕಿಕೊಂಡರೆ ಸಾವೇ ಮುಕ್ತಿಯ ಮಾರ್ಗ ಎಂಬುದರಲ್ಲಿ ಸತ್ಯಾಂಶ ಇಲ್ಲದಿಲ್ಲ. ಈ ಚಕ್ರವ್ಯೂಹ ಭೇಧಿಸಿ ಹೊರಗೆ ಬರಲು ಮನೋನಿರ್ಧಾರ ಅತ್ಯಗತ್ಯ. ಮನಸ್ಸಿದ್ದಲ್ಲಿ ಮಾರ್ಗವಿದೆ. ಹಿಂತೆಗೆತದ ಚಿಹ್ನೆ (Withdrawal Symptoms) ಗಳನ್ನು ಸಂಯಮ ಹಾಗೂ ತಾಳ್ಮೆಯಿಂದ ತೆಗೆದುಕೊಳ್ಳುವ ದೃಢ ಸಂಕಲ್ಪ ಬೇಕು. ಚಿಕಿತ್ಸೆ ಎಷ್ಟರಮಟ್ಟಿಗೆ ಯಶಸ್ವಿಯಾದೀತು ಅನ್ನುವುದು–

೧) ರೋಗಿ ಯಾವ ಹಂತದಲ್ಲಿ ಚಿಕಿತ್ಸೆಗೆ ಬರುತ್ತಾನೆ.

೨) ಚಟ ಬಿಡಲು ಪ್ರಮಾಣಿಕ ಪ್ರಯತ್ನ ಮತ್ತು ಆಸೆ ಎಷ್ಟಿದೆ?

೩) ರೋಗಿಯ ಸಂಬಂಧಿಕರು, ಮಿತ್ರರು ಎಷ್ಟು ಸಹಾಯ, ಸಹಕಾರ, ಸಹಾನುಭೂತಿ ತೋರಿ ಚಿಕಿತ್ಸೆಯಲ್ಲಿ ಭಾಗವಹಿಸಬಲ್ಲರು.

೪) ಲಭ್ಯವಿರುವ ಚಿಕಿತ್ಸಾ ಸೌಲಭ್ಯಗಳು.

೫) ಪರಿಸರ ಎಷ್ಟು ಅನುಕೂಲಕರ ಹಾಗೂ ಆರೋಗ್ಯಕರವಾಗಿದೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ.

ತಜ್ಞ ವೈದ್ಯರು ಸಾಮಾನ್ಯವಾಗಿ ಅಳವಡಿಸುವ ಚಿಕಿತ್ಸಾ ವಿಧಾನಗಳಿವು :

೧) ವೈದ್ಯರ ಉಸ್ತುವಾರಿಯಲ್ಲಿ ವ್ಯಕ್ತಿ ತೆಗೆದುಕೊಳ್ಳುತ್ತಿರುವ ವಸ್ತುವನ್ನು ಕ್ರಮವಾಗಿ ಅಥವಾ ತತ್‌ಕ್ಷಣ ನಿಲ್ಲಿಸಿಬಿಡುವುದು.

೨) ಬದಲೀ ಚಿಕಿತ್ಸೆ.

೩) ಆಹಾರಾಂಶಗಳ ಕೊರತೆಯನ್ನು ನಿವಾರಿಸುವುದು.

೪) ಮಾನಸಿಕ ಚಿಕಿತ್ಸೆ ಮತ್ತು ಔದ್ಯೋಗಿಕ ಪುನರ್ವಸತಿ.

೫) ಸಾಮಾಜಿಕ ಪುನರ್ವಸತಿ ಯೋಜನೆಗಳು.

ಈ ಚಿಕಿತ್ಸೆ ಕೆಲವು ತಿಂಗಳುಗಳಿಂದ ವರ್ಷಗಳವರೆಗೆ ನಡೆಯಬಹುದು. ಆದರೆ, ಚಿಕಿತ್ಸೆಯ ಕಾಲ ಪೂರ್ತಿ ಎಚ್ಚರವಾಗಿರುವುದು ಅತ್ಯವಶ್ಯ. ಇಲ್ಲದಿದ್ದಲ್ಲಿ ಮತ್ತೆ ಆ ವ್ಯಕ್ತಿ ದುರ್ವ್ಯಸನಿಯಾಗುವ ಸಾಧ್ಯತೆ ಹೆಚ್ಚು. ದುರ್ವ್ಯಸನದಿಂದ ಬಿಡುಗಡೆಯಾಗುವುದಕ್ಕಿಂತ ಮುಖ್ಯ – ಆ ಸ್ಥಿತಿಗೆ ತಂದ ಕಾರಣವನ್ನು ಬೇರು ಸಹಿತ ಕಿತ್ತೆಸೆಯಬೇಕು.

ಹಾ! ತುಂಬು ಬಟ್ಟಲನು ಕಾಲ ತಾಂ ಕೈಯಿಂದೆ
ನುಚ್ಚು ಹರಿಯುವ ಪರಿಯ ವಿವರಿಸಿದೊಡಹುದೇಂ?
ನಿನ್ನೆ ಸತ್ತಿಹುದೀಗ, ನಾಳೆ ಹುಟ್ಟದೆಯಿಹುದು
ಇಂದು ಸೊಗವಿರಲವನು ನೆನೆದಳುವುದೇಕೆ?

'ಉಮರನ ಒಸಗೆ' (ಅನುವಾದಕರು ಡಿವಿಜಿ)ಯಿಂದ ಆಯ್ದಿರುವ ಈ ಪದ್ಯ ಸಾರುವ ಮೌಲ್ಯವನ್ನು ಪ್ರತಿಯೊಬ್ಬನೂ ಅನುಷ್ಠಾನಿಸಬೇಕು: ಇಂದು ಈಗ ಇಲ್ಲಿ ಪ್ರಾಮಾಣಿಕವಾಗಿ ಬಾಳು, ಸ್ವಂತ ಮಾಡಿಕೊಂಡ ಅಥವಾ ಹೊರಗಿನಿಂದ ಬಡಿಯುವ ಜಂಜಾಟಗಳನ್ನು ಪರಿಹರಿಸಲು ನೇರವಾಗಿ ಅವನ್ನು ಎದುರಿಸುವುದೊಂದೇ ಋಜು ಮಾರ್ಗ, ಮಾದಕ ವಸ್ತುಗಳಿಗೆ ಶರಣಾಗುವುದು ಸುತಾರಾಂ ಸಲ್ಲ.



ಕಷ್ಟದ ಜೀವನವೇ ಶಿಸ್ತನ್ನೂ ಕಲಿಸುವ ಶಾಲೆ.

ಧರ್ಮ ಧರ್ಮಗಳ ಮಧ್ಯೆ ಜಗಳವಿರಬಾರದು. ಆದರೆ ಎಲ್ಲ ಧರ್ಮಗಳೂ ಅಧರ್ಮದ ವಿರುದ್ಧ ಹೋರಾಡಬೇಕು.

—ಗಾಂಧೀಜಿ

ಪುಸ್ತಕ ಪರಿಚಯ

ಅಪೆಂಡಿಸೈಟಿಸ್ ಪೂರ್ವೋತ್ತರ ಕಥೆ—ಲೇಖಕರು: ಡಾ|| ಎಚ್. ಡಿ. ಚಂದ್ರಪ್ಪಗೌಡ, ನಿವೃತ್ತ ಜಿಲ್ಲಾ ವೈದ್ಯಾಧಿಕಾರಿ, ಮಿಷನ್ ಕಾಂಪೌಂಡ್, ಶಿವಮೊಗ್ಗ; ಪ್ರಕಾಶಕರು: ನವಕರ್ನಾಟಕ ಪಬ್ಲಿಕೇಷನ್ ಪ್ರೈವೇಟ್ ಲಿಮಿಟೆಡ್.

ಅಪೆಂಡಿಕ್ಸ್ ಎಂಬುದು ಮಾನವನ ಒಳ ರಚನೆಯಲ್ಲಿರುವ ಒಂದು ವಿಚಿತ್ರ ಅಂಗ. ಇದರ ಕಾರ್ಯವೈಖರಿ ಅಂತಹ ಹೇಳಿಕೊಳ್ಳುವ ಮಟ್ಟದಲ್ಲಿರದಿದ್ದರೂ ಇದಕ್ಕೆ ಸೋಂಕುಂಟಾದರೆ ಮಾತ್ರ ಇದು ಕೊಡುವ ತೊಂದರೆ ಅಷ್ಟಿಷ್ಟಲ್ಲ. ಈ ವಿಚಾರವನ್ನು ಲೇಖಕರು ಕೃತಿಯ ಪ್ರಾರಂಭದಲ್ಲೇ ವಿವರಿಸಿದ್ದಾರೆ. ಈ ಮೊದಲು ಇದರ ತೊಂದರೆಯಿಂದಾಗಿ ಎಂತೆಂತಹ ಮಹಾನ ವ್ಯಕ್ತಿಗಳು ಅನುಭವಿಸಿದ ಯಾತನೆಯನ್ನು, ಅಲ್ಲದೇ ಬ್ರಿಟಿಷ್‌ದೊರೆ 'ಏಳನೇ ಎಡ್ವರ್ಡ್' ಅಪೆಂಡಿಸೈಟಿಸ್‌ನಿಂದಾಗಿ ಪಟ್ಟಾಭಿಷೇಕದ ಸಮಯದಲ್ಲಿ ಅನುಭವಿಸಿದ ಕಠಿಣ ಪರಿಸ್ಥಿತಿಗಳನ್ನು ಸವಿಸ್ತಾರವಾಗಿ ಎಲ್ಲರಿಗೂ ಮನಂಬುಗುವಂತೆ ವರ್ಣಿಸಿದ್ದಾರೆ. ಡಾ|| ಚಂದ್ರಪ್ಪಗೌಡರು. ಅನಾದಿಕಾಲದಿಂದಲೂ ಮಾನವ ಸಮುದಾಯವನ್ನು 'ಅಪೆಂಡಿಸೈಟಿಸ್'ನ ಪೂರ್ವಕಥೆಯನ್ನು, ಅಂದರೆ ಶತಶತಮಾನಗಳವರೆಗೆ ಜನರಲ್ಲಿ ಅದರ ಬಗೆಗೆ ಇದ್ದ ಅಜ್ಞಾನ, ಅಂಧಶ್ರದ್ಧೆಯನ್ನು ವಿವರಿಸಿರುವರಲ್ಲದೇ ಈ ವ್ಯಾಧಿಯನ್ನು ಕುರಿತಾದ ಶೋಧನೆ ಮತ್ತು ಇದರ ನಿವಾರಣಾವಿಧಾನವನ್ನು ಕಂಡುಹಿಡಿದ ಪ್ರತಿ ಹಂತವನ್ನು ಸರಳವಾಗಿ ತಿಳಿಸಿಕೊಟ್ಟಿದ್ದಾರೆ. ಕೃತಿಯಲ್ಲಿ ಕಂಡುಬರುವ ಕೆಲವು ವಿವರಣೆಗಳು ಕಥಾರೂಪಿಯಾಗಿದ್ದು, ವೈದ್ಯಕೀಯ ವಿಷಯದ ಬಗೆಗೆ ಜನಸಾಮಾನ್ಯರಿಗೆ ಮನಮುಟ್ಟುವಂತೆ ತಿಳುವಳಿಕೆ ನೀಡುವಲ್ಲಿ ಇಂತಹ ವಿಸ್ತೃತ ವರ್ಣನೆಗಳು ಅತ್ಯವಶ್ಯಕವಾಗಿವೆ.

ಲೇಖನದಲ್ಲಿ ಅಲ್ಲಲ್ಲಿ ಕಂಡುಬರುವ ಚಿತ್ರಗಳ ಮೂಲಕ 'ಅಪೆಂಡಿಕ್ಸ್'ನ ಸ್ಥಾನ, ಅದರ ರಚನಾವಿನ್ಯಾಸ, ಕಾರ್ಯವೈಖರಿ ಈ ಮೊದಲಾದುವನ್ನು ಸ್ಪಷ್ಟವಾಗಿ ತಿಳಿಯಪಡಿಸಿದ್ದಾರೆ. 'ಇತಿಹಾಸ' ಎಂಬ ಶೀರ್ಷಿಕೆಯಡಿಯಲ್ಲಿ, ಐದಾರುಸಾವಿರ ವರ್ಷಗಳ ಹಿಂದಿನ ಪಿರಮಿಡ್ಡುಗಳಲ್ಲಿರುವ 'ಮಮ್ಮಿ'ಗಳ ಅಪೆಂಡಿಕ್ಸ್‌ನಿಂದ ಹಿಡಿದು ಹತ್ತೊಂಬತ್ತನೇ ಶತಮಾನದಲ್ಲಿ 'ರಿಜಿನಾಲ್ಡ ಫಿಟ್ಜ್' ಅವರು ಅಪೆಂಡಿಸೈಟಿಸ್ ಬಗೆಗೆ ನೀಡಿದ ಖಚಿತ ನಿರ್ಧಾರದವರೆಗೆ ಕೂಲಂಕಷ

ವಾದ ವಿವರಣೆ ಕೊಟ್ಟಿದ್ದಾರೆ. ಅಲ್ಲದೆ ಶಸ್ತ್ರಚಿಕಿತ್ಸೆಯ ಕ್ರಮಕ್ಕೆ ಅನುಕೂಲವಾಗಲು ಹೆಚ್ಚು ಕಡಿಮೆ 'ಪಿಟ್ಜ್' ಅವರ ಕಾಲದಲ್ಲೇ ಆಗಿ ಹೋದ 'ಜೋಸೆಫ್ ಲಿಸ್ಟರ್' ಅವರ ಕೊಡುಗೆಯವರೆಗೂ ವಿವರಿಸಿದ್ದಾರೆ. ಆದಾಗ್ಯೂ ಶತಶತಮಾನಗಳಿಂದಲೂ ಇದರ ಶೋಧನೆಯ ಕಾಲದಲ್ಲಿ ಹೇಗೆ ಹೇಗೆ ಅಡಚಣೆಗಳುಂಟಾದುವೆಂಬುದನ್ನು ಚಿತ್ರಿಸಿದ್ದಾರೆ. ಇತ್ತೀಚೆಗೆ ಅಪೆಂಡಿಸೈಟಿಸ್‌ನ ಶಸ್ತ್ರಚಿಕಿತ್ಸೆಯ ವಿಧಾನದಲ್ಲಿ ಅತ್ಯಂತ ಸುರಕ್ಷಿತವಾದ ಪದ್ಧತಿಗಳು ಲಭ್ಯವಾಗಿರುವುದರಿಂದ ಇಂದು ಚಿಕಿತ್ಸೆಯ ಮಾರ್ಗವು ಸುಲಭವಾದ ರೀತಿಯನ್ನು ಮತ್ತು ಇದರಿಂದ ಯಾವ ತೊಡಕೂ ಇಲ್ಲದಿರುವುದನ್ನು ಲೇಖಕರು ತಮ್ಮ ಕೃತಿಯಲ್ಲಿ ಮನದಟ್ಟಾಗುವಂತೆ ವಿವರಿಸಿ ಈ ವಿಷಯದಲ್ಲಿ ಜನರಲ್ಲಿದ್ದ ಭೀತಿ ದೂರವಾಗಲು ಸಹಕರಿಸಿದ್ದಾರೆ. ಲೇಖಕರು ಕೃತಿಯಲ್ಲಿ ವಿವರಿಸಿದಂತೆ ಕಳೆದ ಶತಮಾನದ ವರೆಗೂ 'ಅಪೆಂಡಿಸೈಟಿಸ್'ಗೆ ಸರಿಯಾದ ಚಿಕಿತ್ಸೆಯು ಇಲ್ಲದೇ ಯಾವ ಚಿಕಿತ್ಸೆಯನ್ನನುಕರಿಸಿದರೂ ಈ ರೋಗ ತಗುಲಿದವರಲ್ಲಿ ಶೇಕಡಾ ೫೦ ಇಲ್ಲವೇ ಇದಕ್ಕೂ ಮೇಲ್ಪಟ್ಟು ರೋಗಿಗಳು ಸಾಯುವ ಪರಿಸ್ಥಿತಿ ಇದ್ದಿತು. ಆದರೆ ಇಂದು ಈ ರೋಗತಗುಲಿದವರಲ್ಲಿ ಸಾಯಬಹುದಾದವರ ಪ್ರಮಾಣ ಶೇಕಡಾ ೨ರಷ್ಟಕ್ಕೆ ಇಳಿದಿದೆಯೆಂದರೆ ಆಶ್ಚರ್ಯಕರ ಸಂಗತಿಯೇ, ಅಂದ ಮೇಲೆ ವೈದ್ಯಕೀಯ ವಿಜ್ಞಾನ ಎಷ್ಟರ ಮಟ್ಟಿಗೆ ಪ್ರಗತಿ ಹೊಂದಿದೆ ಎಂಬುದನ್ನು ಲೇಖಕರು ಸ್ಪಷ್ಟಪಡಿಸಿದ್ದಾರೆ.

ಲೇಖಕರು 'ಗಾಂಧಿ ಅಪೆಂಡಿಸೈಟಿಸ್' ಎಂಬ ಶೀರ್ಷಿಕೆಯಡಿಯಲ್ಲಿ ಮಹಾತ್ಮಾ ಗಾಂಧೀಜಿಯವರು 'ಅಪೆಂಡಿಸೈಟಿಸ್'ನಿಂದ ಬಳಲುತ್ತಿದ್ದಾಗ ಬ್ರಿಟಿಷ್ ವೈದ್ಯರಿಂದ ಶಸ್ತ್ರಚಿಕಿತ್ಸೆಗೆ ಒಳಗಾದ ರೀತಿಯನ್ನೂ, ಆ ಸನ್ನಿವೇಶವನ್ನು ಅಲ್ಲದೇ ಅವರು ಸಂಪೂರ್ಣವಾಗಿ ಗುಣಮುಖರಾದ ನಂತರ ಸ್ವತಃ ಅವರು ಅಪೆಂಡಿಕ್ಸ್‌ನ ಶಸ್ತ್ರಚಿಕಿತ್ಸೆಯನ್ನು ನೋಡಲಿಚ್ಛಿಸಿ ಅದನ್ನು ಕಾರ್ಯರೂಪಕ್ಕೆ ತಂದ ಪ್ರಸಂಗ ಇವೆಲ್ಲವನ್ನು ತುಂಬ ಚೆನ್ನಾಗಿ ವಿವರಿಸಿದ್ದಾರೆ.

'ಅಪೆಂಡಿಸೈಟಿಸ್'ನ ಗುಣ, ಲಕ್ಷಣಗಳನ್ನು ವಿವರಿಸಿದ ರೀತಿ ಸೊಗಸಾಗಿದೆ. ಇದರ ಸಾಮಾನ್ಯಲಕ್ಷಣದಿಂದ ಪ್ರಾರಂಭವಾಗಿ ಅನಂತರ ನೋವು ಬಲಕಿಬ್ಬೊಟ್ಟೆಯಲ್ಲಿ ಕೇಂದ್ರೀಕೃತವಾಗಿರುವ ಬಿಂದು, ಈ ರೋಗ ನಿರ್ಣಯವಾಗುವ ಪರಿ, ಇವೆಲ್ಲವುಗಳ ವರ್ಣನೆಯಿಂದ ಈ ರೋಗ ತಗುಲಿದ ಇಲ್ಲವೆ ತಗುಲಬಹುದಾದ ವಿಚಾರವನ್ನು ಸರಿಸುಮಾರಾಗಿ ಸಾಮಾನ್ಯರೂ ತಿಳಿದುಕೊಳ್ಳುವ ರೀತಿಯಲ್ಲಿ ವಿವರಿಸಿದ್ದಾರೆ.

ನಾಗರಿಕತೆ ಬೆಳೆದಂತೆ ನಾಗರಿಕ ಜೀವನ ಕ್ರಮಕ್ಕೂ, ಈ ಕಾಯಿಲೆಗೂ ಇರುವ ಸಂಬಂಧವನ್ನು ಲೇಖಕರು ಅನೇಕ ಉದಾಹರಣೆಗಳಿಂದ ಸ್ಪಷ್ಟಪಡಿಸಿದ್ದಾರೆ. ಹಳ್ಳಿ–ಗುಡ್ಡಗಾಡುಗಳ ಜನರ ಆಹಾರಕ್ಕೂ ನಾಗರಿಕತೆಯ ಜೀವನ ಶೈಲಿಯಲ್ಲಿ ನಾವು ಇಂದು ಬಳಸುತ್ತಿರುವ ಆಹಾರಕ್ಕೂ ಇರುವ ವ್ಯತ್ಯಾಸವನ್ನು ವಿವರಿಸಿ ಇಂದಿನ ಆಹಾರ ಈ ಕಾಯಿಲೆಯನ್ನು ಪ್ರಚೋದಿಸುವುದಕ್ಕೆ ಹೇಗೆ ಕಾರಣವಾಗಿದೆ ಎಂಬುದನ್ನು ಹೇಳಿದ್ದಾರೆ. ಇದಲ್ಲದೇ ಈ ಕಾಯಿಲೆಗೆ ಪ್ರಚೋದಕಗಳಾದ ಇತರ ಕಾರಣಗಳ ವಿಚಾರವನ್ನು, 'ಅಪೆಂಡಿಕ್ಸ್'ನ ಇತರ

ಕಾಯಿಲೆಗಳನ್ನು, ಅವು ಹರಡುವ ರೀತಿಯನ್ನು ಮತ್ತು ಅವುಗಳ ನಿವಾರಣೋಪಾಯಗಳನ್ನು ವಿವರಿಸಿದ್ದಾರೆ.

ಉದರ ಬೇನೆಗಳ ವಿಚಾರದಲ್ಲಿ ನಿರಪಾಯಕರ ಮತ್ತು ಸರಳವಾದ ಶಸ್ತ್ರಚಿಕಿತ್ಸೆಯಿಂದಾಗಿ 'ಅಪೆಂಡಿಕ್ಸ್' ಹೇಗೆ ಬಲಿಯಾಗುತ್ತದೆ ಎಂಬುದನ್ನು ತಿಳಿಯಪಡಿಸುತ್ತ ಗುರುತರವಲ್ಲದಿದ್ದರೂ ಇದರಿಂದುಂಟಾಗುವ ಲಘುವಾದ ತೊಡಕುಗಳನ್ನು ಹೇಳಿ ಈ ದಿಸೆಯಲ್ಲಿ ಕೈಕೊಳ್ಳಬೇಕಾದ ಮುಂಜಾಗರೂಕತೆಯನ್ನು ಸೂಚಿಸಿರುವರು.

ಕೊನೆಯಲ್ಲಿ, ಶತಮಾನಗಳವರೆಗೆ ಕಿಬ್ಬೊಟ್ಟೆಯ ನೋವಿಗೆ, ಕೀವಾಗುವುದಕ್ಕೆ ಮೂಗರುಳೇ ಕಾರಣವೆಂದು ಅಪವಾದ ಹೊತ್ತ ಮೂಗರುಳಿಗೆ ಚವತಿಯ ಚಂದ್ರನನ್ನು ನೋಡಿ ಅಪವಾದ ಹೊತ್ತ ಶ್ರೀಕೃಷ್ಣನ ಹೋಲಿಕೆಯನ್ನು ಕೊಟ್ಟು ತಮ್ಮಲ್ಲಿರುವ ಪೌರಾಣಿಕ ಪ್ರಜ್ಞೆಯನ್ನು ಅದರಲ್ಲಿ ಅವರಿಗಿರುವ ಆಸಕ್ತಿಯನ್ನು ವ್ಯಕ್ತಪಡಿಸಿದ್ದಾರೆ. ಕೊನೆಗೆ ಅಲ್ಲಿ ಶ್ರೀಕೃಷ್ಣನೇ ಅಪವಾದ ನಿವಾರಣೆ ಮಾಡಿಕೊಂಡರೆ ಇಲ್ಲಿ ಮೂಗರುಳಿಗೆ ಬಂದ ಅಪವಾದವನ್ನು ವಿಮೋಚನೆ ಮಾಡಲು ವೈದ್ಯವಿಜ್ಞಾನದ ಮುನ್ನಡೆ ನೆರವಿಗೆ ಬಂದಿತು ಎಂದು ಬಹು ಆಕರ್ಷಿತವಾಗಿ ವಿವರಿಸಿ ವೈದ್ಯವಿಜ್ಞಾನದ ಪ್ರಗತಿಯನ್ನು ಎತ್ತಿ ತೋರಿಸಿದ್ದಾರೆ.

ಸಮಗ್ರ ಕೃತಿಯ ಸಾರವು ಸಾಮಾನ್ಯ ಜನರ ತಿಳುವಳಿಕೆಗೆ ಎಟಕುವಂತಿದ್ದು ಈ ಕೃತಿಯು 'ಅಪೆಂಡಿಸೈಟಿಸ್' ಕಾಯಿಲೆಯ ವಿಚಾರದಲ್ಲಿ ಸಾಕಷ್ಟು ತಿಳುವಳಿಕೆ ನೀಡುವ ಮಾರ್ಗದರ್ಶಿಯಂತಿದೆ.

ಶೋಭಾ ಪಾಟೀಲ

* * * * *

ಆಟೋರಿಕ್ಷಾ ಮೆಕಾನಿಸಮ್ ಮತ್ತು ದುರಸ್ತಿ — ಲೇಖಕರು: ಕೆ. ಪಿ. ಸ್ವಾಮಿ (ಇಂಗ್ಲಿಷ್ ಮೂಲ: ಎಸ್. ಶ್ರೀನಿವಾಸನ್); ಪ್ರಕಾಶಕರು: ನವಕರ್ನಾಟಕ ಪಬ್ಲಿಕೇಷನ್ಸ್, ಪ್ರೈವೇಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು–೫೬೦ ೦೦೧; ಪುಟಗಳು: ೨೦೦; ಬೆಲೆ: ರೂ. ೩.೦.

"ಆಟೋರಿಕ್ಷಾ ಯಂತ್ರ ರಚನೆಯನ್ನು (ಮೆಕಾನಿಸಮ್) ಅರಿತುಕೊಳ್ಳುವುದಕ್ಕೆ, ಅವನ್ನು ಹೇಗೆ ಸುಸ್ಥಿತಿಯಲ್ಲಿರಿಸಿಕೊಳ್ಳಬೇಕು, ಹೇಗೆ ದುರಸ್ತಿ ಮಾಡಬೇಕು ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಸಹಾಯಕವಾಗುವ ಉದ್ದೇಶದಿಂದ ಈ ಪುಸ್ತಕವನ್ನು ರಚಿಸಲಾಗಿದೆ" ಎಂಬುದಾಗಿ ಲೇಖಕರು ಮುನ್ನುಡಿಯಲ್ಲಿ ತಿಳಿಸಿದ್ದಾರೆ. ಈ ಪುಸ್ತಕವು ಅವರು ಗುರುತಿಸಿರುವ ಗುರಿಯತ್ತ ಏರುವ ಮೊದಲ ಮೆಟ್ಟಿಲು ಎಂಬ ಕಾರಣಕ್ಕಾಗಿ ಲೇಖಕರ ಪ್ರಯತ್ನವನ್ನು ಶ್ಲಾಘಿಸಬಹುದಾಗಿದೆ. ಬಹುಶಃ ಆಟೋರಿಕ್ಷಾಕ್ಕೆ ಮಾತ್ರ ಸಂಬಂಧಿಸಿದ ವಿಶೇಷ ತಾಂತ್ರಿಕ ಮಾಹಿತಿಗಳನ್ನು, ಅಂಕೆ ಅಂಶಗಳನ್ನು ಒಂದೆಡೆ ಕಲೆಹಾಕಿದ ಕನ್ನಡದ ಮೊದಲ ಪುಸ್ತಕ ಇದಾಗಿರುವುದ

ರಿಂದ ಆಸಕ್ತರಿಗೆ ಇದೊಂದು ಆಕರ ಗ್ರಂಥ ಎಂಬುದು ಇದರ ಹೆಚ್ಚುಗಾರಿಕೆ.

ಆದರೆ ಇದು ಗುರಿಯತ್ತ ಮೊದಲ ಮೆಟ್ಟಿಲು ಮಾತ್ರ. ಎಂದೂ ಗುರಿಯನ್ನು ಸೇರಲಾರದು. ಭಾಷೆ, ಭಾವನೆ, ನಿರೂಪಣೆ ಮೂರೂ ದೃಷ್ಟಿಗಳಿಂದಲೂ ಈ ಪುಸ್ತಕ ಬಹಳಷ್ಟು ತಪ್ಪುಗಳಿಂದಲೂ ತೊಡಕುಗಳಿಂದಲೂ ಕೂಡಿದೆ. "ಸುಲಭ ಶೈಲಿಯಲ್ಲಿ ಬರೆಯಲಾಗಿದೆ" ಎಂದು ಲೇಖಕರು ಹೇಳಿದ್ದಾರೆ. ಸುಲಭ ಎಂದರೆ ಸಡಿಲ ಎಂದು ಅರ್ಥವಲ್ಲ. ಗಹನವಾದದ್ದು ಅರ್ಥವಾದರೆ ಮಾತ್ರ ಅದು ಸುಲಭ ಎನಿಸಬಲ್ಲುದು. ಸ್ವಯಂಚಾಲಿತ ಯಂತ್ರಗಳ ಬಗ್ಗೆ ಪೂರ್ಣ ಮಾಹಿತಿ ಇರುವವರಿಗೆ ಆಸಕ್ತಿಯನ್ನು ಹುಟ್ಟಿಸದ, ಏನೂ ಇಲ್ಲದವರನ್ನು ಇದ್ದಲ್ಲೇ ಇರಿಸಬಲ್ಲ ಅಥವಾ ಕಿರಿದೂರ ಮಾತ್ರ ತರಬಲ್ಲ ಈ ಪುಸ್ತಕವು ತನ್ನ ಆಶಯದಲ್ಲಿ ಸೋತಿದೆ ಎಂದೇ ಹೇಳಬೇಕು.

ಭಾವನೆಗಳ ಮೂರ್ತ ರೂಪ ಭಾಷೆ. ಆಟೋರಿಕ್ಷಾದ ತಲೆಯಿಂದ ಕಾಲಿನ ತನಕ ಇರುವ ಬಹಳಷ್ಟು ತಾಂತ್ರಿಕ ಮಾಹಿತಿಗಳನ್ನು ಓದುಗನ ತಲೆಯಲ್ಲಿ ತುಂಬಬಲ್ಲಷ್ಟು ಸಮರ್ಥವಾಗಿ ಇಲ್ಲಿ ಭಾಷೆ ಬೆಳೆಯಲಿಲ್ಲ. ಹೇಳಬೇಕಾದ್ದನ್ನು ಸ್ವಲ್ಪ ಸ್ವಲ್ಪ ಹೇಳುವುದರಿಂದ ಅದು ಸುಲಭದ ಶೈಲಿ ಎಂದೂ ಅನಿಸುವುದಿಲ್ಲ.

ಇಂಗ್ಲಿಷಿನ ತಾಂತ್ರಿಕ ಪದಗಳನ್ನು ಕನ್ನಡೀಕರಿಸುವುದು ಸಂತೋಷವೆ (ಆದರೆ ಜೊತೆಗೆ ಬ್ರಾಕೆಟಿನಲ್ಲಿ ಮೂಲ ಪದವೂ ಇದ್ದಿದ್ದರೆ ಚೆನ್ನಾಗಿತ್ತು) ಉದಾಹರಣೆಗೆ Lubrication ಎಂಬುದಕ್ಕೆ ನುಣುಪುಗೊಳಿಸುವುದು ಎಂಬುದಾಗಿ ಕನ್ನಡಿಸಲಾಗಿದೆ. ಇಲ್ಲಿ ನುಣುಪುಗೊಳಿಸುವುದು ಎನ್ನುವುದು ತಪ್ಪಲ್ಲವಾದರೂ ಅದು ಕೂಡಲೇ ಕೊಡುವ ಅರ್ಥ Polishing ಎಂಬುದಾಗಿ. Lubricationಗೆ ಸ್ನಿಗ್ಧಗೊಳಿಸುವುದು ಅಥವಾ ಹೆರೆಗೊಳಿಸುವುದು ಎಂಬುದು ಹೆಚ್ಚು ಸಮರ್ಥ ಪದಗಳಾಗಿವೆ. ಕೀಲೆಣ್ಣೆ, ಹೆರೆಯೆಣ್ಣೆ, ಸ್ನೇಹನ ಪದಗಳನ್ನು ಗಮನಿಸಬಹುದು.

ಎಂಜಿನ್ನು ಕೆಲಸಮಾಡುವ ಹಂತಗಳ ಬಗ್ಗೆ, ಪಿಸ್ಟನ್, ಸಿಲಿಂಡರ್, ರಿಂಗ್, ಕ್ರಾಂಕ್ ಇತ್ಯಾದಿಗಳ ಹಿಂದಿನ ವಿಜ್ಞಾನ ವಿವರಣೆ ಪಕ್ವವಾಗಿಲ್ಲ. ಅದಿಲ್ಲದೆ ಒಂದು ಯಂತ್ರವನ್ನು ಪುಸ್ತಕ ಓದಿ ಕಲಿಯುವುದು ಸಾಧ್ಯವಾಗಲಾರದು.

ಪುಟ ೧೭ರಲ್ಲಿ ಚಿತ್ರ ೧೩ ಮತ್ತು ೧೪ ವಿವರಣೆಗೆ ಪೂರಕವಾಗಿಲ್ಲ. ಚಿತ್ರ ೧೪ರಲ್ಲಿ ಬಾಣದ ಗುರುತು ಹಾಗೂ ಸ್ಪಾರ್ಕ್ ಎರಡು ಪರಸ್ಪರ ವಿರುದ್ಧ ಕ್ರಿಯೆಗಳ ಸಮಾಗಮವಾಗಿವೆ.

ಪುಟ ೧೮ ಮತ್ತು ೧೯ರಲ್ಲಿ ಸಿಲಿಂಡರ್ ಬ್ಲಾಕಿನ ಮೇಲಿರುವ ಗರಿಗಳು (ಫಿನ್ಸ್) ತಂಪುಗೊಳಿಸುವುದಕ್ಕಾಗಿ ಇವೆ ಎನ್ನುವುದು ಪುನರಾವರ್ತನೆಗೊಳ್ಳುವ ಅಗತ್ಯ ಇರಲಿಲ್ಲ.

ಚಿತ್ರ ಹಾಗೂ ವಿವರಣೆಗಳು ಕೆಲವೊಂದು ಸಂದರ್ಭಗಳಲ್ಲಿ ಒಂದೇ ಪುಟದಲ್ಲಿ ಇಲ್ಲದಿರುವುದೂ ಒಂದು ತೊಡಕು.

ಪುಟ ೨೧ರಲ್ಲಿ ಎಂಜಿನನ್ನು ಕಳಚುವ ಹೆಜ್ಜೆಗಳನ್ನು ಹೇಳಲಾಗಿದೆ. ಆ ಮೇಲೆ ಪುಟ ೨೨ರಲ್ಲಿ ಸಿಲಿಂಡರಿನೊಳಗಿನ ಒತ್ತಡವನ್ನು ಅಳತೆಮಾಡುವ ಬಗ್ಗೆ ವಿವರಿಸಲಾಗಿದೆ. ಸಿಲಿಂಡರನ್ನು ಬಿಚ್ಚಿ ಅದಮೇಲೆ

ಒತ್ತಡ ಅಳೆಯುವ ಪ್ರಶ್ನೆಯೇ ಉದ್ಭವಿಸುವುದಿಲ್ಲವಲ್ಲಾ.

ಪುಟ ೨೩ ರಲ್ಲಿ ಒತ್ತಡವನ್ನು ೫.೫ ಕಿಲೋಗ್ರಾಂ ಒಂದು ಚದರ ಸೆಂಟಿಮೀಟರಿನಿಂದ ಎಂದು ನಮೂದಿಸಿದ್ದಾರೆ. ಈ ವಾಕ್ಯ ಯಾವ ಅರ್ಥವನ್ನೂ ಪಸರಿಸುವುದಿಲ್ಲ. ಇದು ಹೀಗಾಗಬೇಕು—"ಒಂದು ಚದರ ಸೆಂಟಿಮೀಟರಿನಲ್ಲಿ ೫.೫ ಕಿಲೋಗ್ರಾಂ ಒತ್ತಡ" (೫.೫ ಕಿಲೋಗ್ರಾಂ/ಚದರಸೆಂಟಿಮೀಟರ್)

ಪುಟ ೫೪ ರಲ್ಲಿ ಗೇರ್ ಎಣ್ಣೆ ಎಸ್. ಎ. ಇ. 30 ಎಂದು ಸೂಚಿಸಿದ್ದಾರೆ. ಇದು ಎಸ್. ಎ. ಇ. ೯೦ ಆಗಬೇಕು.

ಒಟ್ಟಿನಲ್ಲಿ ಆಟೋರಿಕ್ಷವನ್ನು ನಿಜವಾಗಿಯೂ ಸ್ವಂತ ಕೈಗಳಿಂದ ಬಿಚ್ಚಿದ ಪ್ರಾಯೋಗಿಕ ಅನುಭವ ಈ ಪುಸ್ತಕದಲ್ಲಿ ವ್ಯಕ್ತವಾಗುವುದಿಲ್ಲ. ಯಂತ್ರ ಭಾಗಗಳ ಬಿಚ್ಚುವ ಹೆಜ್ಜೆಗಳನ್ನು ಪಟ್ಟಿ ಮಾಡುವುದರಿಂದ ಪರೀಕ್ಷೆಯಲ್ಲಿ ಮಾರ್ಕ್ ತೆಗೆಯಲು ಬಂದೀತೇ ಹೊರತು ರಿಪೇರಿ ಬರಲಾರದು. ಬಿಚ್ಚುವ ಮತ್ತು ಕಟ್ಟುವ ಸಂದರ್ಭಗಳಲ್ಲಿ ಕೆಲವು ಸರಳವಾದ ಆದರೆ ಸೂಕ್ಷ್ಮವಾದ ಅನುಭವಗಳು ಬಹಳ ಮಹತ್ವ ಪಡೆಯುತ್ತವೆ. ಇಂಥಾ ಅನುಭವಗಳ ಧಾರೆಯೂ ಈ ಪುಸ್ತಕದೊಳಗಿಲ್ಲ. ಹಾಗೆಯೇ ಸ್ವಯಂಚಾಲಿತ ಯಂತ್ರಗಳ ಗಹನ ತತ್ವಗಳನ್ನು ಅರ್ಥವಿಸಿಕೊಂಡು ಅದ್ವಿತೀಯವಾದ ಆನಂದವನ್ನು ಅನುಭವಿಸುವ ಅವಕಾಶವೂ ಇಲ್ಲ. ಪ್ರಾಕ್ಟಿಕಲ್ ಹಾಗೂ ಥಿಯರಿ ಎರಡರಲ್ಲೂ ಸೋತಿರುವ ಪರೀಕ್ಷೆಗಾಗಿಯೇ ತಯಾರಾಗಿರುವ ನಮ್ಮ ದೇಶದ ಅನೇಕಾನೇಕ ಪುಸ್ತಕಗಳ ಪೈಕಿ ಇದೂ ಒಂದು.

ಎ. ಪಿ. ಚಂದ್ರಶೇಖರ



ಅಸ್ಪೃಶ್ಯತೆ ಒಂದು ಪಾಪ, ಘೋರ ಅಪರಾಧ.

ಪ್ರಪಂಚಕ್ಕೆ ಹೊಸದಾಗಿ ಹೇಳಲು ನನ್ನಲ್ಲಿ ಏನೂ ಇಲ್ಲ. ಸತ್ಯ ಮತ್ತು ಅಹಿಂಸೆಗಳು ಪರ್ವತಗಳಷ್ಟೆ ಹಳೆಯವು.

—ಗಾಂಧೀಜಿ

ಈ ಸಂಚಿಕೆಯ ಲೇಖಕರು—

ಸರ್ವಶ್ರೀಗಳಾದ—

೧. ಜಿ. ಟಿ. ನಾರಾಯಣರಾವ್
ನಂ. ೮, 'ಅತ್ರಿ' ಕಾಮಾಕ್ಷಿ ಆಸ್ಪತ್ರೆ ರಸ್ತೆ,
ಸರಸ್ವತೀಪುರ
ಮೈಸೂರು–೫೭೦ ೦೦೯

೨. ಟಿ. ಎಸ್. ಲಲಿತ
ನಂ. ೭೦೨, ಮೊದಲನೆ ಮಹಡಿ
೧೭ ನೇ ಮೇನ್, ಸರಸ್ವತೀಪುರ
ಮೈಸೂರು–೫೭೦ ೦೦೯

೩. ಪಿ. ಎಸ್. ಅಂಬಿಕ
W/o ಪಡಾರು ನಾರಾಯಣ ಭಟ್
ಪಡಾರು ಗೃಹ
ಕೊಳನಾಡು ಅಂಚೆ, ವಯಾ ಮಂಚಿ, ದ. ಕ. ಜಿಲ್ಲೆ–೫೭೪೩೨೩

೪. ಎಂ. ಎಸ್. ಲಕ್ಷ್ಮಣಾಚಾರ್
೨೫೪, ವಿಶ್ವರೂಪ (ಮಹಡಿ)
೫ನೇ ಮುಖ್ಯ ರಸ್ತೆ, ೧೪ನೇ ಅಡ್ಡ ರಸ್ತೆ
ಜಯನಗರ, ಮೈಸೂರು–೫೭೦ ೦೧೪

೫. ಗ. ನಾ. ಭಟ್ಟ
ಶ್ರೀ ಕಾವೇರಿ ಶಾಲೆ, ಆದಿಚುಂಚನಗಿರಿ ರಸ್ತೆ
ಕೆ. ಬ್ಲಾಕ್, ಕುವೆಂಪುನಗರ
ಮೈಸೂರು–೫೭೦ ೦೨೩

೬. ಜಿ. ಟಿ. ರಾಘವೇಂದ್ರ
'ದ್ವಾರಕಾ'
ಶಾಲಾ ರಸ್ತೆ, ಮಡಿಕೇರಿ–೫೭೧೨೦೧

೭. ಎಂ. ಜಯಂತಿಬಾಯಿ
ಎಂ.ಐ.ಜಿ. ೮೩೬, "ಮಾತೃಛಾಯಾ"
ಎಂ. ಬ್ಲಾಕ್ (ಸಿ.ಐ.ಟಿ.ಬಿ. ಕಾಂಪ್ಲೆಕ್ಸ್ ಬಳಿ)
ಕುವೆಂಪುನಗರ, ಮೈಸೂರು–೫೭೦೦೨೩

೮. ಸಾತನೂರು ದೇವರಾಜ್
೯೯೨, ೯ನೇ ಮುಖ್ಯರಸ್ತೆ
ಮೊದಲನೆಯ ಅಡ್ಡ ರಸ್ತೆ, ವಿವೇಕಾನಂದ ನಗರ
ಮೈಸೂರು–೫೭೦೦೦೭

೯. ಬಿ. ಆರ್. ಪರಿಣೀತ
೫೬೧, ೩ನೇ ಮುಖ್ಯ ರಸ್ತೆ
'ಎ' ಬ್ಲಾಕ್, ೨ನೇ ಹಂತ
ರಾಜಾಜಿನಗರ, ಬೆಂಗಳೂರು–೫೬೦೦೧೦

೧೦. ಎಚ್. ಆರ್. ಚಂದ್ರವದನರಾವ್
೨೮೭೭/೧೦, ೬ನೇ ತಿರುವು
ಚಾಮುಂಡಿಪುರಂ
ಮೈಸೂರು–೫೭೦ ೦೦೪

೧೧. ಸುಧಾ ಹರೀಶ್
ನಂ. ೧೯೮/೧೯೯, ಸಿಂಹ ಕಾಟೇಜ್, ೨ನೇ ಕ್ರಾಸ್
೨ನೇ ಸ್ಟೇಜ್, ಗೋಕುಲಂ, ಮೈಸೂರು–೫೭೦ ೦೦೨


೧೨. ಡಾ|| ಕರವೀರಪ್ರಭು ಕ್ಯಾಲಕೊಂಡ, ವೈದ್ಯಾಧಿಕಾರಿ
೨೦೩, ಶಸ್ತ್ರಚಿಕಿತ್ಸಾ ವಿಭಾಗ, ಕೆ.ಎಂ.ಸಿ. ಆಸ್ಪತ್ರೆ
ಹುಬ್ಬಳ್ಳಿ–೫೮೦೦೨೨

೧೩. ಶೋಭಾ ಪಾಟೀಲ
೭ ನೇ ಅಡ್ಡರಸ್ತೆ, ನವಿಲು ರಸ್ತೆ, ಕುವೆಂಪುನಗರ
ಮೈಸೂರು–೫೭೦ ೦೨೩

೧೪. ಎ. ಪಿ. ಚಂದ್ರಶೇಖರ
'ಇಂದ್ರಪ್ರಸ್ಥ' ಸಾವಯುವ ಫಾರ್ಮ್ ಮತ್ತು ನರ್ಸರಿ
ಕಳಲವಾಡಿಗ್ರಾಮ, ಉದ್ಬೂರು ಅಂಚೆ
ಮೈಸೂರು–೫೭೦ ೦೦೭

Reg. No. KRNN.29 / WPP 6

LICENCE No. 21
LICENCED TO POST WITH PAYMENT



Edited by Chandrashekhararadhya, Printed by M. Krishnappa
Printed & Published by Karnataka State Adult Education Council,
5/1, Vinoba Road, Manasa Gangothri, Mysore-570 006.

Phone : 512485